SAPTHAGIRI (KANNADA)
SPIRITUAL ILLUSTRATED MONTHLY
Volume:04, Issue: 3 Pages:56
October - 2024, Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ
ಅಕ್ಟೋಬರ್ 2024
ಬೆಲೆ ರೂ. 20/-




ತಿರುಮಲೆ

## ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳು

04-10-2024 ರಿಂದ 12-10-2024 ರ ವರೆಗೆ

ಸ್ವಾಮಿಯವರ ಗರುಡವಾಹನ - 08-10-2024



ತಿರುಮಲ ತಿರುಪತಿ ದೇವಸ್ಥಾನಗಳು

ತಿರುಮಲ ಶ್ರೀವೆಂಕಟೇಶ್ವರ ಸ್ವಾಮಿಯವರ

ವಾರ್ಷಿಕ ಬ್ರಹ್ಮೋತ್ಸವಗಳು

04-10-2024 ರಿಂದ 12-10-2024 ರ ವರೆಗೆ

| ದಿನಾಂಕ | ವಾರ | ಹಗಲು | ರಾತ್ರಿ |
|---|---|---|---|
| 03-10-2024 | ಗುರುವಾರ | ------------------- | ಅಂಕುರಾರ್ಪಣೆ |
| 04-10-2024 | ಶುಕ್ರವಾರ | ಬಂಗಾರು ತಿರುಚ್ಚಿ ಉತ್ಸವ, ಧ್ವಜಾರೋಹಣ | ದೊಡ್ಡಶೇಷವಾಹನ |
| 05-10-2024 | ಶನಿವಾರ | ಚಿಕ್ಕಶೇಷವಾಹನ | ಹಂಸವಾಹನ |
| 06-10-2024 | ಭಾನುವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 07-10-2024 | ಸೋಮವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 08-10-2024 | ಮಂಗಳವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 09-10-2024 | ಬುಧವಾರ | ಹನುಮದ್ವಾಹನ | ಗಜವಾಹನ |
| 10-10-2024 | ಗುರುವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 11-10-2024 | ಶುಕ್ರವಾರ | ಸ್ವರ್ಣರಥೋತ್ಸವ | ಅಶ್ವವಾಹನ |
| 12-10-2024 | ಶನಿವಾರ | ಚಕ್ರಸ್ನಾನ | ಧ್ವಜಾವರೋಹಣ |



# ಭಗವದ್ಗೀತೆ

ನ ಜಾಯತೇ ಮ್ರಿಯತೇ ವಾ ಕದಾಚಿತ್

ನಾಯಂ ಭೂತ್ವಾ ಭವಿತಾ ವಾ ನ ಭೂಯಃ।

ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ

ನ ಹನ್ಯತೇ ಹನ್ಯಮಾನೇ ಶರೀರೇ ॥

ಇವನು ಎಂದಿಗೂ ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ, ಇವನು ಮೊದಲು ಇದ್ದವನೆನೆಸಿಕೊಂಡು ಮತ್ತೆ ಇಲ್ಲದವನೂ ಆಗುವುದಿಲ್ಲ. ಇವನು ಭಗವಂತನಂತೆಯೆ ಹುಟ್ಟಿಲ್ಲದವನು, ಸಾವಿಲ್ಲದವನು, ಬದಲಾವಣೆಗೊಳ್ಳದವನು. ಈ ಜೀವ ದೇಹದೊಳಗಿದ್ದೂ ದೇಹ ನಾಶವಾದಾಗ ಅವನು ಸಾಯಲಾರ

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -20)

ಬಾರಯ್ಯ ವೆಂಕಟರಮಣ । ಭಕ್ತರ ನಿಧಿಯೆ ॥ಪ॥

ತೋರೋ ನಿನ್ನ ದಯೆ । ತೋಯಜಾಂಬಕ ನೇ ॥ಅ.ಪ.॥

ವೇದಗೋಚರ ಬಾರೋ । ಆದಿ ಕಚ್ಛಪ ಬಾರೋ ॥

ಮೋದ ಸೂಕರ ಬಾರೋ । ಸದಯ ನರಸಿಂಹ ಬಾರೋ॥1॥


ವಾಮನ ಭಾರ್ಗವ ಬಾರೋ । ರಾಮಕೃಷ್ಣನೆ ಬಾರೋ ॥

ಪ್ರೇಮದ ಬುದ್ಧನೆ ಬಾರೋ । ಸ್ವಾಮಿ ಕಲ್ಕಿ ನೀ ಬಾರೋ ॥2॥

ಅರವಿಂದನಾಭ ಬಾರೋ । ಸುರರ ಪ್ರಭುವೆ ಬಾರೋ ॥

ಪುರಹೂತ ವಂದ್ಯ ಬಾರೋ । ಪುರಂದರವಿಠ್ಠಲ ಬಾರೋ ॥3॥

- ಶ್ರೀ ಪುರಂದರದಾಸರು



(ಹತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ವಿಕ್ಷೇಪಮರ್ಹಸಿ ದಯೇ ವಿಫಲಾಯಿತೇಽಪಿ ವ್ಯಾಜಂ ವಿಭಾವ್ಯ ವೃಷಶೈಲಪತೇರ್ವಿಹಾರಮ್।**

**ಸ್ವಾಧೀನಸತ್ತ್ವ ಸರಣೆಃ ಸ್ವಯಮತ್ರಜಂತೌ ದ್ರಾಘೀಯಸೀ ದೃಢತರಾ ಗುಣವಾಗುರಾ ತ್ವಮ್ ॥95॥**

ಹಿಂದಿನ ಪದ್ಯದಲ್ಲಿ ಆಚಾರ್ಯರು ಭಗವಂತನ ವಿಷಯವಾಗಿ ತನ್ನಲ್ಲಿರುವ ವಿರೋಧ ವೃತ್ತಿಯನ್ನು ತಡೆಗಟ್ಟಬೇಕೆಂದು ದಯಾದೇವಿಯನ್ನು ಪ್ರಾರ್ಥಿಸುತ್ತಾ ನುಡಿದಂತೆ ನಡೆಯದೇ ಇರುವಂತಹ ಪಾಪವು ತನ್ನಿಂದ ಘಟಿಸದೇ ಇರಲೆಂಬ ಆಶೆಯನ್ನು ವ್ಯಕ್ತ ಪಡಿಸಿದ್ದರಷ್ಟೆ. ಈ ಪದ್ಯದಲ್ಲಿ ಅವರು ತನ್ನ ಮೇಲೆ ದಯಾದೇವಿಯ ಕಟಾಕ್ಷವು ಅಗತ್ಯವಾಗಿ ಇದ್ದೇ ಇರುತ್ತದೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಭಗವಂತನು ಬೇರೆ ಬೇರೆ ಸಮಯಗಳಲ್ಲಿ ಆಯಾ ಸಮಯಕ್ಕೆ ಮತ್ತು ಪರಿಸ್ಥಿತಿಗೆ ತಕ್ಕಂತೆ ಬೇರೆ ಬೇರೆ ಅವತಾರಗಳನ್ನೆತ್ತಿ ಲೋಕೋಪಕಾರ ಮಾಡುತ್ತಿರುತ್ತಾನೆಂಬುದು ವಿಶದವಾಗಿ ಹಿಂದಿನ ದಶಕದಲ್ಲಿ ವರ್ಣಿಸಲ್ಪಟ್ಟಿದೆಯಷ್ಟೆ.ಆ ಅವತಾರಗಳೆಲ್ಲ ಭಗವಂತನ ಲೀಲೆಗಳು ಸ್ಪಷ್ಟವಾಗಿದ್ದರೂ ಕೂಡ ತನ್ನಂತಹ ನೀಚನು ಆ ಲೀಲೆಗಳನ್ನೆಲ್ಲ ಕೇವಲ ವ್ಯಾಜ ಅಥವಾ ಕಪಟವೆಂದೇ ಭಾವಿಸಿಕೊಂಡು ಭಗವಂತನ ವಿಷಯದಲ್ಲಿ ಅಪರಾಧವನ್ನೆಸಗುತ್ತೇನೆಂದು ಹೇಳುತ್ತಾರೆ. ಈ ರೀತಿ ಅಪರಾಧವೆಸಗುವುದು ಮಿಥ್ಯಾಜ್ಞಾನವಿರುವುದರಿಂದ.ಈ ಮಿಥ್ಯಾಜ್ಞಾನದ ಪರಿಣಾಮವಾಗಿ ತಾನು ಭಗವಂತನಿಂದ ದೂರ ದೂರ ಸರಿಯುತ್ತಿದ್ದೇನೆಂದೂ ಜೀವನದ ಮುಖ್ಯೋದ್ದೇಶದಲ್ಲಿ ಸಫಲನಾಗುತ್ತಿಲ್ಲವೆಂದೂ ತಮ್ಮ ವ್ಯಸನವನ್ನು ವ್ಯಕ್ತಪಡಿಸುತ್ತಾರೆ. ಜೀವ ಜಂತುಗಳಲ್ಲೆಲ್ಲಾ ಮನುಷ್ಯನ ಜನ್ಮಶ್ರೇಷ್ಠವಾದದ್ದೆಂದೂ,ಈ ಮನುಷ್ಯಜನ್ಮದಲ್ಲಿ ಜೀವನು ಭಗವಂತನ ಅತ್ಯಂತ ಸಮೀಪಕ್ಕೆ ಹೋಗುವ ಪ್ರಯತ್ನವನ್ನು ಮಾಡಬೇಕೆಂದೂ,ಮನುಷ್ಯಜನ್ಮದ ಹಂತಕ್ಕೆ ಮುಟ್ಟಿದ ಮೇಲೂ ಕೂಡ ಪುನಃ ಅನೇಕ ಜನ್ಮಗಳನ್ನೆತ್ತಿ ಕೊನೆಗೆ ಜ್ಞಾನಿಯಾಗಿ ಭಗವಂತನ ಸಾಮೀಪ್ಯವನ್ನು ಜೀವನು ಪಡೆಯುತ್ತಾನೆಂದು ಶಾಸ್ತ್ರಗಳು ಸಾರುತ್ತವೆಯಲ್ಲವೆ! ಸಾಕ್ಷಾತ್ ಭಗವಂತನು ಕೂಡ ಇದೇ ಮಾತನ್ನೇ ಅರ್ಜುನನಿಗೆ ಉಪದೇಶಿಸುತ್ತಾ 'ಬಹಾನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ' ಎಂದು ಹೇಳಿಲ್ಲವೆ? ಆದ್ದರಿಂದಲೇ ಜ್ಞಾನಿಯಾಗಿ ಭಗವಂತನಿಗೆ ಹೆಚ್ಚು ಹೆಚ್ಚು ಸಮೀಪಕ್ಕೆ ಹೋಗದೇ ಮಿಥ್ಯಾಜ್ಞಾನವುಳ್ಳವನಾಗಿ ಅವನಿಂದ ವಿಮುಖನಾಗುತ್ತಿದ್ದೇನೆಲ್ಲಾ ಎಂಬುದೇ ಆಚಾರ್ಯರ ದುಃಖಕ್ಕೆ ಕಾರಣ.

ಹೀಗಿದ್ದರೂ ಕೂಡ ತಾನು ಪ್ರಪನ್ನನಾದುದರಿಂದ ಭಗವಂತನಲ್ಲಿ ಸಂಪೂರ್ಣವಾಗಿ ಶರಣಾಗತನಾಗಿರುವುದರಿಂದ,ಅವನ ಕೃಪಾಕಟಾಕ್ಷವು ತನ್ನ ಮೇಲೆ ಇದ್ದೇ ಇರುತ್ತದೆಂಬುದಾಗಿ ಆಚಾರ್ಯರು ಸ್ಪಷ್ಟಪಡಿಸಿದ್ದಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಕ್ರೋಧಿನಾಮ ಸಂವತ್ಸರ ಭಾದ್ರಪದ - ಆಶ್ವಯುಜ ಮಾಸ ಸಂಚಿಕೆ

ಸಂಪುಟ : 04 ಅಕ್ಟೋಬರ್ - 2024 ಸಂಚಿಕೆ : 03



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಜೆ. ಶ್ಯಾಮಲ ರಾವ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.,

**ಸಂಪಾದಕರು**
ಡಾ॥ವಿ. ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ . ಪಿ. ರಾಮರಾಜು , ಎಮ್.ಎ.,
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು,
ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ., ಪ್ರೆಸ್,
2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ತಿರುಮಲೆ ಬ್ರಹ್ಮೋತ್ಸವ ಮತ್ತು ಕರ್ನಾಟಕ ಹರಿದಾಸರು | - ಡಾ॥ ಎಸ್. ನಂಜುಂಡ ಸ್ವಾಮಿ | 07 |
| ಮೈಸೂರು ದಸರಾ ಎಷ್ಟೊಂದು ಸುಂದರ | - ಡಾ॥ ಕೆ.ವಿ.ರಾಜೇಶ್ವರಿ | 10 |
| ಹರಿದಾಸರ ಕೃತಿಗಳಲ್ಲಿ ಶ್ರೀನಿವಾಸನ ವೈಭವ | - ಡಾ॥ ಲಕ್ಷ್ಮೀಕ್ರಾಂತ ವಿ. ಮೋಹರೀರ | 12 |
| ತೆಲುಗು ಕವಿಗಳು ಕಂಡ ಶ್ರೀನಿವಾಸ | - ಗೋನವಾರ ಕಿಶನ್‌ರಾವ್ | 15 |
| ಪುರಂದರದಾಸರು ಕಂಡರಿಸಿದ ಶ್ರೀನಿವಾಸ | - ಡಾ॥ ಹರಿಹರ ಶ್ರೀನಿವಾಸರಾವ್ | 17 |
| ಶ್ರೀ ತ್ಯಾಗರಾಜರು ಮತ್ತು ಮುತ್ತುಸ್ವಾಮಿ ದೀಕ್ಷಿತರು ಕಂಡಂತೆ ಸಪ್ತಗಿರಿವಾಸ ಶ್ರೀನಿವಾಸ | -ಶ್ರೀಮತಿ. ವಿಜಯಕುಮಾರಿ | 19 |
| ಹಸೆಗೆ ಬಾರಯ್ಯ ಹದಿನಾಲ್ಕು ಲೋಕದೊಡೆಯ | - ಎಂ.ಎ. ಭರತ್ | 21 |
| ದೊಡ್ಡಬಳ್ಳಾಪುರದ ಶ್ರೀ ವೆಂಕಟೇಶ್ವರ ದೇವಾಲಯ | - ಕೆಂಗೇರಿ ಚಕ್ರಪಾಣಿ | 23 |
| ಅಹಲ್ಯೆಯನ್ನು ನಿತ್ಯ ಸ್ಮರಿಸಿದರೆ ಮಹಾಪಾತಕನಾಶನಂ | - ಹನುಮಂತ ಮ. ದೇಶಕುಲಕರ್ಣಿ | 26 |
| ನವರಾತ್ರಿ ದುರ್ಗಾಷ್ಟಮಿ | - ಮನೋಹರ ಜೋಶಿ | 31 |
| ಅಲಿಪಿರಿಯಲ್ಲಿರುವ ಪಾದಮಂಟಪ | - ಶ್ರೀಮತಿ. ಎಸ್. ಸುರೇಖ | 33 |
| ಭಕ್ತರಿಗೆ ಅಭಯ ನೀಡುವ ಹುಲುಗಿನ ಮರಡಿ ವೆಂಕಟರಮಣ | - ಎ.ಆರ್.ಗಿರಿಧರ | 36 |
| ದಾಸರು ಕಂಡಂತಹ ತಿರುಪತಿ ಬ್ರಹ್ಮೋತ್ಸವ | - ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 38 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 42 |
| ಶ್ರೀವೆಂಕಟಾಚಲ ಮಹಾತ್ಮೆ | - ಶ್ರೀಮತಿ. ಎನ್.ಪಾರ್ವತಿ | 44 |
| ರಾಶಿಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ -ಸ್ನೇಹ ಬಯಸಿದವರಿಗೆ ಮೋಸ ಮಾಡಬಾರದು | - ಎ.ಆರ್.ರಘುರಾಮ | 48 |
| ಚಿತ್ರಕಥೆ- ಗರುಡನ ಗರ್ವಭಂಗ | - ವಿ. ನಾಗವಲ್ಲಿ | 52 |

ಮುಖಚಿತ್ರ - ಮಲೆಯಪ್ಪಸ್ವಾಮಿಯವರ ಗರುಡವಾಹನಸೇವೆ, ತಿರುಮಲೆ
ಹಿಂಬದಿಚಿತ್ರ - ಚಕ್ರಸ್ನಾನ , ತಿರುಮಲೆ

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

# ಬ್ರಹ್ಮಾಂಡನಾಯಕನ ಬ್ರಹ್ಮೋತ್ಸವಕ್ಕೆ ಸ್ವಾಗತ

"ದೇವಾದಿದೇವನಾದ ಶ್ರೀವೇಂಕಟೇಶ್ವರನ ಬ್ರಹ್ಮೋತ್ಸವದಲ್ಲಿ ಭಾಗವಹಿಸಿ, ಭಕ್ತಿಪ್ರಪತ್ತಿಗಳನ್ನು ಸಾರುತ್ತಾ ಆತನ ದರ್ಶನೋತ್ಸಾಹದಿಂದ ಧನ್ಯರಾಗಿ" ಎನ್ನುತ್ತಾ ಗರುಡನು ದೇಶವಿದೇಶಗಳ ಪ್ರಜೆಗಳೆಲ್ಲರಿಗೂ, ಮಕ್ಕಳಿಂದ ಹಿಡಿದು ಮುದುಕರವರೆಗೂ ಶ್ರೀವೇಂಕಟೇಶ್ವರಸ್ವಾಮಿಯ ಬ್ರಹ್ಮೋತ್ಸವಕ್ಕೆ ಬನ್ನಿ!ಬನ್ನಿ!! ಎನ್ನುತ್ತಾ ಆಹ್ವಾನಿಸುತ್ತಿದ್ದಾನೆ. ಆ ಕರೆಯಮೇರೆಗೆ ದೇಶವಿದೇಶಗಳಿಂದಲೂ ಎಲ್ಲರೂ ಬ್ರಹ್ಮೋತ್ಸವ ವೈಭವವನ್ನು ಪ್ರತ್ಯಕ್ಷವಾಗಿ ವೀಕ್ಷಿಸಿ ಕಣ್ತುಂಬಿಕೊಳ್ಳಬೇಕೆಂಬ ಕಾತುರದಿಂದ ಭಕ್ತಿ ಪೂರ್ವಕವಾಗಿ ಓಡೋಡಿ ಬರುತ್ತಾರೆ.

ಆ ರೀತಿ ಬರುವ ಸಮಸ್ತ ಜನತೆ ಮೊದಲು ಅಲಿಪಿರಿಯಲ್ಲಿನ ಗರುಡನ ವಿಗ್ರಹಕ್ಕೆ ನಮಸ್ಕರಿಸಿ ವಿವಿಧ ವಾಹನಗಳಲ್ಲಿ ಹೊರಡುತ್ತಾರೆ. ಎಷ್ಟು ರೀತಿಯ ವಾಹನಗಳೋ... ಅದರ ವರ್ಣನೆಯನ್ನು ಕಣ್ಣುಗಳಿಂದ ನೋಡಬೇಕಾದ್ದೇ! ಆ ವಾಹನಗಳ ಶಬ್ದವೂ ಇಲ್ಲಿ ಕಿವಿಗೆ ಇಂಪಾಗಿರುತ್ತವೆ. ಏಕೆಂದರೆ ಸ್ವಾಮಿಯ ವಾಹನಸೇವೆಯ ದರ್ಶನಕ್ಕೆ ಹೊರಟಿವೆಯಲ್ಲವೆ? ಆ ಆನಂದದಲ್ಲಿ ತೇಲಾಡುತ್ತಿರುವೇಯಲ್ಲವೇ? ಶಬ್ದಕಾಲುಷ್ಯವನ್ನೂ ಗುರುತಿಸಲಾಗದ ತನ್ಮಯತೆಯಲ್ಲಿ ಇರುತ್ತೇವಲ್ಲವೇ? ಆ ರೀತಿ ಪ್ರಯಾಣವನ್ನು ಮುಂದುವರೆಸುತ್ತಾ ಗೋವಿಂದನಾಮಸ್ಮರಣೆಯೊಂದಿಗೆ ಆಶೇಷ ಜನವಾಹಿನಿ ಹೊರಡುತ್ತಾರೆ. ಆ ದೃಶ್ಯಗಳೆಲ್ಲವೂ ಕಣ್ಣಿಗೆ ಹಬ್ಬವನ್ನು ಉಂಟು ಮಾಡುತ್ತದೆ. ಆ ರೀತಿ ಹೊರಟು ಬೆಟ್ಟವನ್ನು ತಲುಪಿ ಅಲ್ಲಿ ಹೆಜ್ಜೆ ಇರಿಸುತ್ತಲೇ ಅಲ್ಲಿಯವರೆಗೂ ಪ್ರಯಾಣಿಸಿದ ಆಯಾಸ, ಆತಂಕ,ಪ್ರಯಾಣದ ಬಳಲಿಕೆ ಎಲ್ಲಿ ಮಾಯವಾಗುತ್ತದೋ ತಿಳಿಯದು. ಆ ಆಯಾಸವನ್ನೆಲ್ಲಾ ಮರೆಸುವಂತಹಾ ಸೌಂದರ್ಯವೇ ತಿರುಮಲೆಯ ಅಂದ. ಇಲ್ಲಿ ಮನಸ್ಸು ಹಾಯಾಗಿ ಬೆಟ್ಟದ ಗಾಳಿಯನ್ನು ಸೇವಿಸುವುದರಿಂದ ಹೃದಯ ಹಗುರವಾಗುತ್ತದೆ. ಅದರೊಂದಿಗೆ ಮಧುರವಾದ ತನ್ಮಯತೆಯೊಂದಿಗೆ ಎಲ್ಲರ ಮನಸ್ಸು ಶರೀರ ಪುಳಕಿತಗೊಳ್ಳುತ್ತದೆ.

ಇನ್ನು ಬೆಟ್ಟದ ಮೇಲೆ ಎಲ್ಲಿ ನೋಡಿದರೂ ಗೋವಿಂದ ನಾಮಸ್ಮರಣೆಯೇ ಕೇಳಿ ಬರುತ್ತದೆ. ಭಕ್ತರ ಕೋಲಾಹಲ! ನಾದನೀರಾಜನದ ಆಸ್ಥಾನ ಮಂಟಪದಲ್ಲಿ ಸುಶ್ರಾವ್ಯವಾದ ಆಧ್ಯಾತ್ಮಿಕ, ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮಗಳ ಭರಾಟೆ, ಅನ್ನ ಪ್ರಸಾದ ವಿತರಣೆಯ ಶಾಲೆಯಲ್ಲಿ ಸುವಾಸನಾಭರಿತವಾದ ಅಡುಗೆ, ಫಲಪುಷ್ಪಪ್ರದರ್ಶನ ಶಾಲೆಯಲ್ಲಿ ಪರಿಮಳವನ್ನು ಹೊರಸೂಸುತ್ತಾ ಅರಳಿ ನಿಂತಿರುವ ಪುಷ್ಪಗಳು, ನಾಲಕ್ಕೂ ಭಾಗದ ಸನ್ನಿಧಿ ಬೀದಿಗಳಲ್ಲಿ ಸ್ವಾಮಿಯು ದಿನಕ್ಕೊಂದು ವಾಹನಸೇವೆಯಲ್ಲಿ, ದಿನಕ್ಕೊಂದು ಬಗೆಯ ಅಲಂಕಾರಗಳೊಂದಿಗೆ ವಿರಾಜಮಾನನಾಗಿ ಮೆರವಣಿಗೆ ಬರುವ ದೃಶ್ಯಗಳು, ವಾಹನಸೇವೆಯಲ್ಲಿ ಭಜನ ಮಂಡಳಿಗಳು, ಕೋಲಾಟ, ಪ್ರಬಂಧಗೋಷ್ಠಿ, ಮಂಗಳವಾದ್ಯ ಘೋಷಗಳು...ಅಬ್ಬಬ್ಬಾ ಒಂದೇ, ಎರಡೇ? ಇಂತಹಾ ಅದ್ಭುತವಾದ ದೃಶ್ಯಗಳನ್ನು ಕಣ್ಣಾರೆ ನೋಡುವವರದೇ ಭಾಗ್ಯ! ಈ ರೀತಿ ಎಲ್ಲಾ ರೀತಿಯ ಆನಂದ ತರಂಗಗಳಲ್ಲಿ ಮುಳುಗಿಸುವ, ಆಧ್ಯಾತ್ಮಿಕಾನುಭೂತಿಯನ್ನು ಉಂಟುಮಾಡುವ ಸೇವೆಯಲ್ಲಿ ಪಾಲ್ಗೊಳ್ಳುವ ಭಕ್ತರೇ ಧನ್ಯರೆಂದು ಹೇಳಬೇಕು. ಹಾಗೇ ಸ್ವಾಮಿಯ ಮೂಲಮೂರ್ತಿಗೂ ಹಲವು ಬಗೆಯ ಸೇವೆಗಳು, ನೈವೇದ್ಯಗಳು ನಡೆಯುತ್ತಿರುತ್ತವೆ. ಆ ಸಮಯದಲ್ಲಿ ಸ್ವಾಮಿಯ ದರ್ಶನವು ಪರಮಾನಂದಭರಿತವೂ,ಅದ್ವಿತೀಯವಾಗಿರುತ್ತದೆ.

ಈ ರೀತಿ ತಿರುಮಲೆಗೆ ಬರುವ ಭಕ್ತರೆಲ್ಲರಿಗೂ ತಿ.ತಿ.ದೇ., ಅತಿಥಿಮರ್ಯಾದೆಗಳನ್ನು, ಸಕಲಸೌಕರ್ಯಗಳನ್ನು ಕಲ್ಪಿಸಿ ಭಕ್ತರಿಗೆ ತಿರುಮಲೆಯ ಕ್ಷೇತ್ರದ ಸಂದರ್ಶನದ ಫಲವನ್ನು ಹಾಗೇ ಸ್ವಾಮಿಯ ವಾಹನಸೇವೆಯ ವೈಭವವನ್ನು ಅವರು ಮನಸಾರೆ ಆಸ್ವಾದಿಸುವಂತೆ ಮಾಡುತ್ತಿದೆ. ಆ ಸಂದರ್ಶನಕ್ಕೆ ಭಕ್ತರೆಲ್ಲರೂ ಸಂಪ್ರದಾಯ ವಸ್ತ್ರಧಾರಣೆಯೊಂದಿಗೆ ಆಗಮಿಸಿ, ನಿರಂತರವಾದ ದೈವಸ್ಮರಣೆಯೊಂದಿಗೆ ಸ್ವಾಮಿಯನ್ನು ಸಂದರ್ಶಿಸಿ, ಸ್ವಾಮಿಯ ಕರುಣಾಕಟಾಕ್ಷಸಿದ್ಧಿಯನ್ನು ಪಡೆಯಲೆಂದು ಆಶಿಸೋಣ! ಹಾಗೇ ತಿರುಚಾನೂರು ಶ್ರೀಪದ್ಮಾವತಿದೇವಿಗೆ ನಡೆಯುವ ನವರಾತ್ರಿ ಬ್ರಹ್ಮೋತ್ಸವದಲ್ಲಿ ಅಮ್ಮನವರನ್ನೂ ದರ್ಶಿಸಿ ಧನ್ಯರಾಗಲೆಂದು ಬಯಸೋಣ!!!

**ಗೋವಿಂದ!! ಗೋವಿಂದ!! ಗೋವಿಂದ...!!**




# ತಿರುಮಲೆ ಬ್ರಹ್ಮೋತ್ಸವ ಮತ್ತು ಕರ್ನಾಟಕ ಹರಿದಾಸರು

ಡಾ|| ಎಸ್. ನಂಜುಂಡಸ್ವಾಮಿ
7899110310

ಪ್ರಾಚೀನ ಕರ್ನಾಟಕ ದೇಶಕ್ಕೂ, ತಿರುಮಲೆಯ ವೇಂಕಟರಮಣನಿಗೂ ಅವಿನಾಭಾವ ಸಂಬಂಧವಿದೆ. ಹರಿದಾಸರ ಕೀರ್ತನೆಗಳಿಂದ, ವಿಜಯನಗರ ಅರಸರಾದ ಕೃಷ್ಣದೇವರಾಯ, ಅಚ್ಯುತ ರಾಯರ ಕಾಲದ ಶಾಸನಗಳಿಂದ, ತಿರುಪತಿಗಿರಿಯ ವೆಂಕಟೇಶನ ಮೇಲಿನ ಈ ಭಕ್ತಿ ಭಾವನೆಗಳ ವಿಶೇಷ ಸಂಬಂಧದ ಆಳ ಅಗಲಗಳ ಹರವುಗಳು ತಿಳಿದು ಬರುತ್ತದೆ. ಹರಿ ದಾಸರಿಗೆ ಕ್ಷೇತ್ರದರ್ಶನ ಶಾಸ್ತ್ರ ವಿಧಿಸಿದ ಕಟ್ಟಳೆ. "ಗಾತ್ರವ ಬಳಲಿಸಿ ಶ್ರೋತ್ರದಿ ಕೇಳುತ್ತ ಯಾತ್ರೆಯ ಮಾಡು ವೇಂಕಟಪತಿ ಮೂರ್ತಿಯ ನೇತ್ರದಿ ನೋಡು'' ಎಂದು ವಾದಿರಾಜರು. "ದೇಶವನೆ ತಿರುಗಿ ಪುಣ್ಯ ಕ್ಷೇತ್ರಗಳ ಮೆಟ್ಟಿ ಲೇಸಾಗಿ ಅಲ್ಲಿದ್ದ ಮಹಿಮೆಗಳ ಪೇಳಿ ದುರಾಶೆಯನು ತೊರೆದು'' ಎಂದು ಪುರಂದರದಾಸರು, "ತೀರ್ಥಕ್ಷೇತ್ರಗಳ ಮೂರ್ತಿ ಮಹಿಮೆಗಳ ಕೀರ್ತಿಸಿ ಜಗದಿ ಕೃತಾರ್ಥನೆಂದೆನಿಸಿ'' ಎಂದು ಜಗನ್ನಾಥ ದಾಸರು ಹೇಳಿದ್ದಾರೆ. ದಾಸರುಗಳು ಪ್ರಸಿದ್ಧವಾದ ಕ್ಷೇತ್ರಗಳಿಗೆ ಭೇಟಿ ಮಾಡಿ, ಅಲ್ಲಿ ಸಾಧ್ಯವಾದಷ್ಟು ದಿವಸ ವಾಸ್ತವ್ಯಮಾಡಿ, ತಮ್ಮ ಇಷ್ಟದೈವಕ್ಕೆ ತ್ರಿಕರಣಪೂರ್ವಕವಾಗಿ ಸೇವೆ ಸಲ್ಲಿಸಿ, ಅಲ್ಲಿನ ಭಾಗವತ ಭಕ್ತ ಮಹಾಜನರೊಡನೆ ಸೇರಿ, ಸ್ತುತಿ ಕೀರ್ತನೆಗಳನ್ನು ರಚಿಸಿ ಹಾಡಿ ಹೊಗಳಿ ತಣಿಯುತ್ತಿದ್ದರು.

ತಿರುಮಲೆ ಜಗತ್ ಪ್ರಸಿದ್ಧವಾದ ಕ್ಷೇತ್ರ. ಕೃತಯುಗದಲ್ಲಿ ವೃಷಾಭಾದ್ರಿಯೆಂದು, ತ್ರೇತಾಯುಗದಲ್ಲಿ ಅಂಜನಾದ್ರಿಯೆಂದೂ, ದ್ವಾಪರಯುಗದಲ್ಲಿ ಶೇಷಾಚಲವೆಂದೂ, ಕಲಿಯುಗದಲ್ಲಿ ವೇಂಕಟಾಚಲವೆಂದೂ ಪ್ರಸಿದ್ಧವಾದುದು. ಇಲ್ಲಿ ಏಳು ಬೆಟ್ಟಗಳ ಸಾಲಾಗಿ ಇದ್ದು ಇದನ್ನು ಸಪ್ತಗಿರಿ ಎಂದು ಕರೆಯುತ್ತಾರೆ. ಕ್ರಿಸ್ತ ಶಕದ ಮೊದಲ ಶತಕಗಳಲ್ಲಿಯೇ ಅನೇಕ ಆಳ್ವಾರರೂಗಳು ಈ ಕ್ಷೇತ್ರವನ್ನು ಸಂದರ್ಶಿಸಿ ತಮ್ಮ ಪಾಶುರಗಳಲ್ಲಿ ವೆಂಕಟೇಶನನ್ನು ಹಾಡಿ ಹೊಗಳಿದ್ದಾರೆ. ರಾಮಾನುಜಾಚಾರ್ಯರು ತಿರುಪತಿಯಲ್ಲಿದ್ದು ಇಲ್ಲಿಯ ನಿತ್ಯ ಪೂಜಾಕೈಂಕರ್ಯಗಳನ್ನು ಸುವ್ಯವಸ್ಥೆಗೊಳಿಸಿದರು. ಭಾರತೀಯ ಧಾರ್ಮಿಕ ಸುಧಾರಣಾ ಚಳುವಳಿ ಮತ್ತು ಧಾರ್ಮಿಕ ಸಾಹಿತ್ಯ ಕ್ಷೇತ್ರದಲ್ಲಿ ಕರ್ನಾಟಕದ ಹರಿದಾಸ ಪರಂಪರೆಯ ಪಾತ್ರ ಬಹಳ ಮಹತ್ವದ್ದು. ಕರ್ನಾಟಕದಲ್ಲಿ ಮಾಧ್ವ, ಶ್ರೀವೈಷ್ಣವ ಮತ್ತು ಸ್ಮಾರ್ತಭಾಗವತ ಪರಂಪರೆಯ ಸುಮಾರು 200 ಹರಿದಾಸರುಗಳನ್ನು ಗುರುತಿಸಲಾಗಿದೆ. ಕರ್ನಾಟಕದ ಎಲ್ಲ ಪಂಥದ ಹರಿದಾಸರಿಗೆ ತಿರುಮಲೆಯಲ್ಲಿ ನೆಲೆಸಿರುವ ವೇಂಕಟರಮಣ ಅಥವಾ ತಿರುಪತಿಯ ತಿಮ್ಮಪ್ಪನೆಂದರೆ ಬಹಳ ಅಭಿಮಾನದ ದೈವ. ಬಹುತೇಕ ಕರ್ನಾಟಕದ ಹರಿದಾಸರೆಲ್ಲರೂ ತಿರುಪತಿಗೆ ಹೋಗಿ, ಅಲ್ಲಿ ಕೆಲವು ಕಾಲ ನೆಲೆಸಿದ್ದು, ತಿರುಮಲೆಯ ವೇಂಕಟರಮಣನ ಸೇವೆಯನ್ನು ಮಾಡಿ, ಅವನ ಬಗ್ಗೆ ಕೀರ್ತನೆಗಳನ್ನು ರಚಿಸಿ, ಅವನನ್ನು ಎಷ್ಟು ಹಾಡಿಹೊಗಳಿದರೂ ತಣಿಯರು. ತಿರುಪತಿಯ ಹೆಗ್ಗಳಿಕೆಯನ್ನು,ವೇಂಕಟರಮಣನ ಸೊಬಗನ್ನು, ಅಲ್ಲಿಯ ಪೂಜಾ ಮಹೋತ್ಸವಗಳನ್ನು ಕಣ್ಣಾರೆ ಕಂಡು ಹಾಡಿ ನಲಿದಿದ್ದಾರೆ. ಕರ್ನಾಟಕದ ದಾಸ ಸಾಹಿತ್ಯದ ಆದ್ಯ ಪ್ರವರ್ತಕರೆನಿಸಿದ ನರಹರಿ ತೀರ್ಥರಿಂದ ಹಿಡಿದು ಗೋವಿಂದವಿಠಲ ದಾಸರವರೆಗೆ ಸುಮಾರು 50-60 ಜನ ದಾಸರು ದಾಸಸಾಹಿತ್ಯ ಪರಂಪರೆಯಲ್ಲಿ ಆದ್ಯರೆನಿಸಿದ್ದಾರೆ. ಅವರಲ್ಲಿ ಕೆಲವು ದಾಸವರೇಣ್ಯರು ತಿರುಪತಿ ಗಿರಿವಾಸನ ಮೇಲೆ ರಚಿಸಿದ ಕೀರ್ತನೆಗಳಿಂದ ತಿರುಪತಿ-ತಿರುಮಲೆಯ ಇತಿಹಾಸವನ್ನು ಮತ್ತು ವೆಂಕಟೇಶ್ವರನ ವೈಭವವನ್ನು ಕಟ್ಟಿಕೊಡಬಹುದು. ಸಾಮಾನ್ಯವಾಗಿ ಕರ್ನಾಟಕದ ಹರಿ ದಾಸರೆಲ್ಲರೂ ತಿರುಮಲೆಯಲ್ಲಿ ನಡೆಯುವ ಬ್ರಹ್ಮೋತ್ಸವದ ಕಾಲಕ್ಕೆ ಅಲ್ಲಿ ಸೇರುತ್ತಿದ್ದರು. ಬ್ರಹ್ಮೋತ್ಸವದ ವೈಭವವನ್ನು ಕಣ್ಣಾರೆ ಕಂಡು ಅದನ್ನು ತಮ್ಮ ಕೀರ್ತನೆಗಳಲ್ಲಿ ನೇರವಾಗಿ, ಪರೋಕ್ಷವಾಗಿ ವರ್ಣಿಸಿ ಹಾಡಿಸುತ್ತಿಸಿದ್ದಾರೆ.

ಶ್ರೀಪಾದರಾಜರು ತಮ್ಮ ಶಿಷ್ಯರಾದ ವ್ಯಾಸರಾಯರಿಗೆ ತಿರುಮಲೆಯ ವೇಂಕಟೇಶನ ಪೂಜಾಕಾರ್ಯದ ಜವಾಬ್ದಾರಿಯನ್ನು ವಹಿಸಿಕೊಟ್ಟರು. ವ್ಯಾಸರಾಜರು ಕ್ರಿಶ. 1486 ರಿಂದ 1498 ರ ವರೆಗೆ ಶ್ರೀನಿವಾಸನ ಪೂಜಾ ಕೈಂಕರ್ಯವನ್ನು ನಡೆಸಿದರು. ಕೊನೆಗೆ ಮೂಲ ಅರ್ಚಕರ ಮನೆತನದವರಿಗೆ ಪೂಜಾ ಕೈಂಕರ್ಯಗಳ ಹಕ್ಕನ್ನು ಹಿಂದಿರುಗಿಸಿ ವಿಜಯನಗರಕ್ಕೆ ಹಿಂದಿರುಗಿದರೆಂದು ಇತಿಹಾಸದಿಂದ ತಿಳಿದು ಬರುತ್ತದೆ. ವ್ಯಾಸರಾಯರು ತಿರುಮಲೆಯ ದೇವಾಲಯದ ಗರ್ಭಗುಡಿಯ ಶಿಖರಕ್ಕೆ ಚಿನ್ನದ ಕವಚವನ್ನು ಹೊದಿಸಿದರು ಮತ್ತು ಗೋಪುರದ ಉತ್ತರ ದಿಕ್ಕಿನ ವಿಮಾನದಲ್ಲಿ ಶ್ರೀನಿವಾಸನ ಮೂರ್ತಿ



ಯನ್ನು ನಿರ್ಮಿಸಿದರು ಎಂದು ತಿಳಿದು ಬರುತ್ತದೆ. ಈಗಲೂ ಭಕ್ತರು ವಿಮಾನ ಶ್ರೀನಿವಾಸನ ದರ್ಶನವನ್ನು ಮಾಡುತ್ತಾರೆ. ವ್ಯಾಸರಾಯರು ತಿರುಮಲೆಯ ವೇಂಕಟ ರಮಣನ ಮೇಲೆ ಅನೇಕ ಕೀರ್ತನೆಗಳನ್ನು ರಚಿಸಿದರು. ವ್ಯಾಸರಾಯರ ಶಿಷ್ಯರಾದ, ದಾಸಶ್ರೇಷ್ಠರಾದ ಪುರಂದರ ದಾಸರ ಇಷ್ಟದೈವ ಶೇಷಗಿರಿಯ ಮೇಲೆ ವಾಸವಾಗಿಹ ಸಾಸಿರ ನಾಮದ ವೇಂಕಟರಮಣ''ಕಲೌ ವೇಂಕಟ ನಾಯಕಃ''ಎಂಬುದು ಅವರ ಅಭಿಮತ ವೇಂಕಟರಮ ಣನೆ ಬಾರೋ, ಶೇಷಾಚಲವಾಸನೆ ಬಾರೋ''ಎಂದು ಆರ್ತರಾಗಿ ವೆಂಕಟರಣಮಣನನ್ನು ಕರೆಯುತ್ತಾರೆ. ತಿರುಮಲೇಶನನ್ನು ಕುರಿತು ಅವರು ಸುಮಾರು 50 ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ. ಪುರಂದರದಾಸರು ಕ್ರಿ.ಶ. 1486 ರಿಂದ 1498 ರ ವರೆಗೆ ತಿರುಮಲೆಯ ಬೆಟ್ಟದ ಮೇಲೆ ನೆಲೆನಿಂತು ದೇವರಿಗೆ ನಿತ್ಯಾರ್ಚನೆ ಸಲ್ಲಿಸುತ್ತಿದ್ದರು ಎಂದು ಪ್ರತೀತಿ ಇದೆ. ಬ್ರಹ್ಮೋತ್ಸವದ ಕಾಲದಲ್ಲಿ ಕಾಶಿ, ರಾಮೇಶ್ವರ ಆದಿಯಾಗಿ ದೇಶದ ನಾನಾ ಕಡೆಗಳಿಂದ ಬಂದಿದ್ದ ''ಜನಗಳ ಕೂಟ, ಪರಿಷೆಯ ಗುಂಪು, ಮರಗಳ ತೋಪಿನ ತಂಪು,ಬ್ರಾಹ್ಮಣರ ಊಟ,ಕೋಲಾಟ'' ಮೊದಲಾದವು ತಿರುಮಲೆಯಲ್ಲಿದ್ದಿತೆಂದು ವರ್ಣಿಸಿದ್ದಾರೆ. ''ಪಾಪವಿನಾಶಿನಿ ಸ್ನಾನ ಹರಿಪಾದೋಕ ಪಾವನ ಉರಗಾದ್ರಿಯಲಿ ಚಂದ್ರ ಪುಷ್ಕರಣಿ ಮೊದಲಾದ ಪರಿಪರಿ ತೀರ್ಥದಲ್ಲಿ ಮುಣುಗಿ ಮುಣುಗಿ ತಿರುವೆಂಗಳಪ್ಪನ'' ದರ್ಶನ ಮಾಡಿದ್ದನ್ನು ಹೇಳುತ್ತಾರೆ. ''ಮೂಡಲ ಗಿರಿಯಲಿ ನಿಂತ ಮುದ್ದು ವೆಂಕಟಪತಿ ಬಲವಂತ ಈಡಿಲ್ಲ ನಿನಗೆ ಶ್ರೀಕಾಂತ'' ಎಂದು ಸುತ್ತಿಸುತ್ತಾರೆ. ''ತಪ್ಪುಗಾಣಿಕೆ ಕಪ್ಪಗಳನು ಸಪ್ತ ದ್ವೀಪಗಳಿಂದ ತರಿಸುವ ಉಪ್ಪು ಓಗರಗಳನೆ ಮಾರಿಸಿ ಉಚಿತದಿಂದಲಿ ಹಣ ಗಳಿಸುವ ಇಪ್ಪತ್ತು ದುಡ್ಡಿಗೆ ಸೇರು ತೀರ್ಥವ ಒಪ್ಪದಲಿ ಕ್ರಯ ಮಾಡಿ ಕೊಡಿಸುವ ಅಪ್ಪ ವೆಂಕಟರಮಣ'' ''ಕೇಸಕ್ಕಿ ಅನ್ನ ತಿಂಬವನ, ಬಡ್ಡಿಕಾಸು ಬಿಡದೆ ಹೊನ್ನ ಬಳಸಿಕೊಂಬನ, ದೋಸೆ ಅನ್ನವ ಮಾರಿಸುವನ, ತನ್ನ ದಾಸರ ಮೇಳದಿ ಕುಣಿದಾಡುವನ'' ಎನ್ನುತ್ತಾರೆ. ಸುಮಾರು 1500 ನೇ ಇಸವಿಯಲ್ಲಿಯೇ ತಿರುಪತಿಯಲ್ಲಿ ಪೊಂಗಲ್, ಪುಳಿಯೋಗರೆ, ತೀರ್ಥ, ವಡಮಾಲೆ ಇವುಗಳನ್ನು ಭಕ್ತರಿಗೆ ಮಾರುವ ಮೂಲಕ ಅಪಾರ ಹಣ ಸಂಗ್ರಹ ಆಗುತ್ತಿದ್ದು, ದಾಸರ ಮೇಳವೇ ನೆರೆಯುತ್ತಿದ್ದ ಅಂಶ ಇದರಿಂದ ತಿಳಿದು ಬರುತ್ತದೆ.

ಕನಕದಾಸರು ವಿಶಿಷ್ಟಾದ್ವೈತ ಪರಂಪರೆಯ ಅನುಯಾಯಿಗಳು. ತಿರುಪತಿಯ ತಿಮ್ಮಪ್ಪನ ವರಪ್ರಸಾದದಿಂದ ಜನಿಸಿದ ಅವರ ಜನ್ಮನಾಮ ತಿಮ್ಮಪ್ಪ, ಕೃಷ್ಣದೇವರಾಯನ ರಾಜಗುರು ತಿರುಮಲೆ ತಾತಾಚಾರ್ಯರ ಶಿಷ್ಯರು. ಆದರೂ ವ್ಯಾಸರಾಯರಿಂದ ದಾಸದೀಕ್ಷೆ ಪಡೆದು ಪುರಂದರದಾಸರ ಜೊತೆಗೇ ಇದ್ದುಕೊಂಡು ದಾಸ ಸಾಹಿತ್ಯ ರಚನೆ ಮಾಡಿದರು. ಅವರೂ ಕೂಡಾ ತಿರುಪತಿಗೆ ಹೋಗಿದ್ದರು. ''ಚೊಕ್ಕ ಕನಕಪ್ಪನ ಹಿಂದೆ ನಾ ತಿರುಪತಿಗೆ ಬಂದೆ 'ತಿರುಪತಿಯೊಳು ನೆಲೆಸಿಹ ವೆಂಕಟೇಶನು ನೀನು, ಚರಣಕೆರಗುವ ಕನಕದಾಸನು ನಾನು','ಏನೆಂದು ಕೊಂಡಾಡಿ ಸ್ತುತಿಸಲೋ ದೇವ ನಾನೇನು ಬಲ್ಲೆ ನಿನ್ನ ಮಹಿಮೆಗಳ ತಿರುಪತಿಯ ವಾಸ ಶ್ರೀವೆಂಕಟೇಶನೆ ನಿನ್ನ ಚರಣಸೇವಕರ ಸೇವಕ ನಾನು', 'ಭಕ್ತರ ದಾಸನೆಂದು ವೆಂಕಟೇಶ ನೀನೊಲಿದು ಬಂದಿದ್ದೀಯಾ',ಕೊಡಿಸು ನಿನ್ನ ಭಕ್ತರ ಸಂಗವ ಕನಕದಾಸನೊಡೆಯ ವೇಂಕಟಾದ್ರಿಮಾಧವ', 'ಕನಕಪ್ರಿಯ ತಿರುಪತಿಯ ಗಿರಿಯಾದಿ ಕೇಶವ'' ಇಂತಹ ಅನೇಕ ಕೀರ್ತನೆಗಳನ್ನು ಅವರು ತಿರುಮಲೆಯ ವೇಂಕಟೇಶನ ಮೇಲೆ ರಚಿಸಿ ಹಾಡಿದ್ದಾರೆ. ತಾಳ್ಳಪಾಕ ಅನ್ನಮಾಚಾರ್ಯರನ್ನು ಕನಕದಾಸರು ಭೇಟಿಯಾಗಿದ್ದರೆಂದು ಮಹಿಪತಿದಾಸರ ಮಗ ಕಾಖಂಡಕಿ ಕೃಷ್ಣದಾಸರ ಕೀರ್ತನೆಯೊಂದರಿಂದ ತಿಳಿದು ಬರುತ್ತದೆ.

ಇದೇ ಕಾಲದಲ್ಲಿದ್ದ ವಾದಿರಾಜರು (1540-1600) ತಿರುಪತಿಯ ಬೆಟ್ಟಕ್ಕೆ ಬಂದಾಗ ಅವರಿಗೆ ಇಡೀ ಬೆಟ್ಟ ಒಂದು ಸಾಲಿಗ್ರಾಮ ಶಿಲೆಯಂತೆ ಕಂಡು ಬಂದಿತೆಂದು ಸಾಲಿಗ್ರಾಮ ಶಿಲೆಯನ್ನು ಕಾಲಿನಿಂದ ತುಳಿಯಬಾರದೆಂದು ತಮ್ಮ ಮೊಣಕಾಲಿನಿಂದಲೇ ಬೆಟ್ಟವನ್ನು ಹತ್ತಿರೆಂದು ಪ್ರತೀತಿ ಇದೆ. 'ಸೇವಕನೆಲೊ ನಾನು ನಿನ್ನಯ ಪಾದಸೇವೆ ನೀಡಲೊ ನೀನು, ಪಂಕಜಾಸನ ವಿನುತ ತಿರುಪತಿ ವೇಂಕಟ ಬಿರುದಾಂಕ ಜಯ ಜಯ, ಯಶೋದ ಕಂದ ಹರಿ ಗೋವಿಂದ ಶೇಷಗಿರಿಯಲಿ ನಿಂದ', 'ಎಂದು ಕಾಂಬೆನು ಎನ್ನ ಸಲಹುವ ಬಂಧು ಬಳಗ ನಮ್ಮಪ್ಪನ ತಿರುಪತಿಲಿಪ್ಪನ ವರಾಹ ತಿಮ್ಮಪ್ಪನ, ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ನೇಮವ ಮಾಡುವೆ ಪುಣ್ಯ ಕ್ಷೇತ್ರವ ನೋಡುವೆ','ಸಾರಿದೆನೋ ನಿನ್ನ ವೇಂಕಟರಮಣ, ದೇಶ ದೇಶದವರ ಪೊರೆವಂತೆ ಪೊರೆಯನ್ನ ಶೇಷಾಚಲ ಘನ್ನ', ಈ ಮೊದಲಾದ ಕೀರ್ತನೆಗಳಲ್ಲಿ ವಾದಿರಾಜರು ತಿರುಪತಿಗೆ ಹೋಗಿ ಬ್ರಹ್ಮೋತ್ಸವ ಕಾಲದಲ್ಲಿ ಶ್ರೀನಿವಾಸನ ಪೂಜಾ ಕೈಂಕರ್ಯಗಳನ್ನು ಮಾಡಿ, ತಿರುಪತಿ ಗಿರಿವಾಸನ ಮೇಲೆ ಅನೇಕ ಕೀರ್ತನೆಗಳನ್ನು ರಚಿಸಿರುವುದು ತಿಳಿದು ಬರುತ್ತದೆ.''ಬ್ರಹ್ಮಾಂಡಮಾದ್ಯಃ ಪುಮಾನ್ ಶ್ರೀಮದ್ವೇಂಕಟ ಭೂಧರಣೇಂದ್ರ ರಮಣಃ ಕುರ್ಯಾದ್ಧರಿ ಮಂಗಲಮ್'' ಎಂದು ಅಂತ್ಯವಾಗುವ ಶ್ರೀವೆಂಕಟೇಶ ಮಂಗಲಾಷ್ಟಕವನ್ನೂ ವಾದಿರಾಜರು ರಚಿಸಿದ್ದಾರೆ.

ಕಾಖಂಡಕಿಯ ಪ್ರಸನ್ನ ವೇಂಕಟದಾಸರು ತಿರುಪತಿಯ ವೆಂಕಟೇಶನಿಂದಲೇ ಅಂಕಿತವನ್ನು ಪಡೆದರೆಂದು ಹೇಳುತ್ತಾರೆ.''ಪ್ರಸನ್ನವೇಂಕಟರಮಣ/ವೆಂಕಟೇಶ/ವೆಂಕಟಾದ್ರೀಶ''ಅವರ ಅಂಕಿತನಾಮ ''ಅಂಜಿಕಿನ್ಯಾಕೆನಗೆ ಕಂಜನಾಭ ಶ್ರೀನಿವಾಸನ ದಯವಿರಲು, ಆವ ದೇಶದಲಿರೆ ಆವ ಕಾಲದಲಿರೆ ಸೇವೆಗೆ ನಾ ತಪ್ಪೆ ಕೃಪೆ ತಪ್ಪಿಸಬೇಡ ಭಾವಿಕರೊಡನೆಯ ಶ್ರೀಪ್ರಸನ್ನ ವೇಂಕಟಾದ್ರೀಶ'' ಎಂದೇ ಅವರು ಬ್ರಹ್ಮೋತ್ಸವ ಕಾಲದಲ್ಲಿ ತಿರುಪತಿಗೆ ಹೋಗುತ್ತಿದ್ದುದನ್ನು ಹೇಳಿದ್ದಾರೆ. ''ಸಾರ್ಥಕವು ಸದ್ಯ ಸಾಧು ನಿಕರದ ಗಾತ್ರ ಕ್ಷೇತ್ರದ ಯಾತ್ರೆಯ ಬಿಡದೆ ಸಾಧುಪ್ರಿಯ ಪ್ರಸನ್ನ ವೇಂಕಟರಮಣನು ಸಾಧುಗಳಿಗೆ ಮೆಚ್ಚಿದವರಿಗೆ ಮೆಚ್ಚುವನು'' ಎಂದು ಹೇಳಿ ತಿರುಪತಿಯ ಯಾತ್ರೆಯ ಮಹತ್ವವನ್ನು ಹೇಳಿದ್ದಾರೆ.

ದಾಸಹಾಹಿತ್ಯ ಮತ್ತು ದಾಸಪರಂಪರೆಯನ್ನು ಎರಡನೆಯ ಹಂತದಲ್ಲಿ ಪುನರುಜ್ಜೀವನ ಗೊಳಿಸಿದ ಚೀಕಲಪರವಿಯ ವಿಜಯದಾಸರು (1682-1773) ತಿರುಪತಿಯಲ್ಲಿ ನಡೆಯುತ್ತಿದ್ದ ಬ್ರಹ್ಮರಥೋತ್ಸವಕ್ಕೆ ತಪ್ಪದೇ ಹೋಗುತ್ತಿದ್ದರು. ಸುಳಾದಿಯೊಂದರಲ್ಲಿ ತಿರುಪತಿ

ಕ್ಷೇತ್ರವನ್ನು ಇಳೆಯ ವೈಕುಂಠವೆಂದು ಹೇಳಿ ಶ್ರೀನಿವಾಸ ದೇವಾಲಯವನ್ನು ವರ್ಣಿಸಿದ್ದಾರೆ. 'ತಳಿರು ತೋರಣ ಕಟ್ಟಿ ಪರಮಮಂಗಳವಾಗಿ ಸುಳಿದಿದೆ. ಬಲುಕಾಂತಿ ಗಗನ ಮುಟ್ಟಿ ಚೆಲುವ ಮಹಾದ್ವಾರ ಪರಿಪರಿ ಮಾಟದಾ ಬಾಗಿಲು, ಅಲ್ಲಿ ಕುಳಿತಿದ್ದ ದ್ವಾರದವರು, ಒಳಗೆ ಗರುಡಗಂಬ, ಮತ್ತೆ ಪ್ರಾಕಾರ ಮಧ್ಯವೊಳಲು ಭೋಗ ಮಂಟಪ ಸುತ್ತ ಪೌಳಿ, ಕಳಶದಿಂದೊಪ್ಪುವ ವೈಚಿತ್ರ್ಯ,ವಾದಾನಂದ ನಿಲಯ,ವಿಮಾನ,ಮ್ಯಾಲೆ ಗೋಚರಿಪ ಬಲುಮೂರ್ತಿಗಳುಂಟು,ಬಲಭಾಗದಲ್ಲಿ ಉತ್ತಮ ತೀರ್ಥವೊಂದು'ಹೀಗೆ ತಿರುಮಲೆಯ ದೇವಾಲಯವನ್ನು ವರ್ಣಿಸಿರುವ ಸುಳಾದಿ ಇದೊಂದೇ ಎನ್ನಬಹುದು.

ತಿರುಮಲೆಯ ಬ್ರಹ್ಮರಥೋತ್ಸವ, ಕಲ್ಯಾಣೋತ್ಸವಕ್ಕೆ ಬಂದ ಸಹಸ್ರಾರು ಭಕ್ತಜನಸಮೂಹವನ್ನು ನೋಡಿದ ವಿಜಯದಾಸರು "ನಿನ್ನ ದರುಶನಕ್ಕೆ ಬಂದವನಲ್ಲವೋ, ಪುಣ್ಯವಂತರ ದಿವ್ಯ ಚರಣ ನೋಡಲಿ ಬಂದೆ, ಸೊಲ್ಲಿಗೆ ಕಂಭದಿ ತೋರಿದ ಮಹಾ ಮಹಿಮ ಅಲ್ಲಿ ಇಲ್ಲೇನಯ್ಯಾ ಬಲ್ಲ ಭಜಕರಿಗೆ, ಭಳಿರೆ ತಿರುಮಲರಾಯ ನಿನ್ನ ಕರುಣಾರಸಕೆ ನೆಲೆ ಗಾಣ ನೆಲೆ ನೆರೆ ಹೊರೆಯೊಳು,ಒಲಿದ ಭಕುತರಿಗಾಗಿ ಮದುವೆ ಹಮ್ಮಿಕೊಂಡೆ ಸುಲಭ ದೇವರದೇವ ವಿಜಯವಿಠಲ ವೇಂಕಟಾ"ಎಂದು ಉದ್ಗಾರವೆತ್ತಿದ್ದಾರೆ. ಬ್ರಹ್ಮೋತ್ಸವ ಕಾಲದಲ್ಲಿ "ಉತ್ಸವ ವಾಹನ ಬೀದಿಲಿ ಮೆರೆಯುತ ಬರಲು ಸತ್ಸಂಗತಿಗೆ ಹರಿದಾಸರಲ್ಲದೆ ವತ್ಸ ಸಿರಿ ವಿಜಯವಿಠಲ ವತ್ಸ ಮುಂದಲ್ಲದೆ ಧೇನು ತಾ ಮುಂದೇನು" ಎಂದು ವೆಂಕಟೇಶ್ವರನ ಬ್ರಹ್ಮರಥೋತ್ಸವದ ಮುಂದೆ ಹೋಗುತ್ತಿದ್ದ ಹರಿದಾಸ ಸಮೂಹವನ್ನು ವರ್ಣಿಸಿದ್ದಾರೆ.

ವಿಜಯದಾಸರ ಶಿಷ್ಯರಾದ ಗೋಪಾಲದಾಸರು (1722-1865) ತಿರುಪತಿಗೆ ಹೋಗಿದ್ದಾಗ 'ಕೊಟ್ಟ ಬಿಡಾರದಲ್ಲಿ ಎಷ್ಟುದಿನ ಜೀವಿಸಲೋ ಕಷ್ಟ ಪಡಲಾರೆ ಹರಿಯೇ ಪ್ರಾಣನಾಯಕ ಗುರು ಗೋಪಾಲ ವಿಠಲ ಆನಂದನಿಲಯವಾಸ ಶ್ರೀಶ' ಎಂದು ಕೇಳುತ್ತಾರೆ. ದೇವರ ದರ್ಶನ ಮಾಡಿ "ಮೂರುನಾಮಗಳ ಧರಿಸಿದ ಕಾರಣವೇನು ಸಾರಿ ಪೇಳೆಲೊ ಈಗಲೆ ಶ್ರೀರಮಾಪತಿ ವೆಂಕಟರಮಣ'ಎಂದು ಕೇಳಿ 'ಕಾಲ ಕಾಲಕೆ ಬರುವ ಭಕುತ ಜನಗಳ ವೃಂದ ದೃಷ್ಟಿ ತಾಕುವುದೆಂಬ ತೋರುವ ಬಗೆಯೋ','ಮೂರು ಲೋಕಗಳಿಹವು ಮೂರು ರೂಪನು ನಾನು ಮೂರು ಮಾಳ್ಪೆನು ಜಗವ ಮೂರು ಗುಣದಿ ಮೂರು ತಾಪವ ಗೆದ್ದು ಮಾರ್ಗದಿ ಭಜಿಸಿ ಪಾರು ಮಾಡುವೆನೆಂದು ತೋರುವ ಬಗೆಯೋ' ಎಂದು ಚಮತ್ಕಾರದಿಂದ ಉತ್ತರಿಸಿದ್ದಾರೆ. ತಿರುಪತಿಯಲ್ಲಿ ಭಕ್ತ ಜನ ಸಮೂಹ ಯಾವಾಗಲೂ ತುಂಬಿರುತ್ತಿತ್ತು ಎಂಬುದು ಇದರಿಂದ ತಿಳಿಯುತ್ತದೆ.

ಗೋಪಾಲದಾಸರ ಶಿಷ್ಯರಾದ ದಾಸಶ್ರೇಷ್ಠ ಜಗನ್ನಾಥದಾಸರಿಗೆ (1728-1809) ವೆಂಕಟಗಿರಿಯ ಮತ್ತು ಅಲ್ಲಿ ನೆಲೆಸಿರುವ ವೇಂಕಟರಮಣನನ್ನು ಎಷ್ಟು ಹೊಗಳಿದರೂ ಸಾಲದು. ಜಗನ್ನಾಥದಾಸರು ಸುಮಾರು 15 ಕೀರ್ತನೆಗಳನ್ನು ತಿರುಪತಿ ಗಿರಿವಾಸನ ಮೇಲೆ ರಚಿಸಿ ಸ್ತುತಿಸಿದ್ದಾರೆ.'ಆ ವೇಂಕಟಗಿರಿ ನಿಲಯನಂಘ್ರಿ ರಾಜೀವಯುಗಳಗಾ ನಮಿಸುವೆನು', ಎಂಬ ಕೀರ್ತನೆಯಲ್ಲಿ ತೊಂಡಮಾನ ರಾಜ ಮತ್ತು ಬ್ರಾಹ್ಮಣನ ಮೇಲೆ ಶ್ರೀನಿವಾಸನು ಕರುಣೆ ತೋರಿದ್ದನ್ನು ವೃದ್ಧ ಬ್ರಾಹ್ಮಣನಿಗೆ ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನಮಾಡಿಸಿ ಯೌವನವನ್ನು ನೀಡಿದ್ದ ಕಥೆಯನ್ನು ಹೇಳಿದ್ದಾರೆ. 'ನಾರಾಯಣಾದ್ರಿಕೃತವಾಸ ಶರಣು ತೋರಯ್ಯ ತವರೂಪ ರವಿಕೋಟಿ ಭಾಸ' ಎಂಬ ಕೀರ್ತನೆಯಲ್ಲಿ ಆದಿಶೇಷ ಅಥವಾ ವಾಸುಕಿಯು ನಾರಾಯಣನನ್ನು ಕುರಿತು ತಪಸ್ಸು ಮಾಡಿ, ಆ ಬೆಟ್ಟಕ್ಕೆ ತನ್ನ ಹೆಸರನ್ನಿಡಬೇಕೆಂದು ಅಲ್ಲಿ ವೇಂಕಟರಮಣನು ಬಂದು ನೆಲೆಸಬೇಕೆಂದು ಪ್ರಾರ್ಥಿಸಿದಾಗ, ಸ್ವಾಮಿಯು ವರವನ್ನು ನೀಡಿದ ವಿಚಾರ ಇದೆ. 'ಪನ್ನಗಾದ್ರಿ ನಿವಾಸ ಸುದರುಶನ ಪಾಂಚಜನ್ಯಧರ ದೂರ್ವಾಸ ಪ್ರಮುಖ ಮುನಿ ಸನ್ಮಾನ ಕರುಣಿ' ಕೀರ್ತನೆಯಲ್ಲಿ ದೂರ್ವಾಸ ಮುನಿಗೆ ಅಭಯ ನೀಡಿದ ವಿಚಾರವಿದೆ. 'ರಥವನೇರಿದ ರಥಿಕನಾರೆ ಪೇಳಮ್ಮಯ್ಯ, ಭೂತಳ ಜನರಭಿಲಾಷೆ ಸಲ್ಲಿಸಲು ವಾತಾಶನ (ಶೇಷ) ಗಿರಿಗಿಳಿದ ಕಾಣಮ್ಮಯ್ಯ' ಕೀರ್ತನೆಯಲ್ಲಿ ಬ್ರಹ್ಮ ರಥೋತ್ಸವವನ್ನು ವರ್ಣಿಸಿದ್ದಾರೆ. ತೀರ್ಥಕ್ಷೇತ್ರಗಳ ವರ್ಣನೆಯಲ್ಲಿ ಸರಸ್ವತಿ ನದಿಯು 'ಪುಷ್ಕರಣಿಗಳೊಳಧಿಕಳೆಂದೆನಿಸಿ ಸ್ವಾಮಿ ಪುಷ್ಕರಣಿಯಲ್ಲಿ' ಸರೋವರ ರೂಪದಲ್ಲಿ ನೆಲೆಸಿದ ಕಥೆಯನ್ನು ಹೇಳಿದ್ದಾರೆ.

ಹರಿದಾಸೆಯಾದ ಹರಪನಹಳ್ಳಿ ಭೀಮವ್ವನವರು ತಿರುಪತಿ ಗಿರಿಯನ್ನು, ತಿರುಮಲೆಯ ವೆಂಕಟೇಶನನ್ನು ಕಣ್ಣಿಗೆ ಕಟ್ಟುವಂತೆ ಸ್ತುತಿಸಿದ್ದಾರೆ. 'ಎಷ್ಟು ಹೇಳಲಿ ವೆಂಕಟಗಿರಿಯ ದೃಷ್ಟಿಗೆ ಬಹುಸಿರಿಯ ಬೆಟ್ಟವನೆ ಮನಸ್ಸಿಟ್ಟೇರಲು ಬೇಡಿದ ಇಷ್ಟಾರ್ಥಗಳ ಈಡಾಡುವ ದೊರೆಯೇ ಚಿತ್ರ ವಿಚಿತ್ರದ ಮಹಾದ್ವಾರ ಚಿನ್ನದ ಗೋಪುರ ಸ್ವಚ್ಛವಾದ ಸ್ವಾಮಿ ಪುಷ್ಕರಣಿಯ ತೀರ ಸುತ್ತಲು ಪ್ರಾಕಾರ' ಹೀಗೆ ಅಂದಿನ ತಿರುಮಲೆಯ ವರ್ಣನೆ ಸೊಗಸಾಗಿ ಮೂಡಿ ಬಂದಿದೆ.

'ತಪ್ಪುಗಾಣಿಕೆಯ ಬೇಡುವ ಸರ್ಪ ಶೈಲದ ತಿಮ್ಮಪ್ಪ ಕಪ್ಪವ ಕಾಸು ಕವಡೆ ಮುಡುಪು ಹಾಕದೆ ತಾನೊಪ್ಪ ಜಪ್ಪಿಸಿ ನೋಡುವ ಜನರ ತಪ್ಪ' ದೇಶದೇಶದೊಳು ಈತನ ವಾರುತೆಯು ತುಂಬಿದ ಕೀರುತಿಯು'ಎಂದು ಜನರು ಇಷ್ಟ ದೈವ ವೇಂಕಟರಮಣನಿಗೆ ಜನತೆ ಅಂದಿನಿಂದಲೂ ಭಕ್ತಿಯಿಂದ ಕಾಣಿಕೆಯನ್ನು ಒಪ್ಪಿಸುತ್ತಿದ್ದ, ತಿರುಪತಿಯು ಇಡೀ ದೇಶದಲ್ಲೇ ಪ್ರಸಿದ್ಧವಾಗಿದ್ದ ವಿಚಾರವನ್ನು ಹೇಳಿದ್ದಾರೆ.

ನೆಕ್ಕರ ಕೃಷ್ಣದಾಸರು ಉಡುಪಿಯ ಕೃಷ್ಣಾಪುರದ ವಿಭುದೇಂದ್ರ ತೀರ್ಥರ ಶಿಷ್ಯರು ತಿರುಪತಿಯ ತಿಮ್ಮಪ್ಪನ ಭಕ್ತರು. 'ವರಾಹ ತಿಮ್ಮಪ್ಪ' ಇವರ ಅಂಕಿತ. ತಿರುಮಲೆಯ ವೆಂಕಟೇಶನ ಬಗ್ಗೆ ಅಪಾರ ಭಕ್ತಿಯುಳ್ಳ ಅವರು, ತಿರುಮಲೆ ಕ್ಷೇತ್ರದ ಬಗ್ಗೆ, ವೇಂಕಟರಮಣನ ಬಗ್ಗೆ ಅನೇಕ ಸ್ವಾರಸ್ಯಕರ ವಿಷಯಗಳನ್ನುಳ್ಳ ಕೀರ್ತನೆಯನ್ನು ರಚಿಸಿದ್ದಾರೆ. 'ಅಂಗಡಿ ಗೋವಿಂದಣ್ಣನ ವಿಂಗಡಿಸಿರೋ, ಮುಂಗಡದ ಬಡ್ಡಿಯನು ಮುಂದೆ ಕಳುಹಿಸಿ ಅಂಗಡಿ ಗೋವಿಂದಣ್ಣನ ವಿಂಗಡಿಸಿರೋ' ಬೆಟ್ಟದೊಳು ನಿಲ್ಲುವೆಯೋ ಕಟ್ಟುವೆಯೋ ರೊಕ್ಕವನು', 'ದೇಶದೇಶದಿಂದ ಕಪ್ಪ ಗಾಸಿಯಾಗದಂತೆ ತರಿಸಿ ಕೋಶಕಿಕ್ಕಿ ಕೊಂಬ ಲಕ್ಷ್ಮಿಯ ಈಶ' ಎಂದು ಹಾಡಿದ್ದು, ತಿರುಮಲ ಗಿರಿವಾಸನಿಗೆ ಜನರು ಅಪಾರ ಕಾಣಿಕೆಗಳನ್ನು ಅರ್ಪಿಸುತ್ತಿದ್ದ ವಿಷಯವನ್ನು ತಿರುಪತಿಯಲ್ಲಿ ಅಂಗಡಿಗಳ ಸಾಲುಗಳು ಇದ್ದುದನ್ನೂ ಹೇಳಿದ್ದಾರೆ.

'ಸುಮ್ಮನೊಲಿವನೆ ಪರಬೊಮ್ಮನಾದ ತಿಮ್ಮರಾಯ,ಮಂದವಾರದ ದಿವಸದಲಿ ಮಡಿಯನುಟ್ಟುಕೊಂಡು ಗೋವಿಂದ ಎನ್ನುತ ನಾಮವಿಕ್ಕಿ ವಂದನೆಯ ಮಾಡದನಕ ' ಎನ್ನುವ ಮೂಲಕ ಶನಿವಾರ ತಿಮ್ಮಪ್ಪನ ಪೂಜೆಗೆ ಶ್ರೇಷ್ಠವೆಂದು ಹೇಳಿದ್ದಾರೆ. ಹೀಗೆ ಕರ್ನಾಟಕದ ಹರಿದಾಸರುಗಳು ತಿರುಮಲೆಯ ತಿಮ್ಮಪ್ಪನ ಮೇಲೆ ರಚಿಸಿರುವ ಕೀರ್ತನೆಗಳನ್ನು ವಿಶ್ಲೇಷಿಸಿದರೆ ತಿರುಪತಿ-ತಿರುಮಲೆಯ ಇತಿಹಾಸವನ್ನು ಅಲ್ಲಿ ನಡೆಯುತ್ತಿದ್ದ ಬ್ರಹ್ಮರಥೋತ್ಸವದ ದೃಶ್ಯಗಳನ್ನು ಕಟ್ಟಿಕೊಡಬಹುದು.

# ಮೈಸೂರು ದಸರಾ ಎಷ್ಟೊಂದು ಸುಂದರ

– ಡಾ॥ ಕೆ.ವಿ. ರಾಜೇಶ್ವರಿ
95356 41095







ಮೈಸೂರು ದಸರಾ ತುಂಬಾ ಸುಂದರ. ಇದು ಧಾರ್ಮಿಕವಾಗಿಯೂ ಆಚರಿಸಲ್ಪಡುತ್ತದೆ. ಜನರಿಗೆ ನವರಾತ್ರಿಯ ಸಮಯದಲ್ಲಿ ಮನರಂಜನೆ ಒದಗಿಸುವ ನಿಟ್ಟಿನಲ್ಲಿಯೂ ಆಚರಿಸಲಾಗುತ್ತದೆ.

ದಸರೆಯು "ದಶ + ಹರಾ" ಎನ್ನುವ ಪದದಿಂದ ಬಂದಿದೆ. ಅಂದರೆ ಹತ್ತು ದಿನಗಳ ಕಾಲ ಆಚರಿಸುವ ಹಬ್ಬ. ಆ ಸಮಯದಲ್ಲಿ ಮೈಸೂರು ನಗರ ಮತ್ತು ಅರಮನೆ ದೀಪಾಲಂಕಾರಗಳಿಂದ ಸರ್ವಾಂಗ ಸುಂದರವಾಗಿ ಕಂಗೊಳಿಸುತ್ತಿರುತ್ತದೆ. ಮೈಸೂರು ಅರಮನೆ 'ಅಂಬಾವಿಲಾಸ' ವೇ ಮೈಸೂರಿನ ಒಂದು ದೊಡ್ಡ ಆಕರ್ಷಣೆ. ಇನ್ನು ಅದಕ್ಕೆ ದೀಪಾಲಂಕಾರ ಮಾಡಿದರೆ ನಕ್ಷತ್ರಲೋಕವೇ ಧರೆಗಿಳಿದು ಬಂದಂತೆ ಭಾಸವಾಗುತ್ತದೆ. ಇದರ ಸೊಬಗು, ಸೌಂದರ್ಯಗಳನ್ನು ವರ್ಣಿಸಲು ಪದಗಳು ಸಾಲವು, ಅದು ನಯನ ಮನೋಹರ ದೃಶ್ಯ.

ದಸರಾ ಮಹೋತ್ಸವ ವಿಶ್ವ ವಿಖ್ಯಾತವಾಗಿದೆ. ವಿಜಯನಗರದ ಅರಸರು ದಸರೆಯ ಹತ್ತು ದಿನಗಳನ್ನು ಬಹಳ ವೈಭವೋಪೇತವಾಗಿ ಆಚರಿಸುತ್ತಿದ್ದರೆಂದು ಅನೇಕ ವಿದೇಶಿ ಯಾತ್ರಿಕರು ವರ್ಣಿಸಿದ್ದಾರೆ. ಮೈಸೂರು ವಿಜಯನಗರದ ಸಾಮಂತ ರಾಜ್ಯವಾಗಿತ್ತು. ವಿಜಯನಗರದ ವಿನಾಶದ ನಂತರ ಮೈಸೂರಿನ ಒಡೆಯರು ಇದನ್ನು ಆಚರಿಸಲು ಪ್ರಾರಂಭಿಸಿದರು. ಮೊದಲು 1610 ರಲ್ಲಿ ದಸರಾ ಮಹೋತ್ಸವವನ್ನು ಆಚರಣೆಗೆ ತಂದಿದ್ದು ರಾಜ ಒಡೆಯರು, ನಂತರ ಮೈಸೂರಿನಲ್ಲಿ ಯದುವಂಶದ ಅರಸರ ಆಳ್ವಿಕೆ ಮುಂದುವರಿದಂತೆ ದಸರಾ ಮಹೋತ್ಸವವೂ ಮುಂದುವರಿಯಿತು. 1969 ರ ವರೆಗೂ ಮೈಸೂರು ಅರಸರೇ ದಸರಾಮಹೋತ್ಸವ ನಡೆಸುತ್ತಿದ್ದರು. 1969 ರಲ್ಲಿ ಜಯಚಾಮರಾಜೇಂದ್ರರು ಆಚರಿಸಿದ ಕೊನೆಯ ದಸರಾದಿಂದ ರಾಜ್ಯ ಸರ್ಕಾರವೇ ಅದನ್ನು ವಹಿಸಿಕೊಂಡು ಮುನ್ನಡೆಸುತ್ತಿದೆ.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಂತೂ ದಸರಾವೈಭವ ಮುಗಿಲು ಮುಟ್ಟಿತ್ತು. ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಿದ್ದ ವಿಜಯದಶಮಿಯ ದಿನದ 'ಜಂಬೂ ಸವಾರಿ'ಯನ್ನು ನೋಡಲು ಲಕ್ಷಾಂತರ ಜನರು ದೇಶ ವಿದೇಶಗಳಿಂದ ಬರುತ್ತಿದ್ದರು. ಅಂದು ಅರಮನೆಯಿಂದ ಹೊರಡುವ ಜಂಬೂಸವಾರಿ ಬನ್ನಿ ಮಂಟಪಕ್ಕೆ ಹೋಗಿ, ಅಲ್ಲಿ 'ಪಂಜಿನ ಕವಾಯಿತು' ಕಾರ್ಯಕ್ರಮ ಆದನಂತರ ಮತ್ತು ಮೆರವಣಿಗೆಯಲ್ಲಿ ಅದೇ ದಾರಿಯಲ್ಲಿ ವಾಪಸ್ಸು ಬರುತ್ತಿತ್ತು. ಹಗಲು ಮತ್ತು ರಾತ್ರಿಯಲ್ಲಿ ನಡೆಯುತ್ತಿದ್ದ ಈ ವೈಭವದ ಮೆರವಣಿಗೆಯನ್ನು ನೋಡಲು ಎರಡು ಕಣ್ಣುಗಳು ಸಾಲದನ್ನುವಂತಿತ್ತು. ಮೈಸೂರು ಒಡೆಯರು ನಡೆಸುತ್ತಿದ್ದ ಜಂಬೂಸವಾರಿ ವಿಶ್ವ ವಿಖ್ಯಾತವಾಗಿತ್ತು. ಧಾರ್ಮಿಕವಾಗಿ ನೋಡುವುದಾದರೆ ದಸರೆಯ ಹತ್ತು ದಿನಗಳು ತುಂಬಾ ಮಹತ್ವವಾದವು. ಈ 10 ದಿನಗಳು ದೇವಿಯನ್ನು ನಾನಾ ಅಲಂಕಾರಗಳಿಂದ, ನಾನಾ ರೂಪದಲ್ಲಿ ಪೂಜಿಸಲಾಗುತ್ತದೆ. ಚಾಮುಂಡೇಶ್ವರಿ ದೇವಿಯು ಮೈಸೂರು ಅರಸರ ಕುಲದೇವತೆ. ದಸರೆಯ 9 ದಿನಗಳು ಮೈಸೂರು ಒಡೆಯರು ವ್ರತದಲ್ಲಿದ್ದು ದೇವಿಯನ್ನು ಆರಾಧಿಸುತ್ತಾರೆ. ವಿಜಯದಶಮಿಯಂದು ದೇವಿದುರ್ಗೆ ಜನರನ್ನು ಹಿಂಸಿಸುತ್ತಿದ್ದ ಮಹಿಷಾಸುರನೆಂಬ ರಾಕ್ಷಸನನ್ನು ಸಂಹರಿಸಿದ ದಿನ . ಜನರಿಗೆ ರಾಕ್ಷಸನ ಕಾಟದಿಂದ ಮುಕ್ತಿ ದೊರಕಿದ ಸಂತೋಷದ ದಿನ ವಿಜಯದಶಮಿ.

ದಸರಾ ಪ್ರಾರಂಭವಾಗುವ ಕೆಲವು ದಿನಗಳ ಮುಂಚೆಯೇ ಒಂದು ಶುಭಮುಹೂರ್ತದಲ್ಲಿ ಚಿನ್ನದ ಸಿಂಹಾಸನದ ಜೋಡಣೆ ಆಗುತ್ತದೆ. ಆಶ್ವಯುಜ ಪಾಡ್ಯದಿಂದ ಪ್ರಾರಂಭವಾಗಿ ನವಮಿಯವರೆಗೆ ದೇವಿಯ ಆರಾಧನೆ ನಡೆಯುತ್ತದೆ. ಲಕ್ಷ್ಮಿ, ಸರಸ್ವತಿ, ದುರ್ಗೆಯರ ರೂಪದಲ್ಲಿ ದೇವಿಯನ್ನು ಆರಾಧಿಸಲಾಗುತ್ತದೆ. ದಸರೆಯ 9 ದಿನ ಮೈಸೂರಿನ ಕುಲದೇವಿಯಾದ ಚಾಮುಂಡೇಶ್ವರಿಯನ್ನು ಅನೇಕ ರೂಪಗಳಲ್ಲಿ ಸಿಂಗರಿಸಿ ಅನೇಕ ರೀತಿಯ ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ. ಜನರಿಗೆ ನೆಮ್ಮದಿ-ಶಾಂತಿ ಸೌಖ್ಯ ನೀಡಲೆಂದು ದೇವಿಯಲ್ಲಿ ಪ್ರಾರ್ಥಿಸುತ್ತಾರೆ. ದೇವಿಯ ಉಪಾಸಕರಿಗಂತೂ ನವರಾತ್ರಿ ಅತ್ಯಂತ ಪ್ರಮುಖ

ವಾದುದ್ದು ವಾರವೆಲ್ಲಾ ಉಪವಾಸ ಮಾಡಿ ದೇವಿಯನ್ನು ಆರಾಧಿಸುತ್ತಾರೆ ಅನೇಕರು.6ನೆಯ ದಿನ ಸರಸ್ವತಿಯ ಅಲಂಕಾರದಲ್ಲಿ ದೇವಿಯನ್ನು ಪೂಜಿಸಿದರೆ ಅಷ್ಟಮಿಯಲ್ಲಿ ದುರ್ಗೆಯೆಂದು ಪೂಜಿಸುತ್ತಾರೆ. ಬಂಗಾಳದಲ್ಲಿ ದುರ್ಗಾಷ್ಟಮಿಯಂದು ಬಹಳ ವೈಭವದಿಂದ ದೇವಿಯ ಪೂಜೆ ನಡೆಯುತ್ತದೆ. ದಸರೆಯ 9 ದಿನಗಳನ್ನು ದೇವಿರಾತ್ರಿಗಳೆಂದೇ ಕರೆಯುತ್ತಾರೆ. ಅದು ಶ್ರೀಕೃಷ್ಣ ನರಕಾಸುರನನ್ನು ವಧಿಸಿದ ದಿನವೂ ಹೌದು, ಅಜ್ಞಾನದ ಮೇಲೆ ಸುಜ್ಞಾನ ಗೆಲುವು ಪಡೆದ ದಿನವೂ ಹೌದು. ಮಹಾನವಮಿಯಂದು ನಾವು ಉಪಯೋಗಿಸುವ ವಾಹನಗಳು, ಶಸ್ತ್ರಾಸ್ತ್ರ ಗಳು ಎಲ್ಲಕ್ಕೂ ಪೂಜೆಯಾಗುತ್ತದೆ. ವಿಜಯನಗರದಲ್ಲಿ ಮಹಾನವಮಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಅದಕ್ಕೆಂದೇ ಮಹಾನವಮಿ ದಿಬ್ಬಕೂಡಾರಟ್ಟಲಾಗಿತ್ತು. ಅಂದು ಪಂಜುಗಳನ್ನು ಉರಿಸಿ ಅವುಗಳ ಬೆಳಕಿನಲ್ಲಿ ಚಿತ್ತಾಕರ್ಷಕ ಆಟಗಳು, ನಾಟ್ಯಗಳು, ಕುಸ್ತಿ ಪಂದ್ಯಗಳನ್ನು ನಡೆಸಲಾಗುತ್ತಿತ್ತು ವಿವಿಧ ರೀತಿಯ ಬಾಣ ಬಿರುಸುಗಳನ್ನು ಉರಿಸುತ್ತಿದ್ದರು.











10ನೆಯ ದಿನದ ವಿಜಯದಶಮಿಯ ವೈಭವವನ್ನು ವರ್ಣಿಸಲು ಸಾಧ್ಯವಿಲ್ಲ. ಜಂಬೂ ಸವಾರಿಯ ಆಕರ್ಷಣೆ ಜಗದ್ವಿಖ್ಯಾತ. ಆನೆಯ ಮೇಲೆ ಕಟ್ಟಿದ ಚಿನ್ನದ ಅಂಬಾರಿಯಲ್ಲಿ ರಾಜರು ಕುಳಿತು ಮೆರವಣಿಗೆಯಲ್ಲಿ ಬನ್ನಿಮಂಟಪಕ್ಕೆ ಹೋಗಿ ಅಲ್ಲಿ ಪಂಜಿನಕವಾಯಿತು ನಡೆದ ಮೇಲೆ ಹಿಂತಿರುಗಿಸುತ್ತಿದ್ದರು. ಮಹಾರಾಜರು ಚಿನ್ನದ ಸಿಂಹಾಸನದಲ್ಲಿ ಕುಳಿತು 10 ದಿನಗಳೂ ದರ್ಬಾರನ್ನು ನಡೆಸುತ್ತಾರೆ. ವಿಜಯದಶಮಿಯ ದಿನದಂದು ಪ್ರತಿಯೊಂದು ಜಿಲ್ಲೆಯಲ್ಲಿ ಪ್ರಖ್ಯಾತವಾದ ಒಂದೊಂದು ಅಂಶವನ್ನು ಟ್ಯಾಬ್ಲೋ ರೂಪದಲ್ಲಿ ಮೆರವಣಿಗೆಯಲ್ಲಿ ಬರುತ್ತಾರೆ. ಇವನ್ನು ಸ್ತಬ್ಧ ಚಿತ್ರಗಳೆನ್ನುತ್ತಾರೆ.


ವಿಜಯದಶಮಿಯ ಮೆರವಣಿಗೆ, ಪಂಜಿನ ಕವಾಯಿತು ಕ್ರೀಡೆಗಳು, ಲಲಿತಕಲೆಗಳು, ಕವಿಗೋಷ್ಠಿಗಳು ಆಹಾರಮೇಳಗಳು, ಚಲನಚಿತ್ರಗಳ ಪ್ರದರ್ಶನ ಕುಸ್ತಿಪಂದ್ಯಗಳು ಎಂದು ಅನೇಕ ರೀತಿಯ ಆಕರ್ಷಣೆಗಳು ಇಂದಿನ ದಸರಾ ಉತ್ಸವದಲ್ಲಿ ನಡೆಯುತ್ತವೆ. ಅನೇಕ ರೀತಿಯ ರೈತ ಮೇಳಗಳು ನಡೆಯತ್ತವೆ. ಜನರ ಮನ ರಂಜನೆಗೆ ಯಾವುದೇ ಕೊರತೆಯಿರುವುದಿಲ್ಲ.

ದಸರಾ ಅಂಗವಾಗಿ ಕ್ರೀಡಾ ಕೂಟಗಳನ್ನು ಏರ್ಪಡಿಸಿ ಅವುಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಡುತ್ತಾರೆ. ಅದೇ ರೀತಿ ಕುಸ್ತಿ ಪಂದ್ಯಗಳನ್ನು ಏರ್ಪಡಿಸಿ ಗೆದ್ದವರಿಗೆ ಬಹುಮಾನಗಳನ್ನು ಕೊಡುತ್ತಾರೆ. ರಾಜರ ಆಳ್ವಿಕೆಯಲ್ಲಿ ಅವರು ಅಂಬಾರಿಯಲ್ಲಿ ಕುಳಿತು ಮೆರವಣಿಗೆ ನಡೆಸುತ್ತಿದ್ದರು. ಈಗ ಸರ್ಕಾರ ನಡೆಸುವ ದಸರಾ ಆಗಿರುವುದರಿಂದ ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯ ವಿಗ್ರಹವನ್ನಿಟ್ಟು ಮೆರವಣಿಗೆ ಮಾಡುತ್ತಾರೆ. ಮೆರವಣಿಗೆ ವೀಕ್ಷಿಸಲು ರಸ್ತೆಯ ಇಕ್ಕೆಲಗಳಲ್ಲಿ ಕಾದಿರುವ ಜನ ತಾಯಿ ಚಾಮುಂಡೇಶ್ವರಿಯ ವಿಗ್ರಹ ಕಂಡು ಭಕ್ತಿ ಪರವಶತೆಯಿಂದ ಕೈಮುಗಿಯುತ್ತಾರೆ. ಇದು ನಮ್ಮ ನಾಡ ದೇವಿಯ ಬಗೆಗಿನ ಜನರ ಅಭಿಮಾನ, ಭಕ್ತಿ, ಗೌರವಗಳನ್ನು ಬಿಂಬಿಸುತ್ತದೆ.

ದಸರೆಯ ಮತ್ತೊಂದು ಪ್ರಮುಖ ಆಚರಣೆಯೆಂದರೆ ಈ ಹತ್ತು ದಿನಗಳು ಗೊಂಬೆಗಳನ್ನು ಅಲಂಕರಿಸಿ, ಅವರನ್ನು ದೇವರೆಂದು ಪೂಜಿಸಲಾಗುತ್ತದೆ. ಅದರಲ್ಲಿ ಪಟ್ಟದ ಬೊಂಬೆಗಳೇ ಆಕರ್ಷಣೆ,ಸಂಜೆಯ ಹೊತ್ತು ಎಲ್ಲರನ್ನೂ ಕರೆದು ತಿಂಡಿ, ಬಾಗಿನ ಕೊಟ್ಟು ಸತ್ಕರಿಸುತ್ತಾರೆ. ಮೈಸೂರು ಒಡೆಯರು ಕುಸ್ತಿಗೆ ಬಹಳ ಪ್ರೋತ್ಸಾಹ ಕೊಟ್ಟರು. ಮೈಸೂರು ಹಲವು ಗರಡಿ ಮನೆಗಳ ತಾಣವಾಗಿತ್ತು ರಾಜರ ಕಾಲದಲ್ಲಿ ಪೈಲ್ವಾನರಿಗೆ ಬಹಳ ಮರ್ಯಾದೆಯಿತ್ತು. ವಜ್ರಮುಷ್ಟಿ ಕಾಳಗ ಮುಂತಾದ ಕುಸ್ತಿಪಂದ್ಯಗಳು ಇಂದಿಗೂ ದಸರೆಯ ಅಂಗವಾಗಿ ನಡೆಯುತ್ತವೆ. ಮೊದಲು ದಸರಾ ಸಮಯದಲ್ಲಿ ದರ್ಬಾರ್ ಹಾಲಿನಲ್ಲಿ ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿತ್ತು. ಈಗ ಅದು ಅರಮನೆಯ ಮುಂದಿನ ಆವರಣದಲ್ಲಿ ನಡೆಯುತ್ತದೆ.

ಈ ಸಮಯದಲ್ಲಿ ಚಾಮುಂಡಿ ಬೆಟ್ಟದಲ್ಲಿಯೂ ದೀಪಾಲಂಕಾರವಿರುತ್ತದೆ. ಅರಮನೆಯ ಸಂಪ್ರದಾಯದಂತೆ ಸಂಜೆಯ ಹೊತ್ತು ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸುವನ್ನು ಅರಮನೆಯ ಆವರಣದಲ್ಲಿರುವ ಸೋಮೇಶ್ವರ ಮತ್ತು ಬಸವೇಶ್ವರ ದೇವಸ್ಥಾನಗಳ ಬಳಿಗೆ ಕರೆದುಕೊಂಡು ಹೋಗಿ ಪೂಜೆಯನ್ನು ಸಲ್ಲಿಸಿ ಪುನಃ ಅರಮನೆಗೆ ಕರೆತರಲಾಗುತ್ತದೆ. ಈ ರೀತಿ ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ಮೈಸೂರಿನ ದಸರಾ ನಡೆಯುತ್ತದೆ.

# ಹರಿದಾಸರ ಕೃತಿಗಳಲ್ಲಿ ಶ್ರೀನಿವಾಸನ ವೈಭವ



– ಡಾ॥ ಲಕ್ಷ್ಮೀಕಾಂತ ವಿ. ಮೊಹರೀರ
90609 31359

ಶತಮಾನಗಳಿಂದ ಕರ್ನಾಟಕದ ಸಾಹಿತ್ಯ, ಸಂಗೀತ ಸಂಸ್ಕೃತಿಗಳಿಗೆ ಮೂಲ ಭೂತವಾಗಿರುವುದೇ ನಮ್ಮ ಸನಾತನ ಧರ್ಮ. ಇಂತಹ ಸನಾತನ ಧರ್ಮದ ಮೂಲಕ ಉತ್ತಮ ಸಾಮಾಜಿಕ ವಾತಾವರಣವನ್ನು ನಿರ್ಮಿಸಿದ ಶ್ರದ್ಧಾಳುಗಳಲ್ಲಿ ಹರಿದಾಸರು ಪ್ರಮುಖರು. ಇಂತಹ ಹರಿದಾಸರು ಜೀವನದಲ್ಲಿ ನಿಷ್ಠೆ. ಸಾಹಿತ್ಯದಲ್ಲಿ ಗಹನವಾದ ತತ್ವಗಳನ್ನು ಅಡಗಿಸಿ ಜನ ಸಾಮಾನ್ಯರನ್ನು ಉನ್ನತ ಜೀವನ ದತ್ತ ಉದ್ದೀಪಿಸುವ ಮಹಾ ಪ್ರಯತ್ನ ಮಾಡಿದ ಮಹಾನುಭಾವರೆನ್ನಬಹುದು.

ದೇವ ಭಾಷೆಯಾದ ಸಂಸ್ಕೃತದಲ್ಲಿದ್ದ ವಿಚಾರಗಳನ್ನು ಜನಮಾನಸಕ್ಕೆ ಮುಟ್ಟಿಸುವ ಭಗೀರಥರೇ ಹರಿದಾಸರೆನ್ನಬಹುದು. ತಮ್ಮ ಅಭಿವ್ಯಕ್ತಿಯ ಮೂಲಕ ಕನ್ನಡ ಭಾಷೆಯಲ್ಲಿ ಸರಳ ಹಾಡುಗಳನ್ನು ಹಾಡಿ ತಮ್ಮೆಡೆಗೆ ಆಕರ್ಷಿಸಿದರಲ್ಲದೇ ಅನುಭವಾಮೃತದ ಸಾರವನ್ನು ಜನಸಾಮಾನ್ಯರಿಗೆ ಪದಪದ್ಯಗಳ ಮೂಲಕ ಉಣ ಬಡಿಸಿ ತಮ್ಮ ಸಾಂಸ್ಕೃತಿಕ ಅಭಿರುಚಿಯನ್ನು ಧಾರೆ ಎರೆದರು.

ಈ ಕಲಿಯುಗದಲ್ಲಿ ಕ್ಷಮಾ ಸಮಾಧಾನದ ಭಕ್ತ ಪ್ರಿಯನಾದ ಶ್ರೀ ಶ್ರೀನಿವಾಸ ತನಗೆ ಅವತಾರವಿಲ್ಲದಿದ್ದರೂ ಸುಜೀವಿಗಳು ಧರ್ಮಮಾರ್ಗದಿಂದ ಚ್ಯುತರಾಗದಂತೆ ನಿರಂತರ ರಕ್ಷಿಸಲು ಭೂ ವೈಕುಂಠವಾದ ವೆಂಕಟಾದ್ರಿಯಲ್ಲಿ ಬಂದು ನಿಂತಿದ್ದಾನೆ.

ಇಂತಹ ಸ್ವಾಮಿಯ ಸೇವೆಯಿಂದ ತಮ್ಮ ಜನ್ಮಸಾರ್ಥಕ ಪಡಿಸಿಕೊಳ್ಳುತ್ತಾ ಜಗತ್ತಿಗೆ ಬೆಳಕು ನೀಡಿದ ಹರಿದಾಸರನೇಕರು. ಅವರಲ್ಲಿ ವಿಶೇಷವಾಗಿ ಶ್ರೀಪಾದರಾಜರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು, ಶ್ರೀಪುರಂದರದಾಸರು, ಶ್ರೀಕನಕದಾಸರು, ಶ್ರೀವಿಜಯದಾಸರು, ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾಸರು ಅಗ್ರಗಣ್ಯರು, ಕಲಿಯುಗದಲ್ಲಿ ಭಗವಂತನ ಅನುಗ್ರಹ ಪಡೆಯಲು ಭಕ್ತಿಯಿಂದ ಶ್ರೀ ಹರಿಯ ಗುಣಗಳನ್ನು ಹೊಗಳಿ ಹಾಡುವುದೇ ಸುಲಭ ಮಾರ್ಗ ಎಂದು ಸಾರಿದರು.

ಭೂವೈಕುಂಠವೆಂದೇ ಹೆಸರಾದ ತಿರುಪತಿಯ ವೆಂಕಟಾದ್ರಿಯಲ್ಲಿ ನೆಲೆನಿಂತ ಶ್ರೀನಿವಾಸ ಕಲಿಯುಗದ ಆದಿದೈವವೆಂದೇ ಪ್ರಸಿದ್ಧವಾಗಿದ್ದಾನೆ.

"ವೆಂಕಟಾದ್ರಿ ಸಮಂ ಸ್ಥಾನಂ
ಬ್ರಹ್ಮಾಂಡೆ ನಾಸ್ತಿ ಕಿಂಚನ।
ವೆಂಕಟೇಶ ಸಮೋ ದೇವೋ
ನ ಭೂತೋ ನ ಭವಿಷ್ಯತಿ॥"

ಎಂಬ ಬ್ರಹ್ಮ ಪುರಾಣದ ಸಾಲು ಶ್ರೀನಿವಾಸನ ವೆಂಕಟಾದ್ರಿಯ ವೈಶಿಷ್ಟಗಳನ್ನು ಎತ್ತಿ ಹಿಡಿಯುತ್ತದೆ. ಭಕ್ತಿ ಸಾಹಿತ್ಯದ ಧಾರೆಯಾಗಿ ಹರಿದು ಬಂದ ದಾಸಸಾಹಿತ್ಯ ವಾಹಿನಿ ಮೂಲಕ ಹರಿದಾಸರು ಶ್ರೀನಿವಾಸನ ಪಾದಗಳಿಗೆ ಅಭಿಷೇಕ ಮಾಡಿ ಪುನೀತರಾಗಿದ್ದಾರೆ. ಸಾರ್ಥಕ ಸುಜೀವಿಗಳಾಗಿದ್ದಾರೆ. ಧನ್ಯರಾಗಿ ಮಾನ್ಯರಾಗಿ ಮೆರೆದಿದ್ದಾರೆ.

ಶ್ರೀನಿವಾಸನ ಕರುಣೆಯಿಂದಲೇ ಹೊಮ್ಮಿದ ಕೃತಿಗಳನ್ನು ಶ್ರೀನಿವಾಸನ ಬಣ್ಣನೆಗೆ ಸಾಧನೆಗಳಾಗಿಸಿಕೊಂಡು ಸಾಧಕ ಜೀವಿಗಳಾದರು.

ಕನ್ನಡದಲ್ಲಿ ಭಕ್ತಿ ವಾಙ್ಮಯಕ್ಕೆ ಸೂಕ್ತ ಸ್ಥಾನ ಕಲ್ಪಿಸಿಕೊಟ್ಟ ಹರಿದಾಸರು, ತಿಳಿಗನ್ನಡದಲ್ಲಿ ರಚಿಸಿದ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಾಗಬದ್ಧವಾಗಿ ಹಾಡಿ ಸಂಗೀತವನ್ನು ಪ್ರಸಿದ್ಧಿಗೆ ತಂದರು.

ಹರಿದಾಸ ಸಂಸ್ಕೃತಿ ಯನ್ನು ಉಚ್ಚಮಟ್ಟಕ್ಕೆ ತಂದಂತಹ ಈ ಹರಿದಾಸರು ರಚಿಸಿದ ಕೀರ್ತನಾದಿ ಪ್ರಕಾರಗಳಲ್ಲಿ ಮೂಡಿ ಬಂದ ಶ್ರೀನಿವಾಸನ ವರ್ಣನೆಯು ಶ್ರವಣಮನಕಾ ನಂದವೀವುದು ಎಂಬುವುಷ್ಟರ ಮಟ್ಟಿಗೆ ಜಾಜ್ವಲ್ಯ ಸಾಹಿತ್ಯದಿಂದ ಪರಿಶೋಭಿಸುತ್ತಿದೆ. ಕೀರ್ತನಾದಿಗಳೆಂಬ ಆಣಿ ಮುತ್ತುಗಳನ್ನೆಲ್ಲ ಈ ಭೂಮಿಕೆಯಲ್ಲಿ ಹಣೆದು ಹರಿದಾಸರ ಅಂತರಂಗ ದಲ್ಲಿ ಹುದುಗಿದ ಶ್ರೀನಿವಾಸನ ಕುರಿತಾದ ಭಕ್ತಿ ಸ್ವರೂಪವನ್ನು ಇಲ್ಲಿ ಪಡಿ ಮೂಡಿಸಲಾಗಿದೆ.

ದಾಸಶ್ರೇಷ್ಠರಾದ ಶ್ರೀಪುರಂದರದಾಸರು ಶ್ರೀನಿವಾಸನನ್ನು ಕುರಿತು ಅನನ್ಯವಾಗಿ ಸ್ತುತಿಸಿದ್ದಾರೆ. ಭಕ್ತರಿಗೆ ಎಲ್ಲವೂ ಆಗಿರುವ ಶ್ರೀನಿವಾಸನನ್ನು ವರ್ಣಿಸಿದ ಬಗೆ ಹೀಗಿದೆ.

"ನಿನ್ನಂಥ ತಂದೆ ಎನಗುಂಟು ನಿನಗಿಲ್ಲ
ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ದೊರೆ ಎನಗುಂಟು ನಿನಗಿಲ್ಲ
ನೀನೆ ಪರದೇಶಿ ನಾನೇ ಸ್ವದೇಶಿ

ನಿನ್ನ ಅರಸಿ ಲಕ್ಷ್ಮೀ ಎನಗೆ ತಾಯಿಯುಂಟು
ಎನಗಿದ್ದ ತಾಯಿ ತಂದೆ ನಿನಗ್ಯಾರು
ತೋರೋ ಪುರಂದರವಿಠಲ''

ನಮ್ಮ ಹರಿದಾಸರಿಗೆ ಶೇಷಾಚಲವಾಸಿಯಾದ ಶ್ರೀನಿವಾಸನೆಂದರೆ ಪರಮೋತ್ಕೃಷ್ಟ ಅವನ ವರ್ಣನೆಗೆ ಅದೆಷ್ಟು ಪದ, ಸುಳಾದಿ, ಉಗಾಭೋಗ, ಮುಂಡಿಗೆಯೋ? ಅಷ್ಟಾದರೂ ಅವನ ಅಚಿಂತ್ಯಾದ್ಭುತ ಮಹಿಮೆಯನ್ನು ವರ್ಣಿಸಲು ಸಾಧ್ಯವೇ? ಕುಲಕೋಟಿ ಉದ್ಧರಿಸುವ ಅವರ ದಿವ್ಯನಾಮಗಳು ಸಾಲಿಗ್ರಾಮ ಶಿಲಾರೂಪದಲ್ಲಿ ಸ್ವಯಂವ್ಯಕ್ತನಾಗಿ ನಿಂತ ಅವನ ಭಂಗಿ ಸೂರ್ಯಕೋಟಿ ಪ್ರಭೆಯಿಂದ ಪ್ರಜ್ವಲಿಸುವ ಮುಖಕಮಲ, ಅವನ ಕಲ್ಯಾಣದ ವೈಭೋಗ, ತನ್ನ ವಾಸಕ್ಕಾಗಿ ಈ ಪ್ರದೇಶವನ್ನು ಆಯ್ಕೆ ಮಾಡಿದ ಹಿನ್ನಲೆ, ಈ ಪ್ರದೇಶದ ಪೌರಾಣಿಕ ಹಿನ್ನೆಲೆ, ಅವನ ಉತ್ಸವಗಳು, ಅವನ ಭಕ್ತರ ಭಕ್ತಿ ವೈಚಿತ್ರ್ಯ, ಕಲ್ಪನೆಗೆ ಎಟುಕದ ಅವನ ಅಸದೃಶ ಪವಾಡಗಳು ಹೀಗೆ ಹತ್ತು ಹಲವು ಕಾರಣಗಳಿಂದ ಇಂದು ಈ ಕ್ಷೇತ್ರವು ಅದ್ವಿತೀಯ ಭೂವೈಕುಂಠವೆಂದೇ ಖ್ಯಾತವಾಗಿದೆ.

ಕರ್ನಾಟಕದ ಸಂಗೀತ ಪಿತಾಮಹಾರೆಂದೆನಿಸಿದ ಪುರಂದರ ದಾಸರು ತಿರುಪತಿಯ ತಿಮ್ಮಪ್ಪನ ಕುರಿತಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

''ಬಂದು ನಿಂತಿಹನು ನೋಡೆ ಭೂತಳದಿ ವೆಂಕಟ
ಇಂದಿರೆಯೊಡಗೂಡಿ ಒಪ್ಪುವ ನಿರಂತರ
ಪೊಂದಿ ಭಜನೆಯ ಮಾಡಿ ಆನಂದವ ಬೇಡಿ''

ಎಂದು ತಿರುಮಲಾಧೀಶನನ್ನು ಪರಿಚಯಿಸುತ್ತಾರೆ. ಪ್ರತಿ ಶುಕ್ರವಾರ ಕ್ರೊಮ್ಮೆ ತೊಡಿಸುವ ಹಾರ ಮುಕುಟಾಭರಣ ಕುಂಡಲಾದಿಗಳಿಂದ ಅಲಂಕೃತನಾಗಿದ್ದ ತಿರುಮಲೇಶನನ್ನು,

''ವಾರವಾರಕೆ ಪೂಜೆಗೊಂಬುವ
ಹಾರ ಮುಕುಟಾಭರಣ ಕುಂಡಲ
ಧಾರಿ ಭುಜಕೇಯೂರು ಭೂಷಿತ
ಮಾರಪಿತ ಗುಣ ಮೋಹನಾಂಗ''

ಎಂಬುದಾಗಿ ಗುಣಗಾನ ಮಾಡಿದ್ದಾರೆ. ಭಗವಂತನ ಚಾರುಪೀತಾಂಬರ ಕಟಿ, ಕರವೀರ, ಕಲ್ಹಾರಾದಿ ಹೂಗಳಿಂದ ಶೋಭಿಸುವ ಕೊರಳು, ಅವನ ನಗುಮುಖಗಳನ್ನು ಕಣ್ತುಂಬ ನೋಡಿ. ತೃಪ್ತಿಯಿಂದ ಬಣ್ಣಿಸಿದ್ದಾರೆ. ಆದಿಮಧ್ಯಾಂತ ರಹಿತನೂ ಸ್ವಾಮಿ ಪುಷ್ಕರಣೀತೀರನೂ ಆದ ತಿರುಮಲೇಶ ಬ್ರಹ್ಮೋತ್ಸವದ ವೈಭವಗಳಿಂದ ಮೆರೆಯುತ್ತಿರುವನೆನ್ನುತ್ತಾರೆ. ಅಂದರೆ ಪುರಂದರದಾಸರು ತಿರುಪತಿಯ ಬ್ರಹ್ಮೋತ್ಸವ ಕಾಲದಲ್ಲಿ ತಿಮ್ಮಪ್ಪನ ದರ್ಶನಕ್ಕೆ ಹೋಗಿದ್ದಾರೆಂದು ಕಾಣುತ್ತದೆ.

ತಿರುಮಲೇಶನ ಮೂರ್ತಿಯನ್ನು ಕಂಡ ಅವರ ಸಂತೃಪ್ತಿ ಈ ಕೀರ್ತನೆ ರೂಪದಲ್ಲಿ ಹೊರ ಹೊಮ್ಮಿದೆ.

ಹಾಗೆಯೇ ಶೇಷಾಚಲನಿವಾಸನಾದ ಶ್ರೀನಿವಾಸನ ದಾಸನಾಗುವ ತಮ್ಮ ಮನದ ಇಂಗಿತವನ್ನು ಹೊರಹಾಕುತ್ತ,

''ದಾಸನ ಮಾಡಿಕೋ ಎನ್ನ ಸಾಸಿರನಾಮದ ವೆಂಕಟರಮಣ
ದುರಿತರಾಶಿಗಳೆಲ್ಲ ತರಿದು ಸ್ವಾಮಿ ಪುರಂದರವಿಠಲ ಕರುಣದಿ ಕರೆದು''

ಎಂಬುದಾಗಿ ಆ ಭಗವಂತನಲ್ಲಿ ಮೊರೆಯಿಟ್ಟಿದ್ದಾರೆ. ಕನಕದಾಸರು ತಿರುಮಲೇಶನನ್ನು ಮನಸಾರೆಯಾಗಿ ಸ್ಮರಿಸುತ್ತಾ,

''ಶೇಷಾಚಲ ಕಾಗಿನೆಲೆಯಾದಿಕೇಶವ
ದಾಸರ ದಾಸರ ದಾಸರ ಮನೆಯ
ಬಂಟನಾಗಿ ಬಾಗಿಲ ಕಾಯ್ವೆ''

ಎಂಬುದಾಗಿ ನುಡಿದಿದ್ದಾರೆ. ಇವರು ತಮ್ಮ ಮತ್ತೊಂದು ಕೃತಿಯಲ್ಲಿ ತಿರುಮಲೇಶನನ್ನು ಕುರಿತು,

''ಸಾಕು ಸಾಕು ಮನುಜ ಸೇವೆಯು
ರಂಗಯ್ಯ ಇನ್ನು ಒಡೆಯ ವೆಂಕಟಾದ್ರಿ ಮಾಧವಾ''

ಎಂಬುವುದಾಗಿ ನುಡಿದಿದ್ದಾರೆ. ಪುರಂದರದಾಸರಂತೆಯೇ ವಿಜಯದಾಸರು ತಿರುಮಲೇಶನನ್ನು,

''ಸಾಗಿ ಬಾರಯ್ಯ ನೀನಿ ಗೋವಿಂದ
ವೆಂಕಟ ಸಾಗಿ ಬಾರಯ್ಯ ಭವರೋಗ ವೈದ್ಯನೇ ''

ಎಂಬುದಾಗಿ ಮನತುಂಬಿ ಕರೆದಿದ್ದಾರೆ ಹಾಗೆಯೇ,

''ಬಾ ಬಾ ಭಕುತನ ಹೃದಯ ಮಂದಿರ
ಬಾಬಾ ಜಗದೋದ್ಧಾರ
ಬಾ ಬಾನೇಕಾವತಾರ - ಧೀರ''

ಎಂಬುದಾಗಿ ಮತ್ತೊಂದು ಕೃತಿಯಲ್ಲಿ ನಿವೇದಿಸಿದ್ದಾರೆ.

ಶ್ರೀನಿವಾಸನು ಹರಿದಾಸರಿಗೆ ಒಡೆಯನಾಗಿ, ಒಡನಾಡಿಯಾಗಿ, ಇನಿಯನಾಗಿ, ತನಯನಾಗಿ ಕಂಡಿದ್ದಾನೆ, ಭಕ್ತಿಯ ಪಂಚಭಾವಗಳಲ್ಲಿ ಹರಿದಾಸರು ಹರಿಯನ್ನು ಕಾಡುವ, ಬೇಡುವ, ಮೋಹಿಸುವ, ಹೊಗಳುವ, ನಿಂದಿಸುವ, ಛೇದಿಸುವ ಅಭಿವ್ಯಕ್ತಿಸುವ ಪರಿ ಅನನ್ಯವಾಗಿ ಮೂಡಿ ಬಂದಿದೆ. ನವವಿಧ ಭಕ್ತಿಯ ಮೂಲಕವು ಹರಿದಾಸರು ಶ್ರೀನಿವಾಸನನ್ನು ಹಾಡಿ ಹೊಗಳಿದ್ದಾರೆ.

ಕೆಲವರು ತಮ್ಮನ್ನು ಕಾಪಾಡಬೇಕೆಂದು ಮೊರೆಯಿಟ್ಟರೆ, ಮತ್ತೆ ಕೆಲವರು ಅವನ ದರ್ಶನದಿಂದ ತಮಗಾದ ಅಪಾರವಾದ ಆನಂದವನ್ನು ವ್ಯಕ್ತಪಡಿಸುತ್ತಾರೆ.

ತಿರುಪತಿಯ ಬ್ರಹ್ಮೋತ್ಸವ, ರಥೋತ್ಸವ, ಪಲ್ಲಕ್ಕಿ ಉತ್ಸವ, ಶ್ರೀನಿವಾಸ ಕಲ್ಯಾಣ ಇತ್ಯಾದಿಗಳ ಪ್ರಸ್ತಾಪ ಮಾಡಿದ್ದಾರಲ್ಲದೇ, ವೆಂಕಟನ ಚರಣ ಕಮಲಗಳಿಗೆ ವಂದಿಸಿ ತಮ್ಮ ಸೇವೆಯನ್ನು ಅರ್ಪಿಸಿದ್ದಾರೆ.

## ತಿರುಮಲೆ ತಿರುಪತಿ ದೇವಸ್ಥಾನಗಳು

# ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

















# ಸಪ್ತಗಿರಿ

- ‘ಸಪ್ತಗಿರಿ’ ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- ‘ಸಪ್ತಗಿರಿ’ ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- ‘ಸಪ್ತಗಿರಿ’ ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- ‘ಸಪ್ತಗಿರಿ’ ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- ‘ಸಪ್ತಗಿರಿ’ ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ. 2400/-
- ‘ಸಪ್ತಗಿರಿ’ ವಿದೇಷಿ ವಾರ್ಷಿಕ ಚಂದಾ ರೂ. 1030/-
- ‘ಸಪ್ತಗಿರಿ’ ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- ‘ಸಪ್ತಗಿರಿ’ ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು, ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ. ಅಂಚೆ ಮೂಲಕ, ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- ‘ಸಪ್ತಗಿರಿ’ ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್(Chiefeditortpt@gmail.com) ಅನ್ನು ಸಂಪ್ರದಿಸಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 0877-2264359,0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

# ತೆಲುಗು ಕವಿಗಳು ಕಂಡ ಶ್ರೀನಿವಾಸ

– ಗೋನವಾರ. ಕಿಶನ್ ರಾವ್
94414 76538



ತಿರುಪತಿ ತಿಮ್ಮಪ್ಪ ಏಡುಕೊಂಡಲವಾಡ, ಕೋನೇಟಿರಾಯುಡು, ಮಲೆಯಪ್ಪ, ಗೋವಿಂದ ಹೀಗೆ ಅನೇಕ ಹೆಸರುಗಳಿಂದ ಕರೆಯಿಸಿಕೊಳ್ಳುವ ತಿರುಪತಿ, ತಿರುಮಲೆ ಒಡೆಯ ವೆಂಕಟರಮಣನ ಭಕ್ತರೇ ಎಲ್ಲ ಎಂದರೆ ಅದು ನೂರಕ್ಕೆ ನೂರು ಸತ್ಯ. ಸರಿ ಸುಮಾರು ದೇಶದ ಜನಸಂಖ್ಯೆಯು 75% ಕುಟುಂಬಗಳ ಕುಲದೈವ ಅವನು. ಇತ್ತೀಚಿನ ದಿನಗಳಲ್ಲಿಯಂತೂ ವಿದೇಶಗಳಲ್ಲಿ ಸಹ ವೇಂಕಟರಮಣನ ದೇವಾಲಯಗಳ ಸಂಖ್ಯೆ ಮತ್ತ ವನ ಭಕ್ತರ ಸಂಖ್ಯೆ ಅಗಣಿತ...

ಪ್ರಪಂಚದ ಯಾವ ಮೂಲೆಗೆ ಹೋದರೂ ವೆಂಕಟರಮಣನ ದೇವಸ್ಥಾನ ನಿಮಗೆ ಸಿಕ್ಕೇ ಸಿಗುತ್ತದೆ. ಅದು ವೇಂಕಟರಮಣನ ಮಹಿಮೆ. "ಕೊಂಡಲ್ಲೋ ನೆಲ ಕೊನ್ನ ಕೋನೇಟಿರಾಯುಡುವಾಡು" ಹಾಡು ಹರಿಕಥೆ, ಕೀರ್ತನೆ, ಭಕ್ತಿ ಗೀತೆಗಳ ಮಾತು ಬಂದಾಗ ದೇಶದ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ರಚಿತವಾದ ವೆಂಕಟರಮಣನ ನಾಮಸ್ಮರಣೆಯ ಹಾಡುಗಳು ಅಸಂಖ್ಯೆ. ಹೆಚ್ಚಿನ ಪೀಠಿಕೆ ಕೈ ಹಾಕದೆ ನೇರ ವಿಷಯಕ್ಕೆ ಬರುತ್ತೇನೆ. ಎಲ್ಲ ಹಾಡುಗಳನ್ನು ಕ್ರೋಢೀಕರಿಸಿ ಮಾಡುವುದು ಈ ಲೇಖನದ ಉದ್ದೇಶವಲ್ಲ ಅದುದರಿಂದ ಕೆಲವು ಪ್ರಾತಿನಿಧಿಕ ಕವಿಗಳು ರಚಿಸಿರುವ ವೇಂಕಟರಮಣನ ಹಾಡುಗಳನ್ನು ಕುರಿತು ಸಂಕ್ಷೇಪವಾಗಿ ಹೇಳುವುದು ಈ ಬರಹದ ಉದ್ದೇಶ. ತೆಲುಗು ಭಾಷೆಯಲ್ಲಿ ಅತೀ ಪ್ರಸಿದ್ಧ ಕವಿ ಕೀರ್ತನಕಾರ ಎಂದರೆ ಅನ್ನಮಯ್ಯ (ಅನ್ನಮಾಚಾರ್ಯ ಮೇ 9, 1408-ಫೆಬ್ರವರಿ 23, 1503) ವೆಂಕಟರಮಣನ ಅನನ್ಯ ಭಕ್ತ.

15 ನೇ ಶತಮಾನದ ಹಿಂದೂ ಸಂತ ಅನ್ನಮಾಚಾರ್ಯ, ವೆಂಕಟೇಶ್ವರನನ್ನು ಸ್ತುತಿಸುವ ಕೀರ್ತನೆಗಳನ್ನು ರಚಿಸಿದ ಮಧ್ಯಕಾಲೀನ ಭಾರತೀಯ ಸಂಗೀತಕಾರ. ಕರ್ನಾಟಕ ಸಂಗೀತದ ಕಲಾವಿದರಲ್ಲಿ ಈಗಲೂ ಜನಪ್ರಿಯವಾಗಿರುವ ಅನ್ನಮಯ್ಯ ರಚಿಸಿದ ಕೀರ್ತನೆ ಮತ್ತು ಭಕ್ತಿ ಗೀತೆಗಳ ಸಂಗೀತ ರೂಪವು ಕರ್ನಾಟಕ ಸಂಗೀತ ರಚನೆಗಳ ವಿನ್ಯಾಸದ ಮೇಲೆ ಬಲವಾಗಿ ಪ್ರಭಾವ ಬೀರಿದೆ ಎಂದು ನಂಬಲಾಗುತ್ತದೆ. ಅನ್ನಮಾಚಾರ್ಯರನ್ನು ಅವರ ಏಳು ಬೆಟ್ಟಗಳ ವಾಸಿ, ಗೋವಿಂದನ ಮಹಾನ್ ಭಕ್ತನೆಂದು ಗೌರವಿಸುತ್ತಾರೆ.

ತಾಳ್ಳಪಾಕದ ನಾರಾಯಣಸೂರಿ ಮತ್ತು ಅಕ್ಕಮಾಂಬ ದಂಪತಿಗಳ ಹೊಟ್ಟೆಯಲ್ಲಿ ಜನಿಸಿದ್ದು, 1404 ರಲ್ಲಿ ಚಿಕ್ಕಂದಿನಿಂದಲೇ ಇವರಿಗೆ ಅಸೀಮವಾದ ಭಗವದ್ಭಕ್ತಿ, ಆಶುಕವಿತೆಯ ಪ್ರತಿಭೆಗಳಿದ್ದುವು. ಇವರೊಮ್ಮೆ ತಿರುಪತಿಗೆ ಯಾತ್ರೆಗಾಗಿ ಬಂದಿದ್ದಾಗ ಗುರೂಪದೇಶವೂ ಮದುವೆಯೂ ಆಯಿತು. ಅನಂತರ ಅಹೋಬಲಕ್ಕೆ ತೆರಳಿ ಅಲ್ಲಿ ಆದಿವನ್ ಶಠಕೋಪ ಯತಿಗಳಲ್ಲಿ ವೇದಾಂತವನ್ನು ಅಧ್ಯಯನ ಮಾಡಿದರು. ಅದೇ ಕಾಲದಲ್ಲಿ ವಾಲ್ಮೀಕಿ ರಾಮಾಯಣವನ್ನು ಸಂಕೀರ್ತನ ರೂಪವಾಗಿ ರಚಿಸಿದರು. ಇವರ ಪ್ರತಿಭೆಗೆ ಮಾರುಹೋದ ಸಾಳುವ ಗುಂಡ ನರಸಿಂಹರಾಯ ಇವರನ್ನು ಟಂಗಟೂರಿಗೆ ಬರಮಾಡಿಕೊಂಡು, ಅಲ್ಲಿ ತನ್ನ ಆಸ್ಥಾನ ಕವಿಯಾಗಿ ನಿಯಮಿಸಿಕೊಂಡ. ಆಡಿದ ಮಾತೆಲ್ಲ ಅಮೃತಕಾವ್ಯ, ಹಾಡಿದ ಹಾಡೆಲ್ಲ ಅಮರ ಗಾನವೆಂದು ಜನರು ಕವಿಯನ್ನು ಹೊಗಳಿದರು. ವಿಜಯನಗರದ ಪ್ರಭುವಾಗಿದ್ದ ಸಾಳುವ ನರಸಿಂಗರಾಯ ತನ್ನ ಹೊಗಳಿ ಹಾಡುವ, ಶೃಂಗಾರ ಕೀರ್ತನೆಗಳನ್ನು ರಚಿಸಿ ಹಾಡೆಂದು ಅಪ್ಪಣೆ ಮಾಡಲು

ಅನ್ನಮಾಚಾರ್ಯರು "ಹರಿಮುಕುಂದನನ್ನು ಹೊಗಳಿ ಹಾಡುವ ನನ್ನ ನಾಲಿಗೆ, ನಿನ್ನನ್ನು ಹೊಗಳಿ ಹಾಡದು" ಎಂದು ಖಡಾಖಂಡಿತ ವಾಗಿ ಹೇಳಿದರು. ಪರಿಣಾಮ ಸ್ವರೂಪವಾಗಿ, ರಾಜಾಗ್ರಹಕ್ಕೆ ತುತ್ತಾಗಿ ತಿರುಪತಿಗೆ ಬಂದು ವೆಂಕಟೇಶ್ವರ ಸ್ವಾಮಿಯ ಅಂಕಿತದಲ್ಲಿ ಸಾವಿರಾರು ಸುಂದರ ಶೃಂಗಾರ ಸಂಕೀರ್ತನೆಗಳನ್ನು ರಚಿಸಿದರು. ಅವೆಲ್ಲವನ್ನೂ ವೆಂಕಟೇಶ್ವರನೇ ಅನುಗ್ರಹಿಸಿ ಸ್ವೀಕರಿಸಿದನೆಂದೂ ಆದ್ದರಿಂದ ಅವರ ಕೀರ್ತನೆಗಳನ್ನು ದೇವರೆದುರು ದಿನವೂ ಸುಪ್ರಭಾತದ ವೇಳೆ ಹಾಡುವ ಪದ್ಧತಿ ಬೆಳೆದು ಬಂದಿತೆಂದೂ ಕೀರ್ತನೆಗಳ ತಾಮ್ರ ಫಲಕಗಳನ್ನು ದೇವಾಲಯದ ಭಂಡಾರದಲ್ಲೇ ರಕ್ಷಿಸಿ ಇಟ್ಟಿರುವರೆಂದು ಹೇಳಲಾಗುತ್ತದೆ. ಮಗ ಪೆದ್ದತಿರುಮಲಾಚಾರ್ಯ ಹಾಗೂ ಮೊಮ್ಮಗ ಚಿನ್ನಯ್ಯ,ಸೇರಿ ರಚಿಸಿದ ಕೀರ್ತನೆಗಳು ಸುಮಾರು ಇಪ್ಪತ್ತು ಸಹಸ್ರದಷ್ಟಿದ್ದು ಇವುಗಳಲ್ಲಿ ಉತ್ಸವ ಸಂಪ್ರದಾಯದ ಕೀರ್ತನೆಗಳೂ ಇವೆ. ಗೇಯತೆಯ ಗುಣ ಎಂದರೆ ರಾಗ, ತಾಳ ಮಟ್ಟುಗಳ ಸಂಪ್ರದಾಯದ ಈ ಹಾಡುಗಳಿಂದಾಗಿ ಅನ್ನಮಯ್ಯ ನನ್ನು ಭಜನ ಪದ್ಧತಿಯ ಮೂಲಪುರುಷರೆಂದು ಗೌರವಿಸಲಾಗುತ್ತಿದೆ.

ಅನ್ನಮಯ್ಯ ಅವರ ಬಹು ಪ್ರಸಿದ್ಧ ಹಾಡೊಂದನ್ನು ಇಲ್ಲಿ ನೀಡಿ ಅದರ ಭಾವ ಸಂಗ್ರಹಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಕೊಂಡಲಲೋ ನೆಲಕೊನ್ನ ಕೋನೇಟಿ ರಾಯಡು ವಾಡು
ಕೊಂಡಲಂತ ವರಮುಲು ಗುಪ್ಪೆಡು ವಾಡು ॥

ಕೊಂಡ ಎಂದರೆ ಬೆಟ್ಟ ಏಳು ಬೆಟ್ಟಗಳ ಮೇಲೆ ಇರುವ ಕೋನೇಟಿ ಎಂದರೆ ಸರೋವರ ತೀರ್ಥ ಇಲ್ಲಿ ಸ್ವಾಮಿ ಪುಷ್ಕರಣಿ ನೆನಪಿಸಿಕೊಳ್ಳಿ.

ಶ್ರೀವೈಕುಂಠ ವಿರಕ್ತಾಯ ಸ್ವಾಮಿ ಪುಷ್ಕರಿಣೀ ತಟೇ
ರಮಯಾ ರಮಮಾಣಾಯ ವೇಂಕಟೇಶಾಯ ಮಂಗಳಂ
ಕುಮ್ಮರ ದಾಸುಡೈನ ಕುರುವರತಿ ನಂಬಿ
ಇಮ್ಮನ್ನ ವರಮುಲೆಲ್ಲ ಇಚ್ಚಿನವಾಡು ।
ದೊಮ್ಮುಲು ಸೇಸಿನ ಯಟ್ಟಿ ತೊಂಡಮಾನ್ ಚಕ್ರವರ್ತಿ
ರಮ್ಮನ್ನ ಚೋಟಿಕಿ ವಚ್ಚಿ ನಮ್ಮಿನವಾಡು॥

ಕುಂಬಾರನ ಸೇವಕ ಗುಲಾಮನಾಗಿದ್ದ ಕುರುವರ್ತಿ ನಂಬಿಗೆ ಅವನು ಕೇಳಿದ ಎಲ್ಲ ವರಗಳನ್ನು ಅನುಗ್ರಹಿಸಿದ ಆ ಶ್ರೀಮನ್ ನಾರಾಯಣ, ಯಾವಾಗಲೂ ಯುದ್ಧ ನಿರತನಾಗಿದ್ದ ಚಕ್ರವರ್ತಿ ತೊಂಡಮಾನ ಭಕ್ತಿಯನ್ನು ನಂಬಿ ಅವನು ಎಲ್ಲಿ ಕರೆದರೂ ಅವನಿದ್ದಲ್ಲಿಗೇ ಬಂದು ಅನುಗ್ರಹಿಸಿ ವರ ಕರುಣಿಸಿದ ಶೇಷಾದ್ರಿನಿಲಯ ನೀತ.

ಅಚ್ಚಪು ವೇಡುಕತೋಡ ನನಂತಾಳ್ವಾರುಕಿ
ಮುಚ್ಚಿಲಿ ವೆಟ್ಟಿಕಿ ಮನ್ನಿ ಮೋಸಿನವಾಡು
ಮಚ್ಚಿಕ ದೊಲಕ ತಿರುನಂಬಿ ತೋಡುತ
ನಿಚ್ಚ ನಿಚ್ಚ ಮಾಟಲಾಡಿ ನೊಚ್ಚಿನವಾಡು ॥

ಅನಂತ ಆಳ್ವಾರರ ಅಖಂಡ ಭಕ್ತಿಗೆ ಮೆಚ್ಚಿ, ಮಣ್ಣನ್ನು (ಕೆಸರು) ಹೆಗಲ ಮೇಲೆ ಯಾವುದೆ ಕೂಲೊ-ನಾಲು ತೆಗೆದು ಕೊಳ್ಳದ ಸೇವಕನ ಜೊತೆ, ಸಾಗಿಸಿದ ಭಕ್ತವತ್ಸಲ ಈ ಮಹಾಮಹಿಮೆ. ಈ ತಿರುಮಲಾಧೀಶ ಇಂತಹ ಧರ್ಮಾತ್ಮ ನೊಂದಿಗೆ ಪ್ರತಿದಿನ ಮಾತುಕತೆಯಲ್ಲಿ ನಿರತನಾಗಿರುತ್ತಿದ್ದ.

ಕಂಚಿಲೋನುಂಡ, ತಿರುಕಚ್ಚಿನಂಬಿ ಮೀದ ಕರುಣಿಂಚಿ
ತನಯೆಡಕು ರಪ್ಪಿಂಚಿನವಾಡು
ಎಂಚಿ ಎಕ್ಕಡೈನ ವೇಂಕಟೇಶ ಮನಲಕು
ಮಂಚುವಾಡೈ ಕರುಣ ಬಾಲಿಂಚಿನವಾಡು.

ಕಂಚಿಯಲ್ಲಿ ವಾಸವಾಗಿದ್ದ ಭಕುತನನ್ನು ಕುರುಣಿಸಿ, ತನ್ನೆಡಗೆ ಕರೆಯಿಸಿಕೊಂಡ ತಿಮ್ಮಪ್ಪ ಇವನು. ನಾವೆಲ್ಲೇ ಇರಲಿ,ಯಾರೇ ಇರಲಿ, ಹೇಗೇ ಇರಲಿ ನಮ್ಮಗಳಿಗೆಲ್ಲ,ಒಳ್ಳೆಯವನಾಗಿ,ಕರುಣೆಯಿಂದ ಕಾಪಾಡುವವನು. ಅನ್ನಮಾಚಾರ್ಯರು ರಚಿಸಿದ ಹಾಡುಗಳ ಒಂದು ಪಟ್ಟಿ ಮಾಡುವುದು ಎಂದರೆ, ಸೂರ್ಯನಿಗೆ ಮೊಂಬತ್ತಿ ಹಿಡಿದಂತೆ ಎಂದೇ ಹೇಳಬಹುದು. ಯಾರೇ ಆಗಲಿ ಅನ್ನಮಾಚಾರ್ಯರೆಲ್ಲ ಕೃತಿಗಳನ್ನು ಓದಿದ್ದೇನೆಂದರೆ ಅವರ ಸಂಪಾದಿತ ಸಂಗ್ರಹಿತ ಎಂದೇ ಹೇಳಬಹುದು. ಕೆಲವೇ ಕೆಲವು ಕೀರ್ತನೆಗಳ ಹೆಸರುಗಳನ್ನು ಇಲ್ಲಿ ಯಾವುದೇ ವಿಶ್ಲೇಷಣೆಗೆ ಹೋಗದೇ ಬರಿ ಮೊದಲ ಚರಣಗಳನ್ನು ನೀಡುತ್ತಿದ್ದೇನೆ.

1. ಅದಿವೋ ಅಲ್ಲದಿವೋ ಶ್ರೀ ಹರಿವಾಸಮು
   ಪದಿವೇಲಶೇಷುಲ ಪಡಗಲಮಯಮು
2. ಪೊಡಗಂಟಿಮಯ್ಯ.....ಪುರುಷೋತ್ತಮಾ ಪುರುಷೋತ್ತಮಾ
   ನಿನ್ನು ಪೊಡಗಂಟಿಮಯ್ಯ
3. ನಿಗಮ ನಿಗಮಾನಂತ ವರ್ಣಿತ ಮನೋಹರ ರೂಪ ನಗರಾಜ
   ಧರುಡಾ ಶ್ರೀನಾರಾಯಣ
4. ಬ್ರಹ್ಮಮು ಕಡಿಗಿನ ಪಾದಾಲು ಬ್ರಹಮು ದಾನೇನಿ ಪಾದಮು
5. ಶೋಭನಮೆ ಶೊಭನಮೆ ವೈವಭಾವಲ ಪಾವನ ಮೂರ್ತಿಕಿ


ಅನ್ನಮಯ್ಯನ ಸಮಕಾಲೀನರಾದ ತಿಕ್ಕನ್ನ ಸೋಮಯಾಜಿ ಮತ್ತು ಎರ್ರನ್ನ ಎರ್ರಾಪ್ರಗಾಢ ಸಹ ಭಕ್ತಿ ಸಾಹಿತ್ಯದ ಅದ್ಭುತ ಕವಿಗಳು ಆದರೆ ಈರ್ವರೂ ವ್ಯಾಸ ವಿರಚಿತ ಮಹಾಭಾರತ ತೆಲುಗು ಅನುವಾದದ ಮೇಲೆ ಹೆಚ್ಚು ಕೇಂದ್ರೀಕರಿಸಿ ತೆಲುಗುನಲ್ಲಿ ಅತ್ಯದ್ಭುತ ಮಹಾಭಾರತ ಮಹಾಕಾವ್ಯಗಳನ್ನು ನೀಡಿದ ಮಹಾಕವಿಗಳು, ಆಧುನಿಕ ಕಾಲಘಟ್ಟಕ್ಕೆ ಬಂದಾಗ, ಸಿ. ನಾರಾಯಣರೆಡ್ಡಿ, ಸಿರಿವೆನ್ನೆಲ ಸೀತಾರಾಮಶಾಸ್ತ್ರಿ ಮೊದಲಾದವರು ಶ್ರೀನಿವಾಸನ ಕುರಿತು ಹಾಡುಗಳನ್ನು ರಚಿಸಿದ್ದಾರೆ. ಎಂ. ಎಸ್. ಸುಬ್ಬಲಕ್ಷ್ಮಿ, ಎಂ. ಬಾಲಮುರಳಿಕೃಷ್ಣ ಮೊದಲಾದ ಮಹಾನ ಸಂಗೀತಗಾರರು ರಮ್ಯ ಇಂಪಾದ ಗಾಯನದಿಂದ ಕರ್ನಾಟಕ ಸಂಗೀತದಲ್ಲಿ ಶ್ರೀನಿವಾಸನ ಹಿರಿಮೆಯನ್ನು ಕೊಂಡಾಡಿದ್ದಾರೆ.



# ಪುರಂದರರದಾಸರು ಕಂಡರಿಸಿದ ಶ್ರೀನಿವಾಸ


– ಡಾ॥ ಹರಿಹರ ಶ್ರೀನಿವಾಸರಾವ್
91104 89871

ಸಾಹಿತ್ಯ ಮತ್ತು ಸಂಗೀತಗಳ ಮೂಲಕ ಮಾನವ ಬುದ್ಧಿಯ ಚೌಕಟ್ಟನ್ನು ಮೀರಿ, ಹೃದಯಾಂತರಾಳದಿಂದ ಭಕ್ತಿಯ ಅಚ್ಚಿನಲ್ಲಿ ಎರಕ ಹೊಯ್ದು, ಸಾಧನೆಯ ಸಾರ್ಥಕ್ಯದ ಮೂಲಕ, ಕಲಿಯುಗದ ಪ್ರತ್ಯಕ್ಷ ದೈವವಾದ ಶ್ರೀವೇಂಕಟೇಶನನ್ನು ಒಲಿಸಿಕೊಳ್ಳಲು ಬರುತ್ತದೆ. ಇದೇ ರಾಜಮಾರ್ಗ ಎಂದು ತೋರಿಸಿಕೊಟ್ಟ ಮಹಾನುಭಾವರಲ್ಲಿ ಪ್ರಮುಖರಾದವರು ಶ್ರೀಪುರಂದರರದಾಸರು. ಅದುವರೆಗೂ ಸಂಸ್ಕೃತಭೂಯಿಷ್ಠವಾಗಿದ್ದು ಸಾಮಾನ್ಯಜನರಿಗೆ ನಾಲಿಗೆ ಹೊರಳದಷ್ಟು ಮತ್ತು ಹೆಚ್ಚು ಕಡಿಮೆ ಕೇವಲ ಪಂಡಿತವರ್ಗಕ್ಕಷ್ಟೇ ಸೀಮಿತವಾಗಿದ್ದ ಭಕ್ತಿ ಸಾಹಿತ್ಯವನ್ನು ಅತ್ಯಂತ ಸುಲಭವಾಗಿ ರಚಿಸುವುದರ ಮೂಲಕ ಈ ಭವದ ಜಂಝುಡವನ್ನು ಮೀರಿ ಮನಶ್ಯಾಂತಿಯನ್ನು ಒದಗಿಸುವ "ವೇಂ" ಎಂದರೆ ಪಾಪಗಳನ್ನು "ಕಂಟತೇ" ಎಂದರೆ ನಾಶ ಮಾಡುವ ತಿರುಮಲ ಗಿರಿವಾಸನಾದ ಶ್ರೀನಿವಾಸನನ್ನು ಸ್ತುತಿಸುವುದರ ಮೂಲಕ ಮಾನವ ಜನ್ಮದೊಡ್ಡದು, ಇದ ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ ಎಂದು ಅಡಿಗಡಿಗೆ ಎಚ್ಚರಿಸಿರುವರು.



## ಆಹಾರ ಮತ್ತು ಮನಸ್ಸುಗಳ ಶುದ್ಧತೆ

ದೇಹ ಮತ್ತು ಮನಸ್ಸುಗಳ ಶುದ್ಧಿ ಹಾಗೂ ಕ್ಷೇಮದಿಂದ್ದಿದರೆ ಮಾತ್ರ ಧರ್ಮ, ಆಧ್ಯಾತ್ಮಿಕ ಆಚರಣೆಗಳು ನೆಲೆಗೊಳ್ಳುತ್ತವೆ. ಹೀಗಾಗಿ ಶುದ್ಧ ಮನಸ್ಸನ್ನು ಉತ್ತೇಜಿಸುವ ಗಟ್ಟಿ ಆಹಾರ ಸುಲಭ ಬೆಲೆಗೆ ದೊರೆವ ರಾಗಿಯ ಮಹತ್ವವನ್ನು ತಿಳಿಸುತ್ತಲೇ ಶ್ರೀನಿವಾಸನನ್ನು ಒಲಿಸಿಕೊಳ್ಳುವ ಮನೋಜ್ಞ ರೀತಿ ಹೀಗಿದೆ. ಭಿಕ್ಷೆಗಾಗಿ ತರುವವರ ಯೋಗ್ಯತೆ ಭೋಗ್ಯತೆಗಳ ಬಗೆಗೆ ತಿಳಿಸುತ್ತಾ "ಅನ್ನದಾನವ ನೀಡುವರಾಗಿ, ಅದಕ್ಕೂ ಹೆಚ್ಚಿನ ಸಂಪತ್ತಿದ್ದರೆ ಅನ್ನಛತ್ರವನ್ನಿಟ್ಟವರಾಗಿ ಬೇಡದ ಬೇರೆಯ ವಿಷಯಗಳಿಗೆ ತಲೆಕೆಡಿಸಿಕೊಳ್ಳದೇ ಅನ್ಯ ವಾರ್ತೆಯ ಬಿಟ್ಟವರಾಗಿ, ಅನುದಿನ ಭಜನೆಯ ಮಾಡುವವರಾಗಿ ಭಿಕ್ಷೆ ಕೊಡಲು ರಾಗಿ ತರಬೇಕು. ಮಾತಾಪಿತೃಗಳ ಸೇವೆ,ಪಾಪಕಾರ್ಯಗಳನ್ನು ಮಾಡದೇ, ನೀತಿಮಾರ್ಗದಲ್ಲಿ ನಡೆಯುವುದರಿಂದ ಇಹ ಮತ್ತು ಪರಗಳಲ್ಲಿ ಖ್ಯಾತಿಯನ್ನು ಹೊಂದುವುದು ಖಚಿತ. ಇದನ್ನು ಗಳಿಸಲು ಗುರು ಕಾರುಣ್ಯ, ಆತನ ಸದಾ ಪಾದಸ್ಮರಣೆಯಿಂದ ಪುಣ್ಯ ಪಾವನತ್ವ ತಾನಾಗಿ ಒದಗಿ ಬರುತ್ತದೆ. "ಶ್ರೀನಿವಾಸನ ಸ್ಮರಿಸುವರಾಗಿ ಪ್ರಾಣರಾಯನ ದಾಸರಾಗಿ ದಾನ ಮಾಡಿದರೆ ರಾಗಿ ಕಡಿಮೆಯಾಗುತ್ತದೆಂಬ ಭಯ ಅಥವಾ ಹೆದರಿಕೆ, ದೀನತ್ವದ, ಎಂದರೆ ಭೀಕ್ಷೆ ಬೇಡುವಂತಹ ಕೆಲಸ ಕೀಳು ವೃತ್ತಿ ಎಂದೆನಿಸುವುದಿಲ್ಲ. ಹೀಗೆ ಸಿರಿ ರಮಣನ ಸದಾ ಸ್ಮರಿಸುವುದರಿಂದ ಸಂಸಾರದ ಕರೆ ಕರೆ (ಕಿರಿ ಕಿರಿಗಳು) ನೀಗಿ ಪುರಂದರವಿಠ್ಠಲನ ಸೇವಿಸುವ ಮಾರ್ಗ ತೆರೆದುಕೊಳ್ಳುತ್ತದೆ.



## ತಿಮ್ಮಪ್ಪ ನೆಲಸಿಹ ತಾಣ

ಅಳಗಿರಿಯಿಂದಲೆ ಬಂದ ಸ್ವಾಮಿ, ಅಂಜನಾದ್ರಿಯಲಿ ನಿಂದ; ಆತ ಕುಂಡಲರಾಯ ಮುಕುಂದನೇ ಸರಿ, ಬೇಟೆಯಾಡುತ್ತಾ ಬೆಟ್ಟದ ಮೂಡಲ ಗಿರಿಯಲ್ಲಿ ಹಾಗೆ

ನಿಂತು ತಿಮ್ಮಪ್ಪ ನೆನಿಸಿದ. ಈ ಮೂಡಲಗಿರಿಯ ತಿಮ್ಮಪ್ಪನನ್ನು ನೋಡಲು ಭಾರತದ ಉತ್ತರ ದೇಶವಾದ ಕಾಶಿಯಿಂದ ಹಿಡಿದು, ದಕ್ಷಿಣದ ರಾಮೇಶ್ವರ ವರೆಗಿನ ಜನ ಕಾಣಿಕೆ ಸಮೇತ ಬರುವರು. ಹೀಗೆ ಬರುವಾಗ ಗೋವಿಂದಾ ಗೋವಿಂದಾ ಎಂದು ನಾಮವನ್ನು ಹೇಳುತ್ತಾ, ಹಾಡುತ್ತಾ ಕೊಂಡಾಡುತ್ತಾ ದಾರಿಯನ್ನು ಸವೆಸುತ್ತಾರೆ. ಹೀಗಾಗಿ ಸಾವಿರಾರು ಮೈಲುಗಳಷ್ಟು ದೂರ ಪ್ರಯಾಣಿಸಿದ್ದರೂ, ಅದರ ಶ್ರಮ, ಪರಿವೆಯೇ ಇರುವುದಿಲ್ಲ. ನಾನಾ ದೇಶ, ನಾನಾ ಭಾಷೆ, ನಾನಾ ವೇಷಭೂಷಣಗಳನ್ನೊಳಗೊಂಡು ಬೆಟ್ಟದ ಮೇಲಿಂದ ಅಂಕು ಡೊಂಕಾಗಿ ಹಸಿರು ಕಾಡಿನಲ್ಲಿ ಕಾಣುತ್ತಿರುವ ದಾರಿಯಲ್ಲಿ ಬರುತ್ತಿರುವ ನಿನ್ನ ದಾಸರನ್ನು ನೋಡುವುದೇ ಒಂದು ಚೆಂದ. ಹೀಗಾಗಿ ಲೋಕದೊಳಗೆ ನಿನಗೆ ಯಾರೂ ಈಡಿಲ್ಲ (ಸಮ). ಮುದ್ದಾದ ಮುಖವುಳ್ಳ ವೆಂಕಟಪತಿಯಾದ ನೀನು ಎಲ್ಲ ಚಿಲ್ಲರೆ ದೈವಗಳನ್ನು ಮೀರಿದ ಮಿಂಡ, ಬಲ್ಲಿದವರಿಗೆ ಉದ್ದಂಡ ಅಷ್ಟೇ ಅಲ್ಲ ರಾಮಾವತರದಲ್ಲಿ ಶಿವನ ಬಿಲ್ಲನ್ನೇ ಮುರಿದ ಪ್ರಚಂಡ. ಹೆಚ್ಚೇನು ಹೇಳಲಿ? ಈ ಕಲಿಯುಗದಲ್ಲಿ ಕಷ್ಟಕಾರ್ಪಣ್ಯಗಳು ಬಂದಾಗ ಅದನ್ನು ನಿವಾರಿಸು ಎಂದು ಹರಕೆ ಕಾಸನ್ನು ಗಂಟುಕಟ್ಟಿಟ್ಟು ಕಷ್ಟಗಳು ಕಳೆದ ನಂತರ ಅದನ್ನು ನಿನಗೆ ಕೊಂಡು ಬಂದು ತೀರಿಸದಿದ್ದರೆ, ಒಂದೊಂದು ಕಾಸನ್ನೂ ಬಿಡದೇ ವಸೂಲು ಮಾಡುವೆ. ಅಷ್ಟೇ ಅಲ್ಲ ಅದಕ್ಕಾಗಿ ಕೈ ಒಡ್ಡಲೂ ಹಿಂಜರಿಯದೇ ತನ್ನ ದಾಸರನ್ನು ಉದ್ಧರಿಸುವ "ಏನು ಮಹಿಮಾಗಾರನಯ್ಯ ನಮ್ಮವಾಸುದೇವ ತಿಮ್ಮಯ್ಯ" ಎಂದು ತಮ್ಮ ಜೀವನಾನುಭವವನ್ನೇ ಕೇವಲ ಕೆಲವು ಶಬ್ದ ರೂಪಕದಲ್ಲಿ ಹಿಡಿದಿಟ್ಟಿದ್ದಾರೆ. ಇದೇ ಕಾರಣಕ್ಕಾಗಿಯೇ ನೀನು ಸಕಲ ಜನರಿಗೆ ಬೇಕು ಆದ್ದರಿಂದ ನಿನಗೆ ನನ್ನ ಚಿತ್ತದಿಂದ ಪರಾಕನ್ನು ಹೇಳುತ್ತಿದ್ದೇನೆ ಚಿತ್ತೈಸಿ ದಯಮಾಡು, ಏಕೆಂದರೆ ನಿನ್ನ ವಾಕ್ಕು ಸತ್ಯವಾಹಿನಿಯೇ ಅಲ್ಲವೇ?

## ತಿರುಪತಿ ಪರಿಸರ

ದಾಸರು ತಿರುಮಲದ ಪರಿಸರವನ್ನು ಬಣ್ಣಿಸುವರೀತಿ, ಕಟ್ಟಿಕೊಡುವ ನುಡಿ ಚಿತ್ರಗಳು ಬಲು ಅಪ್ಯಾಯಮಾನ. ಅಪ್ಪ, ಅತಿರಸ, ಜೇನು, ಸಕ್ಕರೆ, ಬಗೆಬಗೆ ಭಕ್ಷ ಪರಮಾನ್ನ, ನಾನಾ ಬಗೆಯ ಸಕಲ ಶಾಲ್ಯಾನ್ನ ಭಕ್ಷ್ಯಗಳ ನೈವೇದ್ಯಗಳನ್ನು ಭುಜಿಸಿ ಪ್ರಸನ್ನವಾದ ನಿನ್ನ ಮೊಗದ ಬಗೆಬಗೆಯ ಸೊಬಗು ಅತ್ಯಂತ ಮನಮೋಹಕ. ಸದಾ ನಿತ್ಯ ಹರಿದ್ವರ್ಣದಿಂದ ತುಂಬಿರುವ ಅನೇಕ ತೋಪುಗಳಿಂದ ಬೀಸುವ ತಂಪುಗಾಳಿ ದೇಹಕ್ಕೆ ಆಹ್ಲಾದವನ್ನೀಯುತ್ತಿದೆ.

ಸೊಗಸಾಗಿ ಅಲ್ಲಲ್ಲಿ ಅನೇಕ ವಿಧ ವಿಧವಾದ ಹೂಗಳು ಸುವಾಸನೆಯ ಕಂಪಿನ ಪರಿಮಳವನ್ನು ಸೂಸುತ್ತಿವೆ. ದುಂಬಿಗಳ ಸುಮಧುರ ಝೇಂಕಾರದ ನಾದ, ಭಕ್ತರ ಕೋಲಾಟದ ಪದಗಳು ನಿನಾದಗಳ ಸೊಗಸೇ ಸೊಗಸು. ಇಲ್ಲಿ ಹರಿವ ನಿನ್ನ ಪಾದೋದಕಪಾನ ಮತ್ತು ಪಾಪವಿನಾಶಿನೀ ತೀರ್ಥದ ಸ್ನಾನ ಮುಂತಾದ ಪರಿಕರ, ಪರಿಸರದಿಂದಾಗಿ ಮನಸಿನ ಕೋಪ ತಾಪಗಳನ್ನು ನಿಧಾನಿಸಿ ಶಮನಗೊಳಿಸಿ, ಮನಸ್ಸು, ಮುದಗೊಂಡು ಹೊಸ ಚೈತನ್ಯವನ್ನೂ, ಹುರುಪನ್ನೂ ತುಂಬುತ್ತಿದೆ. ಇದರಿಂದಾಗಿಯೇ ಪುರಂದರ ವಿಠ್ಠಲನ ಧ್ಯಾನ ಸುಲಭವಾಗಿ ದೊರೆತು ಜನ್ಮಸಾರ್ಥಕವೆನಿಸುತ್ತದೆ.

## ವ್ಯಾಪಾರಿ ತಿಮ್ಮಪ್ಪ

ಉಪ್ಪು, ಓಗರಗಳನು ಮಾರಿಸಿ ಉಚಿತವಾಗಿಯೇ ಹಣವನ್ನು ಗಳಿಸುವ ಈ ತಿಮ್ಮಪ್ಪಶೆಟ್ಟಿಯ ವ್ಯಾಪಾರತನದ ವಿಸ್ತಾರ ಎಷ್ಟಿದೆ? ಎಂದರೆ ಭೂಮಿಯಲ್ಲಿರುವ ಅನೇಕ ದ್ವೀಪಗಳಿಂದ ಇವುಗಳನ್ನು ತರಿಸುವ ತಾಕತ್ತು ಉಳ್ಳವನೀತ. ಇಪ್ಪತ್ತು ದುಡ್ಡಿಗೆ ಒಂದು ಸೇರುತೀರ್ಥ, ಇದನ್ನು ಕೇವಲ ಬಾಯಿ ಮಾತಿನಿಂದ ಹೇಳಿದರೆ ಸಾಲದು ಎಂಬಂತೆ, ಇಂದಿನ ಪ್ರಕಾರ ಕ್ಯೂನಲ್ಲಿ ನಿಂತು ಕ್ರಮವಾಗಿಯೇ (ರಶೀತಿ ಸಹಿತ) ಮಾಡಿ ತೋರಿಸುವಾತ! ಇದು ಬೂಟಕತನದ ಮಾತಂತೂ ಖಂಡಿತಾ ಅಲ್ಲ ಒಮ್ಮೆ ಈತನ ಕೋಟಿ ಸೂರ್ಯ ಸಮಪ್ರಭೆಯ ಮಸ್ತಕದ ಕಿರೀಟ ನೊಸಲಿನ ತಿರುಮಣಿಯ ನಾಮ, ಸಾಟಿ ಇಲ್ಲದ ಶಂಖಚಕ್ರದ ಹಸ್ತಗಳನ್ನು ಕಂಡರೆ, ನಗೆ ಮುಖವ ನೋಡಿದರೆ, ಅದು ನೋಟಕಾಶ್ಚರ್ಯವಾಗಿ ಕಾಣುವುದರಲ್ಲಿ ಯಾವುದೇ ಸಂದೇಹವಿಲ್ಲ. ದಾಸರ ಈ ನುಡಿಚಿತ್ರಗಳನ್ನು ಪ್ರತಿಯೊಬ್ಬ ಸಾಮಾನ್ಯ ನೋಡುಗನೂ ಇಂದಿಗೂ ನೋಡಿ, ತಿಳಿದು, ಸವಿಯ ಬಹುದಾದ ಜೀವನಾನುಭವವೇ ಆಗಿದೆ.

## ಭಕ್ತಿಯ ಪರಾಕಾಷ್ಠೆ

ಜಗದ ಜಂಜಡಗಳಿಂದ ನೊಂದು ಬೆಂದ ಜೀವಿಯೊಬ್ಬ ಮುಕ್ತಿಯನ್ನು ಪಡೆಯಬೇಕೆನ್ನು ಆರ್ತತೆಯ ಪರಾಕಾಷ್ಠೆಯಾಗಿ ಬಂದಿರುವ ಈ ಪದಗಳು ತಿಮ್ಮಪ್ಪನ ಬಂಗಾರದ ಕಿರೀಟ ಮತ್ತು ಆತನ ಬಟ್ಟಿಗೆ ಉಂಗುರ ವಿಟ್ಟಂತೆ ಒಡಮೂಡಿ ಬಂದಿವೆ.

ವೆಂಕಟೇಶ ಬೇಡಿಕೊಂಬೆ ಕೃಪೆಯ ಪಾಲಿಸೋ ॥ಪ॥
ಬ್ರಹ್ಮಶಂಕರರಾದಿ ವಂದ್ಯ ಎನಗೆ ಮುಕ್ತಿ ತೋರಿಸೋ ॥ಅ॥
ನಷ್ಟ ಮೊದಲಾದಂತ ಕಷ್ಟ ಬಿಡಿಸೋ ನಿನ್ನ ಪಟ್ಟದ ರಾಣಿಗೆ
ಹೇಳಿ ಪದವಿ ಕೊಡಿಸೋ ಇಷ್ಟ ಭಕ್ತ ಜನರೊಳು ಎನ್ನ ಸೇರಿಸೋ।
ಈ ಸೃಷ್ಟಿಯೊಳೀಸು ನಿನ್ನ ದಾಸಾನುದಾಸ ನೆನಿಸೊ ॥1॥
ಹುಟ್ಟು ಉಂಡು ಮಿಕ್ಕದೆಲ್ಲ ಎನಗೆ ಹಾಕಿಸೋ।
ಪೊಂಬಟ್ಟಿಲೊಳಗೆ ಹಾಲು ಉಚ್ಚಿಷ್ಟ ಹಾಕಿಸೋ।
ಘಟ್ಯಾಗಿ ಸಕ್ಕರೆ ತುಪ್ಪ ರೊಟ್ಟಿ ಉಣಿಸೋ।
ಮುಂದೆ ಹುಟ್ಟಿ ಬಾರದಂತೆ ಜನ್ಮಂಗಳ ನನಗೆ ಬಿಡಿಸೋ ॥ 2॥
ಕಿಟ್ಟಗಟ್ಟಿದ ಕಬ್ಬಿಣಕ್ಕೆ ಪುಟವ ಹಾಕಿಸೋ
ಉತ್ಕೃಷ್ಟ ಬಂಗಾರದೊಳು ಎನ್ನ ಸೇರಿಸೋ।
ಬಟ್ಟಿಗೆ ಉಂಗುರ ಮಾಡಿ ಎನ್ನ ಧರಿಸೋ
ಸ್ವಾಮಿ ದಿಟ್ಟ ಪುರಂದರ ವಿಠಲ ದಯದಿಪಾಲಿಸೋ ॥3॥

ಹೀಗೆ ನೂರಾರು ಉತ್ಕೃಷ್ಠ ಭಕ್ತಿ ಹಾಗೂ ಸಂಗೀತದ ರಚನೆಗಳ ಮೂಲಕ ಅನನ್ಯ ರೀತಿಯಲ್ಲಿ ತಿರುಮಲವಾಸ ಶ್ರೀವೇಂಕಟೇಶನನ್ನು ಕೊಂಡಾಡುತ್ತಾ ಕನ್ನಡನಾಡು ನುಡಿ ಮತ್ತು ಜೀವರುಗಳ ಉನ್ನತಿಗೆ ಮಾರ್ಗದರ್ಶನವನ್ನಿತ್ತಿದ್ದಾರೆ.





# ಶ್ರೀ ತ್ಯಾಗರಾಜರು ಮತ್ತು ಮುತ್ತುಸ್ವಾಮಿ ದೀಕ್ಷಿತರು ಕಂಡಂತೆ ಸಪ್ತಗಿರಿವಾಸ ಶ್ರೀನಿವಾಸ

– ಶ್ರೀಮತಿ. ವಿಜಯ ಕುಮಾರಿ
99860 17403

ಅನೇಕ ವಾಗ್ಗೇಯಕಾರರು ತಿರುಮಲೆಯ ಶ್ರೀನಿವಾಸನನ್ನು ಕುರಿತು ಕೃತಿಗಳನ್ನು ರಚಿಸಿದ್ದಾರೆ, ಹಾಡಿ ಆನಂದಿಸಿದ್ದಾರೆ. ಇವರಲ್ಲಿ ತಮಿಳುನಾಡಿನ ಆಳ್ವಾರರು, ಕರ್ನಾಟಕದ ಕನಕದಾಸರು ಹಾಗೂ ಪುರಂದರದಾಸರು, ಆಂಧ್ರಪ್ರದೇಶದ ಅನ್ನಮಾಚಾರ್ಯರು ಅಗ್ರ ಪಂಕ್ತಿಯಲ್ಲಿ ಪರಿಗಣಿಸಬೇಕಾದ ಮಹನೀಯರು. ಕರ್ನಾಟಕ ಸಂಗೀತದ ತ್ರಿಮೂರ್ತಿಗಳೆಂದೇ ಕರೆಯಲ್ಪಡುವ ಶ್ಯಾಮಾ ಶಾಸ್ತ್ರಿಗಳು, ತ್ಯಾಗರಾಜರು ಮತ್ತು ಮುತ್ತುಸ್ವಾಮಿ ದೀಕ್ಷಿತರು ತಿರುಮಲೆಯ ಶ್ರೀನಿವಾಸನನ್ನು ಕುರಿತು ರಚಿಸಿದ ಕೃತಿಗಳ ಬಗ್ಗೆ ಪರಿಶೀಲನೆ ನಡೆಸಿದಾಗ ಶ್ಯಾಮಾಶಾಸ್ತ್ರಿಗಳು ತಿರುಪತಿ ವೆಂಕಟೇಶ್ವರನ ಕುರಿತು ಕೃತಿಗಳನ್ನು ರಚಿಸಿಲ್ಲ ಎಂದು ತಿಳಿದು ಬಂದಿದೆ. ಶ್ರೀಶ್ಯಾಮಾಶಾಸ್ತ್ರಿಗಳ ಪುತ್ರರಾದ ಸುಬ್ಬರಾಯ ಶಾಸ್ತ್ರಿಗಳು ''ವೇಂಕಟ ಶೈಲ ವಿಹಾರ'' ಎಂಬ ಕೃತಿಯನ್ನು ತಿರುಪತಿಯ ಶ್ರೀನಿವಾಸನ ಕುರಿತು ರಚಿಸಿದ್ದಾರೆ ಎಂದು ತಿಳಿದು ಬಂದಿದೆ. 18 ನೇ ಶತಮಾನದಲ್ಲಿದ್ದ ಶ್ರೀತ್ಯಾಗರಾಜರು ತಮ್ಮ ಇಷ್ಟ ದೇವರಾದ ಶ್ರೀರಾಮನ ಕುರಿತು ಸಾವಿರಾರು ಕೃತಿಗಳನ್ನು ಸಂಸ್ಕೃತ ಹಾಗೂ ತೆಲುಗು ಭಾಷೆಯಲ್ಲಿ ರಚಿಸಿದ್ದಾರೆ. ರಾಗ, ಭಾವ,ಭಕ್ತಿ ರಸಗಳಿಂದ ತುಂಬಿದ ತ್ಯಾಗರಾಜರ ಕೃತಿಗಳು ಅತ್ಯಂತ ಮೌಲಿಕ ರಚನೆಗಳಾಗಿವೆ.





ತ್ಯಾಗರಾಜರು ರಚಿಸಿರುವ ಎರಡು ಕೃತಿಗಳು ನಮ್ಮ ಅವಲೋಕನೆಗೆ ಲಭ್ಯವಿದೆ. ಎರಡೂ ಕೃತಿಗಳಿಗೂ ಒಂದು ವೈಶಿಷ್ಟ್ಯವಿದೆ. ಮೊದಲಕೃತಿಯಾದ ''ತೆರತೀಯಗರಾದ'' ಕೃತಿಯು ಶ್ರೀನಿವಾಸನ ದರ್ಶನಕ್ಕೆ ಮೊದಲು ರಚಿತವಾಗಿದ್ದು ಅದರಲ್ಲಿ ಆರ್ತಭಾವವಿದೆ. ಭಗವಂತನನ್ನು ಕಾಣುವ ಹಂಬಲ, ಪ್ರಾರ್ಥನೆಯಾಗಿ ಹೊಮ್ಮಿದೆ. ಎರಡನೇ ಕೃತಿಯಾದ ''ವೆಂಕಟೇಶ ನಿನು ಸೇವಿಂಪ'' ಎಂಬ ಕೃತಿ ರಚನೆಯ ವೇಳೆಗೆ ತ್ಯಾಗರಾಜರಿಗೆ ಶ್ರೀನಿವಾಸನ ದರ್ಶನ ಸೌಭಾಗ್ಯ ದೊರೆತಿದೆ. ಅವರ ಮನಸ್ಸು ಆನಂದದ ತುತ್ತ ತುದಿಯಲ್ಲಿದೆ. ಆದ್ದರಿಂದ ಈ ಕೃತಿ ಧನ್ಯತಾಭಾವಪ್ರಧಾನವಾಗಿದೆ. ಎರಡೂ ಕೃತಿಗಳು ತ್ಯಾಗರಾಜರ ಅನುಭವ ಕಥನ ರೂಪದಲ್ಲಿದ್ದು ಕೇಳಿದ ಕೂಡಲೆ ಮನದಾಳಕ್ಕಿಳಿದು ನಮ್ಮ ಮನದಲ್ಲಿಯೂ ರಸಾನುಭೂತಿಯನ್ನುಕ್ಕಿಸುತ್ತದೆ.

ಶ್ರೀತ್ಯಾಗರಾಜರು ತಿರುಪತಿ ಕ್ಷೇತ್ರಕ್ಕೆ ಭೇಟಿ ನೀಡಿದಾಗ, ಮೂಲವರಿಗೆ, ತಿರುವಾರಾಧನ ಹಾಗೂ ನೈವೇದ್ಯ ಸೇವೆಗಾಗಿ ತೆರೆ ಹಾಕಲಾಗಿದ್ದು, ಅವರಿಗೆ ಪರಮಪಾವನಮೂರ್ತಿಯ ದರ್ಶನ ತಕ್ಷಣ ಲಭಿಸಲಿಲ್ಲ. ಆಗ ತ್ಯಾಗರಾಜರಿಗೆ ತನ್ನಲ್ಲಿರುವ ಮತ್ಸರವೇ ತೆರೆಯ ರೂಪದಲ್ಲಿ ಭಗವಂತನ ದರ್ಶನಕ್ಕೆ ಎನಗೆ ಅಡ್ಡಿಯಾಗಿದೆ ಎನಿಸಿತು. ಈ ಮತ್ಸರದ ತೆರೆಯನ್ನು ಸರಿಸಿ ನಿನ್ನ ದರ್ಶನವ ಕರುಣಿಸು ತಂದೆ ಎಂದು ಆರ್ತರಾಗಿ ಭಗವಂತನಲ್ಲಿ ಮೊರೆಯಿಟ್ಟರು. ಇದೇ ''ತೆರತೀಯಗರಾದ'' ಕೃತಿಯ ಉಗಮದ ಹಿನ್ನೆಲೆ. ಈ ಕೃತಿಯಲ್ಲಿ ಅನೇಕ ಉಪಮೆಗಳಿವೆ.

"ಮೀನು ಹಸಿವಿನಿಂದ ಗಾಳದಲ್ಲಿ ಸಿಕ್ಕಿ ಕೊಡಂತೆ"
"ಚೆನ್ನಾಗಿ ಊಟ ಮಾಡುವ ಕಾಲದಲ್ಲಿ ಆಹಾರದಲ್ಲಿ ನೊಣಬಿದ್ದಂತೆ"
"ಬಲೆ ಎಂದು ತಿಳಿಯದೆ ಮೃಗ ಸಮೂಹವು ಸಿಕ್ಕಕೊಂಡಂತೆ" ಹೀಗೆ

ಈ ಮತ್ಸರವೆಂಬ ತೆರೆಯು ನಿನ್ನ ದರ್ಶನಕ್ಕೆ ಅಡ್ಡಿಯಾಗಿದೆ. ಈ ತೆರೆಯನ್ನು ಸರಿಸಿ ನಿನ್ನ ದರ್ಶನವನ್ನು ಕರುಣಿಸು ಎಂದು ಮೊರೆಯಿಡುವ ವೇಳೆಗೆ ತೆರೆ ಸರಿದು ಭಗವಂತನ ದರ್ಶನವಾಯಿತಂತೆ. ಭಗವಂತನ ದರ್ಶನದಿಂದ ಪುಳಕಿತರಾದ ತ್ಯಾಗರಾಜರು ಮಧ್ಯಮಾವತಿ ರಾಗದಲ್ಲಿ "ವೇಂಕಟೇಶ ನಿನು ಸೇವಿಂಪ" ಎಂಬ ಕೃತಿಯನ್ನು ರಚಿಸಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ. ಶೇಷತಲ್ಪದಲ್ಲಿ ಪವಳಿಸಿರುವವನೇ ಭಾಗವತಪ್ರಿಯನೇ, ನಾಗಾಚಲವಾಸಿಯೇ,ಎಂದು ಭಗವಂತನನ್ನು ಸಂಬೋಧಿಸಿ, ಪದ್ಮಪತ್ರಾಕ್ಷನಾದ ನಿನ್ನನ್ನು ಕಾಣಲು ಸಾವಿರ ಕಣ್ಣುಗಳು ಸಾಲವು ಮುನಿಗಳನ್ನು ಪಾಲಿಸುವವನೇ ನಿನ್ನ ಕರುಣೆಯನ್ನು ಅಪೇಕ್ಷಿಸಿ ಭಕ್ತಿಯಿಂದ ನಿನ್ನ ಬಳಿ ಬಂದಿದ್ದೇನೆ. ನಿನ್ನ ಕರುಣಾಮೃತವೇ ನಿನ್ನ ಬಳಿ ಸಾರಲು ದೊರೆತಿರುವ ಮೆಟ್ಟಿಲು. ಯಾವುದೋ ಜನ್ಮದ ಸುಕೃತದಿಂದಲೇ ನಿನ್ನ ದರ್ಶನ ಭಾಗ್ಯ ಲಭಿಸಿದೆ ಎಂದು ಹಾಡಿ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ. ಈ ಕೃತಿಯಲ್ಲಿ "ನಾಗಾಚಲ" ಎಂಬ ಕ್ಷೇತ್ರ ಮುದ್ರೆ ಇದೆ.

ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರಾದ ಶ್ರೀ ಮುತ್ತುಸ್ವಾಮಿ ದೀಕ್ಷಿತರು ವೈಣಿಕ ಶಿಖಾಮಣಿಗಳು. ವೇದಾಧ್ಯಯನ ಸಂಪನ್ನರು. ಕಾವ್ಯಾಲಂಕಾರ, ಜ್ಯೋತಿಷ್ಯ, ವೈದ್ಯ ಮತ್ತು ಮಂತ್ರ ಶಾಸ್ತ್ರಗಳಲ್ಲಿ ಉದ್ದಾಮ ಪಂಡಿತರು. ಇವರ ಕೃತಿಗಳು ಅರ್ಥ ಗರ್ಭಿತವಾಗಿರುವ, ಭಕ್ತಿ, ವಿರಕ್ತಿ, ಗಾಂಭೀರ್ಯಗಳಿಂದ ಕೂಡಿದ ಅದ್ವಿತೀಯ ಕುಸುಮಗಳು. ಸಾಹಿತ್ಯ, ಸಂಗೀತ, ರಾಗ, ಭಾವಗಳ ಸುಮಧುರ ಸಾಂಗತ್ಯದಿಂದ ಇವರ ಕೃತಿಗಳು ಕರ್ಣಾನಂದವನ್ನು ನೀಡುತ್ತವೆ. ಕೃತಿಗಳಲ್ಲಿ ರಾಗದ ಹೆಸರನ್ನು ಅರ್ಥ ಗರ್ಭಿತವಾಗಿ ಹೊಂದಿಸಿರುವುದು ದೀಕ್ಷಿತರ ಹೆಗ್ಗಳಿಕೆ. ತಿರುಪತಿ ಶ್ರೀನಿವಾಸನ ಅರ್ಚಾಮೂರ್ತಿ ದೀಕ್ಷಿತರಿಗೆ ವೈಕುಂಠದಲ್ಲಿರುವ ನಾರಾಯಣನಂತೆಯೇ ಕಂಡಿದೆ.

ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ ॥

ಈ ಮಾತನ್ನು ಅಕ್ಷರಶಃ ಒಪ್ಪಿಕೊಂಡೇ ದೀಕ್ಷಿತರು ತಿರುಪತಿಯ ಶ್ರೀನಿವಾಸನನ್ನು ದರ್ಶಿಸಿದ್ದಾರೆ. ಪೂರ್ಣಚಂದ್ರಿಕಾರಾದ "ಶಂಖ ಚಕ್ರ ಗದಾ ಪಾಣಿಂ ಅಹಂ ವಂದೇ"ಎಂಬ ಕೃತಿಯಲ್ಲಿ ವಿಷ್ಣುವಿನ ಪಂಚಾಯುಧಗಳನ್ನು ಧರಿಸಿ ನಿಂತಿರುವ ಪದ್ಮಚರಣನಾದ ಪದ್ಮಾವತಿಯ ಪ್ರಾಣೇಶನಾದ ವೇಂಕಟೇಶನನ್ನು ನಮಿಸುವೆ. ಕುಂಕುಮಲೇಪಿತನಾದ, ಪಂಕಜಾಕ್ಷನಾದ ಶ್ರೀವೇಂಕಟ, ಗಜೇಂದ್ರವರದ, ಗರುಡವಾಹನ, ಭವಾರ್ಣವವನ್ನು ದಾಟಿಸುವವನು ಎಂದೆಲ್ಲಾ ಸ್ತುತಿಸಿ ಕೊನೆಗೆ "ವೇಂಕಟೇಶ ವರದ ಕ್ಷೇತ್ರಂ ವಿರಜಾ ನದಿ ತಟಸ್ಥಿತಂ" ಎಂದು ವರ್ಣಿಸಿದ್ದಾರೆ.

ವಿರಜಾನದಿ ಎಂಬುದು ಒಂದು ಆಧ್ಯಾತ್ಮಿಕ ಪರಿಕಲ್ಪನೆ. ಈ ನದಿಗಿರುವ ಎರಡು ತಟಗಳಲ್ಲಿ ಒಂದು ಕ್ಷಣಿಕವಾದ ಪ್ರಾಪಂಚಿಕ ಸುಖ ಭೋಗಗಳು, ಮತ್ತೊಂದು ಶಾಶ್ವತ ಬ್ರಹ್ಮಾನಂದ.ಯಾವ ದಡವನ್ನು ಆಯ್ಕೆ ಮಾಡಿಕೊಳ್ಳಬೇಕೆಂಬುದು ಅವರವರ ಸಂಸ್ಕಾರಕ್ಕೆ ಬಿಟ್ಟಿದ್ದು. ಇಷ್ಟು ಗೂಢಾರ್ಥಗಳನ್ನು ತಮ್ಮ ಕೃತಿಗಳಲ್ಲಿ ತೋರಿದ ದೀಕ್ಷಿತರ ಪ್ರೌಢಿಮೆಗೆ ನಮ್ಮ ಹೃತ್ಪೂರ್ವಕ ನಮನಗಳು ಸಲ್ಲಲೇಬೇಕು.

ವರಾಳಿ ರಾಗದ "ಶೇಷಾಚಲ ನಾಯಕಂ" ಎಂಬ ಕೃತಿಯಲ್ಲಿ ಶ್ರೇಷ್ಠ ವರಗಳನ್ನು ದಯಪಾಲಿಸುವ, ವಾಗ್ದೇವಿಗೆ ಪ್ರಿಯನಾದ, ಬ್ರಹ್ಮ ವಂದಿತ, ಕೌಸ್ತುಭಮಣಿಭೂಷಿತ ಕಮಲ ನಯನ, ಗೋವಿಂದ (ಇಂದ್ರಿಯಗಳನ್ನು ಆಳುವವನು)ಮನ್ಮಥನಿಗಿಂತ ಮಿಗಿಲಾದ ರೂಪಲಾವಣ್ಯಸಂಪದನು, ಮಧುಸೂದನ, ಶೇಷಾಚಲನಾಯಕನಾದ ನಾರಾಯಣನೇ ನಿನ್ನನ್ನು ವಂದಿಸುತ್ತೇನೆ ಎನ್ನುವಾಗ, ವೈಕುಂಠ ಪತಿಯಾದ ಶ್ರೀಮನ್ನಾರಾಯಣನೇ, ಈ ಭೂವೈಕುಂಠ ಪತಿಯಾದ ಶ್ರೀನಿವಾಸ ಎಂಬ ಭಾವವಿದೆ. ಈ ಕೃತಿಯಲ್ಲಿ "ಮುನಿ ವರಾಳೀ ವಂದಿತ" ಎಂಬ ರಾಗಮುದ್ರೆಯಿದೆ.ಹೀಗೆ ತ್ಯಾಗರಾಜ ಸ್ವಾಮಿಗಳು ಹಾಗೂ ಶ್ರೀಮುತ್ತುಸ್ವಾಮಿ ದೀಕ್ಷಿತರು ತಮ್ಮ ಕೃತಿಗಳಲ್ಲಿ ವೈಕುಂಠ ವಾಸಿಯಾದ ಶ್ರೀಮನ್ನಾರಾಯಣನೇ, ಶ್ರೀನಿವಾಸನಾಗಿ ಭೂವೈಕುಂಠವಾದ ತಿರುಪತಿ ಯಲ್ಲಿ ನೆಲೆಸಿ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ ಎಂದು ನಿಚ್ಚಳವಾಗಿ ಸಾರಿದ್ದಾರೆ.

## ಆಗಸ್ಟ್ 2024 ರಂಗಳ ರಸಪ್ರಶ್ನೆಯ ಉತ್ತರಗಳು

1. ಲಕ್ಷ್ಮೀ ದೇವಿ
2. ಶ್ರಾವಣ ಮಾಸ
3. ಘಟ ರೂಪದಲ್ಲಿ
4. ಶ್ರಾವಣಮಾಸದಲ್ಲಿ
5. ಏಳು ದಿನಗಳು
6. ಚಿಕ್ಕ ಬಳ್ಳಾಪುರ
7. ಶ್ರೀಸತ್ಯಧರ್ಮತೀರ್ಥರು
8. ರುಕ್ಮಿಣಿ ದೇವಿ
9. 30 ಪಾಶುರಗಳು
10. ಅನಂತಸೂರಿ,ತೋತಾರಂಬಾ
11. ವಿದ್ಯಾ ಲಕ್ಷ್ಮಿಯು
12. ಜಲಶಯನ ಪೆರುಮಾಳ್
13. ಕುಂಭಕರ್ಣ, ರಾವಣ
14. 19 ಪಾಶುರಗಳಲ್ಲಿ
15. ಆಳಲು



# ಹಸೆಗೆ ಬಾರಯ್ಯ ಹದಿನಾಲ್ಕು ಲೋಕದೊಡೆಯ

-ಎಂ.ಎ. ಭರತ್

94802 63676

ಕನ್ನಡದ ಆಡು ಭಾಷೆಯಲ್ಲಿ ಹರಿದಾಸರು ಪದ ಪದ್ಯ ಸುಳಾದಿಗಳನ್ನು ರಚನೆ ಮಾಡಿ ಕನ್ನಡ ಸಾಹಿತ್ಯವನ್ನು ಶ್ರೀಮಂತ ಗೊಳಿಸಿದರು, ಶ್ರೀಮಂತಗೊಳಿಸುತ್ತಿದ್ದಾರೆ. ಹರಿದಾಸರು ತಮ್ಮ ರಚನೆಗಳಲ್ಲಿ ಏಳು ಬೆಟ್ಟದ ಒಡೆಯನ ದರ್ಶನ, ಸಂಕೀರ್ತನ, ಯಾಯಿವರದ ಮೂಲಕ ದ್ರವ್ಯ ಸಂಗ್ರಹ ಹಾಗೂ ಆ ದ್ರವ್ಯಗಳನ್ನು ಶ್ರೀನಿವಾಸನಿಗೆ ಅನ್ನ ಸಂತರ್ಪಣೆಯ ಮೂಲಕ ಸಮರ್ಪಣೆ ಇತ್ಯಾದಿ ಅನೇಕ ಸೇವೆಗಳನ್ನು ಮಾಡಲೇಬೇಕು ಎಂದು ಅಲಿಖಿತ ನಿಯಮವನ್ನು ಹಾಕಿಕೊಂಡಿದ್ದರು.

ದೇವರೆಂದರೆ ತಿರುಪತಿ ತಿಮ್ಮಪ್ಪ, ಗುರುಗಳೆಂದರೆ ಮಂಚಾಲೆ ರಾಘಪ್ಪ ಎಂದು ನಂಬಿದವರು ನಮ್ಮ ಹರಿದಾಸರುಗಳು. 19 ನೆ ಶತಮಾನದಲ್ಲಿ ಅನೇಕ ಹರಿದಾಸರು ತಮ್ಮ ನಾಮ ಸಂಕೀರ್ತನೆ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಅವಿಭಾಜಿತ ಕೋಲಾರ ಜಿಲ್ಲೆಯ ಆಂಧ್ರ ರಾಜ್ಯದ ಗಡಿ ಪ್ರದೇಶದ ಬಾಗೇಪಲ್ಲಿಯಲ್ಲಿ ಅನೇಕ ಮಂದಿ ಹರಿದಾಸರುಗಳನ್ನು ಕಾಣಬಹುದು. ಶ್ರೀಗುರುರಾಮ ವಿಠ್ಠಲ ಅಂಕಿತ ಬಾಗೇಪಲ್ಲಿಯ ಸುಬ್ಬನದಾಸರಿಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಠವಾದ ಸ್ಥಾನವಿದೆ. ಇವರು ಹುಟ್ಟು ಕುರುಡರು, ಆಜನ್ಮ ಬ್ರಹ್ಮಚಾರಿ ವ್ರತವನ್ನು ಸ್ವೀಕರಿಸಿದವರು ತಮ್ಮ ಕೀರ್ತನೆಗಳನ್ನು ಸಜ್ಜನರು ಪಾಡಿದರೆ ಅದೇ ನಮಗೆ ಹಾಗೂ ನಮ್ಮ ಪೂರ್ವಜರಿಗೆ ಸದ್ಗತಿ ದೊರಕಿಸುವ ಸಾಧನ ಎಂದು ದೃಢವಾಗಿ ನಂಬಿದ್ದರು.

ಶ್ರೀ ಬಾಗೇಪಲ್ಲಿ ಸುಬ್ಬನ ದಾಸರ ರಚನೆಗಳಲ್ಲಿ ಭಗವಂತನ ಸಂಕೀರ್ತನೆ, ಲೋಕನೀತಿ, ವಿಶೇಷವಾಗಿ ಷೋಡಶೋಪಚಾರ ಪೂಜೆಯ ಪ್ರತಿ ಉಪಚಾರಕ್ಕೂ ಒಂದೊಂದು ಕೀರ್ತನೆಯನ್ನು ರಚಿಸಿದ್ದಾರೆ. ಭಗವಂತನ ಸಂಕೀರ್ತನೆಯಲ್ಲಿ ರಾಮ,ಕೃಷ್ಣ,ಶ್ರೀನಿವಾಸ ಮುಂತಾದ ಭಗವದ್ ರೂಪಗಳ ಚಿಂತನೆಯ ಕೀರ್ತನೆಗಳನ್ನು ಕಾಣಬಹುದು.

ಏಳುಬೆಟ್ಟದ ಒಡೆಯ ಶ್ರೀನಿವಾಸನ ಕಲ್ಯಾಣೋತ್ಸವಕ್ಕೆ ಸಂಬಂಧಿಸಿದಂತೆ ಹಾಗೂ ಅವನ ಅವತಾರಕ್ಕೆ ಸಂಬಂಧಿಸಿದ ಕೀರ್ತನೆಗಳನ್ನು ಇವರ ರಚನೆಗಳಲ್ಲಿ ನೋಡಬಹುದು. ಸುಬ್ಬನದಾಸರ ತಿರುವೇಂಕಟನಾಥನ ಮೇಲೆ ರಚಿಸಿರುವ ಕೀರ್ತನೆಗಳಲ್ಲಿ ಕೆಲವು ಕೀರ್ತನೆಗಳ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಲು ಪ್ರಯತ್ನಿಸುತ್ತಿದ್ದೇನೆ, ಗುರುರಾಮವಿಠಲದಾಸರು,

ಹಸಗೇಳ್ಳೈ ಶ್ರೀನಿವಾಸ ಮೂರ್ತಿ ನೀ ಬಿಸ ಜಾಲಯೆ ಸಹಿತ

ಎನ್ನುವ ಕೀರ್ತನೆಯಲ್ಲಿ ಶ್ರೀನಿವಾಸ ಕಲ್ಯಾಣದ ವಿಷಯವನ್ನು ಪ್ರಸ್ತಾಪಿಸುತ್ತಾ ಬ್ರಹ್ಮಾದಿಗಳ ಪ್ರಾರ್ಥನೆಯ ಬಗ್ಗೆ ತಿಳಿಸುತ್ತಾ ರುಕ್ಮಿಣಿ ಕಲ್ಯಾಣದ ವಿಷಯವನ್ನು ಸ್ಥೂಲವಾಗಿ ಪ್ರಸ್ತಾಪಿಸಿ ತಾನು ಸರ್ವಾಂತಯಾಮಿ ಎಂದು ಜಗತ್ತಿಗೆ ತೋರಿದ ವೆಂಕಟ ಕೃಷ್ಣ ಎಂದು ಹಾಡಿದ್ದಾರೆ.

ಹಸೆಗೆ ಬಾರಯ್ಯ ಹದಿನಾಲ್ಕು ಲೋಕದೊಡೆಯ
ಕುಸುಮಾಸ್ತ್ರನ್ಯೆಯ್ಯ ಕೋರಿ ಪ್ರಾರ್ಥಿಪೆ ಜೀಯಾ

ಎಂಬ ಕೀರ್ತನೆಯಲ್ಲಿ ಪಕ್ಷಿವಾಹನವಾಗಿ ಪದ್ಮಾವತಿ ಸಹಿತ ತಮ್ಮ ಹೃದಯ ಸಿಂಹಾಸನಕ್ಕೆ ಸ್ವಾಗತಿಸುತ್ತಾ ಸದಾ ಸುಜ್ಞಾನವನು ಕರುಣಿಸಲು ಪದುಮಾವತಿಯೊಂದಿಗೆ ಸ್ವಾಗತಿಸುತ್ತಾರೆ.

ವೇಂಕಟೇಶ್ವರ ವೇದಗೋಚರ ನಿನ್ನ ಪಾದ
ಪಂಕಜವನು ಕಂಡೆ ಶ್ರೀಧರ

ಎಂಬ ಕೀರ್ತನೆಯಲ್ಲಿ ದಾಸರು ತಮ್ಮನು ತಾವು ಅಲ್ಪಜ್ಞಾನಿ ಬುದ್ಧಿಹೀನನು ಎಂದು ಕರೆದುಕೊಂಡು ಆದರೂ ನೀನು ಅನುಗ್ರಹಮಾಡಿ ನಿನ್ನ ಸೇವೆಯನ್ನು ನೀಡು ಎಂದು ಬೇಡಿಕೊಳ್ಳುತ್ತಾರೆ. ಅದೇ ಕೀರ್ತನೆಯಲ್ಲಿ ಶ್ರೀನಿವಾಸನ ಅಗಣಿತಮಹಿಮೆಗಳ ಬಗ್ಗೆ ತಿಳಿಸುತ್ತಾ ಹಾಗೆ ತೀರ್ಥವನ್ನು ಮಾರಿ ಹಣ ಗಳಿಸುವ ನೀನು ಎಂದು ನಿಂದಾಸ್ತುತಿಯನ್ನು ಮಾಡಿರುವುದು ಅವರ ಕವಿತಾ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಮಂಗಳಂ ವೆಂಕಟೇಶಗೆ ಅಲಮೇಲ್
ಮಂಗಾ ಮನೋಹರಗೆ (ಪ)
ಮಂಗಳ ಗರುಡ ತುರಂಗಗೆ ಮುನಿಜನ
ಸಂಗಗೆ ಭವ ಭಯ ಭಂಗಗೆ ಜಯ ಶುಭ (ಅ.ಪ.)

ಎಂಬ ಮಂಗಳ ಕೀರ್ತನೆಯಲ್ಲಿ ಶ್ರೀನಿವಾಸ ಯಾವ ಯುಗದಲ್ಲಿ ಯಾರಿಗೆ ಹೇಗೆ ಅನುಗ್ರಹ ಮಾಡಿದ ಎಂದು ತಿಳಿಸಿರುವುದು ಕೃತ, ತ್ರೇತಾ, ದ್ವಾಪರ, ಕಲಿಯುಗದ ವಿಷಯಗಳನ್ನು ಪರಿಚಯಿಸುವುದು ಕೀರ್ತನಾಕಾರರ ಪದಗಳ ಜೋಡಣೆಯ ಚಾತುರ್ಯವನ್ನು ಈ ಕೀರ್ತನೆಯಲ್ಲಿ ಕಾಣಬಹುದು.

ಬಾರೋ ವೆಂಕಟೇಶ
ನಮ್ಮ ಭಾಗ್ಯನಿಧಿಯೆ (ಪ)
ಬಾರೋ ವೆಂಕಟೇಶ ಬೇಗ ತೋರೋ ನಿನ್ನ
ಪಾದವೀಗ ಸಾರಿಸಾರಿ ಶಿರ ಬಾಗಿ ಬೇಡುವೆ ನಾ

ಈ ೀರ್ತನೆಯಲ್ಲಿ ಸುಬ್ಬನದಾಸರು ಭವಿಷ್ಯೋತ್ತರ ಪುರಾಣದ ಪೂರ್ವಾರ್ಧ ಹಾಗೂ ಉತ್ತರಾರ್ಧವನ್ನು ಪರಿಚಯಿಸಿ ಹರಿದಾಸರಿಗೆ ಶ್ರೀನಿವಾಸ ಮಾಡುತ್ತಿರುವ ಅನುಗ್ರಹದ ವಿಷಯವನ್ನು ಪ್ರಸ್ತಾಪಿಸಿದ್ದಾರೆ.




ಧ್ಯಾನಿಸಲರಿಯೆ ನಿನ್ನ
ಶ್ರೀನಿವಾಸ ಪ

ಧ್ಯಾನಿಸಲರಿಯೆನು ದೀನ ಮಂದಾರ ನಿ
ತ್ಯಾನಂದ ಮೂರ್ತಿಯಂದರಿತು ಹೃದಯದೊಳು(ಅ.ಪ)

ಇದು ಗುರುರಮವಿಠ್ಠಲ ದಾಸರು ರಚನೆ ಮಾಡಿದ ಷೋಡಶ ಉಪಚಾರ ಪೂಜೆಯ ಕೀರ್ತನೆಗಳಲ್ಲಿ ಒಂದು ದೇವರನ್ನು ಧ್ಯಾನಿಸುವುದು ಷೋಡಶ ಉಪಚಾರ ಪೂಜೆಯ ಮೊದಲ ಪೂಜೆ ಅದರ ಬಗ್ಗೆ ತಿಳಿಸುತ್ತಾ ಭಗವಂತನನ್ನು ಹೇಗೆ ಧ್ಯಾನಿಸಬೇಕು ಅದರ ಸರಳ ನಿಯಮಗಳು ಯಾವುವು ಎಂಬುದನ್ನು ತಿಳಿಸುವ ಪ್ರಯತ್ನ ಮಾಡಿ ಕಡೇ ನುಡಿಯಲ್ಲಿ ಇಂದಿನ ಸಮಾಜಯಾಕೆ ಧ್ಯಾನಿಸಲು ಆಗುತ್ತಿಲ್ಲ . ಅದಕ್ಕೆ ಕಾರಣಗಳು ಯಾವುವು ಎಂಬುದನ್ನು ತಿಳಿಸಿರುವುದು ಭಗವದ್ ಧ್ಯಾನವನ್ನು ಮಾಡುವವರಿಗೆ ಒಂದು ರೀತಿ ಮಾರ್ಗ ದರ್ಶನವಾಗಿದೆ.

ಗುರುರಾಮ ವಿಠ್ಠಲ ದಾಸರ ಕೀರ್ತನೆಗಳು ಸುಮಾರು 300ಕ್ಕೂ ಮಿಗಿಲಾದ ಕೀರ್ತನೆಗಳು ಇಂದು ಉಪಲಬ್ಧವಿದೆ ಹರಿಕಥಾ ವಿದ್ವಾಂಸರಾಗಿದ್ದ ಟಿ.ಕೆ. ವೇಣುಗೋಪಾಲ ದಾಸರು ಇವರ ಕೀರ್ತನೆಗಳನ್ನು ತಮ್ಮ ಹರಿಕಥೆಗಳಲ್ಲಿ ಬಳಸುತ್ತಿದ್ದರು ನಂತರ ಹರಿದಾಸ ಸಾಹಿತ್ಯದ ಸಂಶೋಧಕರಾದ ಡಾ. ಅನಂತಪದ್ಮನಾಭರಾವ್ ಅವರು ಸುಬ್ಬನ ದಾಸರ ಕೀರ್ತನೆಗಳು ಸಮಗ್ರವಾಗಿ ಸಂಪಾದಿಸಿ ಅದನ್ನು ಸಮಗ್ರ ಹರಿದಾಸ ಸಾಹಿತ್ಯ ಸಂಪುಟಗಳ ಮೂಲಕ ಒಬ್ಬ ಅಂದ ಕವಿಯ ಪ್ರೌಢ ಕೀರ್ತನೆಗಳನ್ನು ಹೊರ ಜಗತ್ತಿಗೆ ಪರಿಚಯಿಸಿದರು.





ವಾದಿರಾಜರು

'ಹೇ ಶೇಷಾಚಲವಾಸಿ ವೆಂಕಟೇಶಾ, ನೀರಜನಯನ, ನಿರ್ಮಲ ಗುಣಪೂರ್ಣ ವೆಂಕಟರನ್ನ, ನಾನು ಅನಾಥ, ನೀನೆನ್ನ ಬಂಧು,ಎನ್ನ ದೋಷಗಳನ್ನು ಎಣಿಸದೆ,ನಿರ್ದೋಷ ಪನ್ನಗವಾಸ ನನ್ನನ್ನು ನಿರತಂತರ ರಕ್ಷಿಸು'- ಎನ್ನುವರು. ಕ್ಷರಾಕ್ಷರವನ್ನು ಮೀರಿದಪುರುಷೋತ್ತಮ, ಗರುಡವಾಹನ, ಶ್ರೀಧರ-ವೆಂಕಟನಾಯಕ, ಭಕ್ತ ಜನಪಾಲಕಾ-ಮುನೀಂದ್ರ ವಂದಿತಾದೇವಾ, ಅಖಿಲ ಸುರಗಣ ಸೇವಿತ ವೇದವೇದ್ಯ ವೆಂಕಟೇಶಾ,ನಿನಗೆ ಶರಣು' ಎನ್ನುವರು. 'ಹೇ ವೆಂಕಟೇಶಾ ಬಲಕೈಯಿಂದ ನಿನ್ನ ಪಾದಗಳನ್ನು ನಂಬಿದವರಿಗೆ ಸಂಸಾರ ತಾಪತ್ರಯ ಕೇವಲ ಕಟಿ ಪರ್ಯಂತವೆಂದು ಎಡ ಕೈ ಯಿಂದ ಸೂಚಿಸುತ್ತಿರುವ,ನಿನಗಿದೋ ವಂದನೆಗಳು.ವೈಕುಂಠಸ್ಥಿತನೂ,ಕರುಣಾಸಮುದ್ರನೂ ಆದ ನೀನು,ಕಲಿಯುಗದಲ್ಲಿ ಕೇವಲ ನಿನ್ನ ಭಕ್ತರ ಉದ್ಧಾರಕ್ಕಾಗಿ,ಭಕ್ತರ ಚಿಂತಾಮಣಿಯಾಗಿ,ಶೇಷಾಚಲ ದಲ್ಲಿ ಮುಕುಟಪ್ರಾಯನಾಗಿ,ಕಂಗೊಳಿಸುತ್ತಿರುವೆ. ವೈಕುಂಠದಲ್ಲಿ ಆದಿಶೇಷನ ಮೇಲೆ ಪವಡಿಸುವ ಪ್ರಭು, ನಮ್ಮನ್ನು ಅನುಗ್ರಹಿಸಲು ಧರೆಗಿಳಿದು ಬಂದು ಶೇಷಾಚಲದಲ್ಲಿರುವೆ. ರಾವಣನ ವಧೆಗಾಗಿ, ರಾಮಾವತಾರ ಕಾಲದಲ್ಲಿ, ಶೇಷನು ನಿನ್ನ ಸಹಾಯಕ್ಕಾಗಿ,ನಿನ್ನ ಅನುಜ ಲಕ್ಷ್ಮಣನಾಗಿ ಬಂದ. ಕೃಷ್ಣಾವತಾರದಲ್ಲಿ ಶೇಷನು ಬಲರಾಮನಾಗಿ ನಿನ್ನ ಜತೆ ಬಂದ. ಈಗ ಭಕ್ತರ ಪವಿತ್ರತಾಣ ಶೇಷಾಚಲವೇ ನಿನ್ನ ನೆಲೆವೀಡು.ನಮ್ಮನ್ನು ಸದಾ ರಕ್ಷಿಸು-ಎನ್ನುವರು. ವೆಂಕಟಾದ್ರಿಯಲ್ಲಿ ನಿಂತ ವೆಂಕಟೇ ಶನು ಭಜಿಸಿದವರ ಇಷ್ಟಾರ್ಥಗಳನ್ನು ಪೂರೈಸುವನು. ತನಗೆ ಹಣ,ಕಾಣಿಕೆ ನೀಡಿದವರ ಸಿರಿ ಸಂಪದ ಹೆಚ್ಚಿಸಲು,ತಾನೇ ಲಕ್ಷ್ಮೀ ಸಮೇತನಾಗಿ ಅವರಲ್ಲಿಗೆ ಬರುವನು."ಸಮಸ್ತ ಸುಜನಾ ಧಾರಂ ದೋಷ ದೂರಂ ಗುಣಾಕರಂ, ಶ್ರೀವೆಂಕಟಾಚಲವಾಸಂ, ಶ್ರೀನಿವಾಸಂ,ಭಜೇಹಂ" ಅಂದರೆ ಸಕಲ ಸಜ್ಜನರಿಗೆ ಆಶ್ರಯದಾತನಾದ ದೋಷರಹಿತನೂ, ಗುಣಪೂರ್ಣನೂ ಆದ ವೆಂಕಟಾಚಲಪತಿ ಯನ್ನು ನಾವು ಸೇವಿಸುವೆವು.



## ಕರ್ನಾಟಕದ ವೈಷ್ಣವ ದೇವಾಲಯಗಳು

47



# ದೊಡ್ಡಬಳ್ಳಾಪುರದ ಶ್ರೀ ವೆಂಕಟೇಶ್ವರ ದೇವಾಲಯ

– ಕೆಂಗೇರಿ ಚಕ್ರಪಾಣಿ
94483 86886


ದೊಡ್ಡಬಳ್ಳಾಪುರದ ಶ್ರೀವೆಂಕಟೇಶ್ವರದೇವಾಲಯ-ಬೆಂಗಳೂರು-ಹಿಂದೂಪುರ ರಸ್ತೆಯಲ್ಲಿ ಬೆಂಗಳೂರಿನಿಂದ 39 ಕಿ.ಮೀ. ದೂರದಲ್ಲಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ಪ್ರಮುಖ ವಾಣಿಜ್ಯ ಕೇಂದ್ರ ದೊಡ್ಡಬಳ್ಳಾಪುರ. ಇದು ಹೊಯ್ಸಳರ ಕಾಲದಿಂದಲೂ ಪ್ರಮುಖ ಸ್ಥಳವಾಗಿತ್ತು. ಹೊಯ್ಸಳ ದೊರೆ ವೀರಬಲ್ಲಾಳನಿಂದಲೇ ಪ್ರಸ್ತುತ ಗ್ರಾಮಕ್ಕೆ ಬಳ್ಳಾಪುರ ಎಂಬ ಹೆಸರು ಬಂದಿರಬೇಕೆಂಬ ಅಭಿಪ್ರಾಯವಿದೆ. ದೊಡ್ಡಬಳ್ಳಾಪುರದಲ್ಲಿ ಆವತಿಯ ನಾಡ ಪ್ರಭುಗಳ ಒಂದು ಶಾಖೆ ಇಲ್ಲಿ ಪಾಳೆಯ ಪಟ್ಟು ಕಟ್ಟಿಕೊಂಡು ಆಡಳಿತ ನಡೆಸಿದ್ದರು. ಆವತಿಯ ಮಲ್ಲ ಭೈರೇಗೌಡನಿಗೆ ಸ್ವಪ್ನದಲ್ಲಿ ಆದಿನಾರಾಯಣನು ಕಾಣಿಸಿ ತಾನು ಹುತ್ತದಲ್ಲಿರುವೆನೆಂದು ತಿಳಿಸಿದನೆಂದೂ,ನಾಯಕನು ಹುತ್ತವನ್ನು ತೆಗೆಸಿ ಆದಿನಾರಾಯಣ ಸ್ವಾಮಿಯನ್ನು ಸ್ಥಾಪಿಸಿ ಸುತ್ತಲೂ ಕೋಟೆಯನ್ನು ಕಟ್ಟಸಿದನೆಂದು ಸ್ಥಳಪುರಾಣ ತಿಳಿಸುತ್ತದೆ. ಪ್ರಸ್ತುತ ಶಿಥಿಲವಾಗಿರುವ ಆದಿನಾರಾಯಣ ದೇವಾಲಯದಿಂದ ತಂದ ಸುಂದರ ಆದಿನಾರಾಯಣ ಮೂರ್ತಿಯನ್ನು ಊರಿನ ಪ್ರಮುಖ ದೇವಾಲಯವಾದ ಶ್ರೀವೆಂಕಟೇಶ್ವರ ದೇವಾಲಯದಲ್ಲಿ ಸಂರಕ್ಷಿಸಲಾಗಿದೆ.














### ಶ್ರೀವೆಂಕಟೇಶ್ವರ ದೇವಾಲಯ:

ದೊಡ್ಡಬಳ್ಳಾಪುರ ನಗರದ ನಡುವಿರುವ ಪ್ರಮುಖ ದೇವಾಲಯ ವೆಂಕಟೇಶ್ವರ ದೇವಾಲಯವಾಗಿದೆ. ದೇವಾಲಯವು ಗರ್ಭಗೃಹ, ಅಂತರಾಳ,ನವರಂಗ ಹಾಗೂ ಮುಖಮಂಟಪ ವಿಶಾಲವಾದ ಪ್ರಾಕಾರ ಮಂಟಪ ಮತ್ತು ಪ್ರವೇಶ ದ್ವಾರವನ್ನು ಹೊಂದಿದೆ. ಈ ದೇವಾಲಯದ ಗರ್ಭಗುಡಿಯಲ್ಲಿ ಶ್ರೀದೇವಿ ಭೂದೇವಿ ಸಹಿತನಾದ ವೆಂಕಟೇಶ್ವರಸ್ವಾಮಿಯ ವಿಗ್ರಹವು ಹಾಗೂ ಕಳೆದ ಶತಮಾನದಲ್ಲಿ ಸ್ಥಾಪಿಸಿರುವ ವೆಂಕಟೇಶ್ವರನ ನಯನ ಮನೋಹರವಾದ ಮೂರ್ತಿಯಿದೆ. ಅಂತರಾಳದ ಬಾಗಿಲುವಾಡದಲ್ಲಿ ದಶಾವತಾರದ ಹಿತ್ತಾಳೆ ಮೂರ್ತಿಗಳನ್ನು ಅಂದವಾಗಿ ಅಳವಳಪಡಿಸಲಾಗಿದೆ. ಪ್ರಧಾನ ಗರ್ಭಗುಡಿಯ ಇಕ್ಕೆಲಗಳಲ್ಲಿ ಗಣೇಶ ಮತ್ತು ಮಹಾಲಕ್ಷ್ಮಿ ದೇವಿಯರ ಗುಡಿಗಳಿವೆ. ಹೈದರಾಲಿಯ ಕಾಲದಲ್ಲಿ ಅಧಿಕಾರಿಯಾಗಿದ್ದ ಅರುಣಾಚಲಪಂತ್ ಎಂಬುವರು ಈ ದೇವಾಲಯವನ್ನು ಹಾಗೂ ಸಮೀಪದಲ್ಲಿರುವ ಚಂದ್ರಶೇಖರ ದೇವಾಲಯವನ್ನೂ ನಿರ್ಮಿಸಿರುತ್ತಾರೆ. ಇವರು ಕನಕಪುರ ತಾಲ್ಲೂಕಿನ ಹಾರೋಹಳ್ಳಿಯ ಅರುಣಾಚಲೇಶ್ವರ ದೇವಾಲಯವನ್ನು ಸಹ ನಿರ್ಮಿಸಿರುವರು. ದೇವಾಲಯವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು ಪ್ರದ









ಕ್ಷಿಣಾಪಥವಿದೆ. ಪ್ರಾಕಾರ ಮಂಟ ಪದ ಕಂಬಗಳ ಮೇಲೆ ಮತ್ಸ್ಯ, ಕೂರ್ಮಾದಿಯಾಗಿ ದಶಾವತಾರದ ಮೂರ್ತಿಗಳಿವೆ. ಶ್ರೀವೆಂಕಟೇಶ್ವರ ದೇವಾಲಯದ ಪ್ರಾಕಾರ ಮಂಟಪದಲ್ಲಿ ಆದಿನಾರಾಯಣ ಸ್ವಾಮಿಯ ಅತ್ಯಂತ ಸೊಗಸಾದ ಮೂರ್ತಿಯಿದೆ. ಪರವಾಸುದೇವ ಆದಿವಿಷ್ಣು ಎಂದು ಕರೆಯುವ ದೇವನ ಮೂರ್ತಿಯು ಧರೆಗವ ತರಿಸಿದ ಪ್ರಥಮ ವಿಷ್ಣುಮೂರ್ತಿ. ಇಲ್ಲಿರುವ ಆದಿನಾರಾಯಣನು ತನ್ನ ಪತ್ನಿ ಸಹಿತನಾಗಿರುವುದು ವಿಶೇಷ. ಸುಮಾರು ಆರು ಅಡಿ ಎತ್ತರವಿರುವ ದೇವತಾ ಮೂರ್ತಿಯು ಚತುರ್ಭುಜವನ್ನು ಹೊಂದಿದ್ದು ಮೇಲಿನ ಕೈಗಳಲ್ಲಿ ಚಕ್ರ, ಶಂಖವನ್ನು ಧರಿಸಿದ್ದರೆ, ಕೆಳಗಿನ ಬಲಗೈ ಅಭಯ ಹಸ್ತದಲ್ಲಿದೆ, ಕೆಳಗಿನ ಎಡಗೈಯಿಂದ ದೇವಿಯನ್ನು ಸ್ವಾಮಿಯು ಬಳಸಿಕೊಂಡು ಕುಳಿತಿರುವನು. ದೇವನ ಶಿರದ ಮೇಲೆ ಏಳು ಹೆಡೆಯ ಎತ್ತರದ ಸರ್ಪವಿದೆ. ಶ್ರೀಲಕ್ಷ್ಮೀ ಆದಿನಾರಾಯಣನ ಭವ್ಯ ಮೂರ್ತಿಯಾಗಿದ್ದು ಇಲ್ಲಿಗೆ ಬರುವ ಭಕ್ತರನ್ನು ತನ್ನ ದಿವ್ಯ ರೂಪದಿಂದ ಆಕರ್ಷಿಸುತ್ತಿರುವನು. ಶ್ರೀವೆಂಕಟೇಶ್ವರ ದೇವಾಲಯದಲ್ಲಿ ಸ್ವಾಮಿಯ ಕೈಂಕರ್ಯಗಳು ವರ್ಷವಿಡೀ ನಿರಂತರವಾಗಿ ಜರುಗುತ್ತಿರುವುದು ವಿಶೇಷ. ಶ್ರಾವಣ ಮಾಸ ಹಾಗೂ ವೈಕುಂಠ ಏಕಾದಶಿಯಲ್ಲಿ ಅಲಂಕಾರ ಪ್ರಿಯನಾದ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಅಲಂಕಾರಗಳು ಹಾಗೂ ಪೂಜಾಕೈಂಕರ್ಯಗಳು ಬಹು ಸಾಂಗವಾಗಿ ಜರುಗುತ್ತದೆ. ಶ್ರೀವೆಂಕಟೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವವು ಪ್ರತಿವರ್ಷ ಮಾಘ ಮಾಸದ ಪೂರ್ಣಿಮಿಯಲ್ಲಿ ಬಹು ವೈಭವವಾಗಿ ನೆರವೇರುತ್ತದೆ.



## ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

**27-11-2024 ರಿಂದ 06-12-2024 ರ ವರೆಗೆ**

**27-11-2024**
ಬುಧವಾರ
ಹಗಲು : ಲಕ್ಷಕುಂಕುಮಾರ್ಚನೆ
ರಾತ್ರಿ : ಅಂಕುರಾರ್ಪಣೆ

**28-11-2024**
ಗುರುವಾರ
ಹಗಲು : ತಿರುಚ್ಚಿ ಉತ್ಸವ, ಧ್ವಜಾರೋಹಣ
ರಾತ್ರಿ : ಚಿಕ್ಕಶೇಷವಾಹನ

**29-11-2024**
ಶುಕ್ರವಾರ
ಹಗಲು : ದೊಡ್ಡಶೇಷವಾಹನ
ರಾತ್ರಿ : ಹಂಸವಾಹನ

**30-11-2024**
ಶನಿವಾರ
ಹಗಲು : ಮುತ್ತಿನಚಪ್ಪರವಾಹನ
ರಾತ್ರಿ : ಸಿಂಹವಾಹನ

**01-12-2024**
ಭಾನುವಾರ
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಹನುಮದ್ವಾಹನ

**02-12-2024**
ಸೋಮವಾರ
ಹಗಲು : ಪಲ್ಲಕಿ ಉತ್ಸವ
ಸಾ॥ ವಸಂತೋತ್ಸವ
ರಾತ್ರಿ : ಗಜವಾಹನ

**03-12-2024**
ಮಂಗಳವಾರ
ಹಗಲು : ಸರ್ವಭೂಪಾಲವಾಹನ, ಸ್ವರ್ಣ ರಥೋತ್ಸವ
ರಾತ್ರಿ : ಗರುಡವಾಹನ

**04-12-2024**
ಬುಧವಾರ
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**05-12-2024**
ಗುರುವಾರ
ಹಗಲು : ರಥೋತ್ಸವ
ರಾತ್ರಿ : ಅಶ್ವವಾಹನ

**06-12-2024**
ಶುಕ್ರವಾರ
ಹಗಲು : ಚಕ್ರಸ್ನಾನ, ಪಂಚಮೀ ತೀರ್ಥ
ರಾತ್ರಿ : ಧ್ವಜಾವರೋಹಣ



# ದೀಪಾವಳಿ






ದೀಪಾವಳಿ ಎಂದರೆ ದೀಪಗಳ ಸಾಲುಗಳೆಂದರ್ಥ ಆಶ್ವಯುಜ ಮಾಸದ ಕೃಷ್ಣ ಪಕ್ಷದ ಚತುರ್ದಶಿ ಅಮಾವಾಸ್ಯೆ ಮತ್ತು ಕಾತೀಕ ಶುದ್ಧ ಪಾಡ್ಯಮಿಗಳಲ್ಲಿ ದೀಪಾವಳಿಯನ್ನು ಆಚರಿಸುತ್ತೇವೆ.ಅಂದು ಇನಕುಲೋದ್ಭವನಾದ ಶ್ರೀರಾಮನು ರಾವಣನನ್ನು ಸಂಹರಿಸಿ, ಸೀತೆ ಮತ್ತು ಲಕ್ಷ್ಮಣರೊಂದಿಗೆ ಅಯೋಧ್ಯೆಗೆ ಮರಳಿದನೆಂದೂ, ಆತನ ಗೆಲುವಿನ ಸಂಭ್ರಮವನ್ನು ಆಚರಿಸುವ ಸಂದರ್ಭವೇ ದೀಪಾವಳಿ ಎನ್ನುತ್ತಾರೆ. ಅಮಾವಾಸ್ಯೆಯ ಹಿಂದಿನ ದಿನ ಹೆಸರೇ ಸೂಚಿಸುವಂತೆ ನರಕ ಚತುದರ್ಶಿಯೆಂದು ಶ್ರೀಕೃಷ್ಣನು ಸತ್ಯಭಾಮೆಯೊಡಗೂಡಿ ನರಕಾಸುರನ ಸಂಹಾರಗೈದನೆಂದೂ ಕೆಡುಕಿನ ವಿರುದ್ಧ ಒಳಿತು ಗೆದ್ದ ಹರ್ಷವನ್ನು ಅಂದು ಆಚರಿಸುತ್ತೇವೆ. ಬಲಿ-ವಾಮನರ ಕಥೆ ಹಾಗೂ ಬಲಿಚಕ್ರವರ್ತಿಯ ತ್ಯಾಗ, ಅಮಾವಾಸ್ಯೆಯ ಮರುದಿನ ಬಲಿಪಾಡ್ಯಮಿ ಯೊಂದಿಗೆ ಇನ್ನಿತರ ಪುರಾಣಗಳೆಲ್ಲಾ ನಮಗೆ ಅನೇಕ ವಿಷಯಗಳು ತಿಳಿದು ಬರುತ್ತಿವೆ.

ಹಿಂದೂ ಧರ್ಮದ ಪ್ರಕಾರ ಈ ದೀಪಾವಳಿಯನ್ನು ಪ್ರಪಂಚದಲ್ಲಿ ಎಲ್ಲೆಡೆ ಆಚರಿಸುವ ಸಂಪ್ರದಾಯವಿದೆ. ಈ ಹಬ್ಬದಲ್ಲಿ ಒಬ್ಬರಿಗೊಬ್ಬರು ಸಿಹಿ ಹಂಚುವುದು, ಹೊಸಬಟ್ಟೆ, ಪಟಾಕಿಗಳದೇ ಅಬ್ಬರವಿರುತ್ತದೆ. ತಿರುಮಲೆಯಲ್ಲೂ ಅಂದು ವಿಶೇಷವಾಗಿ ದೀಪಾವಳಿ ಆಸ್ಥಾನವನ್ನು ನಡೆಸುತ್ತಾರೆ. ಮಂಗಳರೂಪಿಣಿಯಾಗಿರುವ ಮಹಾಲಕ್ಷ್ಮಿಯ ಪೂಜೆಯೂ ಇಂದು ಪ್ರಮುಖವಾದ ಸ್ಥಾನವನ್ನು ಪಡೆದಿದೆ. ಒಟ್ಟಿನಲ್ಲಿ ಹಿಂದೂಧರ್ಮದ ಪ್ರಕಾರ ದುಷ್ಟಶಕ್ತಿಯನ್ನು ದೈವೀಶಕ್ತಿಗಳು ಬಗ್ಗುಬಡಿದು, ಪ್ರಪಂಚದಲ್ಲೆಡೇ ಸಂಭ್ರಮ, ಸೌಹಾರ್ದತೆಯನ್ನು ಸಾರುತ್ತ ಹಬ್ಬಗಳನ್ನು ಆಚರಿಸುವುದು ಸಂಪ್ರದಾಯ.

**ಸಮಸ್ತ ಪ್ರಜೆಗಳಿಗೆ ಹಾಗೂ ಚಂದಾದಾರರಿಗೂ ದೀಪಾವಳಿ ಹಬ್ಬದ ಶುಭಾಶಯಗಳು**



# ಅಹಲ್ಯೆಯನ್ನು ನಿತ್ಯ ಸ್ಮರಿಸಿದರೆ ಮಹಾಪಾತಕ ನಾಶನಂ

- ಹನುಮಂತ ಮ. ದೇಶಕುಲಕರ್ಣಿ
94803 64915

ಪಂಚಕನ್ಯೆಯರಲ್ಲಿ ಒಬ್ಬಳಾದ ಅಹಲ್ಯೆಯ ಬಗ್ಗೆ ಗೌತಮ ಮಹರ್ಷಿ ಆಶ್ರಮ ಪ್ರವೇಶಿಸಿದ ತಕ್ಷಣ ಅವಳ ಕಥೆ ವಿಶ್ವಾಮಿತ್ರರು ರಾಮನಿಗೆ ಹೇಳತೊಡಗಿದರು. ತಪ್ಪು ಮಾಡಿದವರನ್ನು ದೂಷಿಸಿ, ಶಿಕ್ಷಿಸುವುದನ್ನು ಎಲ್ಲರೂ ಮಾಡುತ್ತಾರೆ ಆದರೆ, ಕೇವಲ ವಿಶೇಷವುಳ್ಳವರು ಮಾತ್ರವೇ ತಪ್ಪಿತಸ್ಥರನ್ನೂ ಕ್ಷಮಿಸುವ ಸಾಮರ್ಥ್ಯವಿರುತ್ತದೆ. ಅಂತಹವರನ್ನು ಪತಿತಪಾವನರು ಎನ್ನುತ್ತಾರೆ. ನೀನು ಅಂತಹ ವಿಶೇಷವಾದ ವ್ಯಕ್ತಿ, ನೀನು ನಿನ್ನ ಪಾದದಿಂದ ಆ ಶಿಲೆಯನ್ನು ಸ್ಪರ್ಶಿಸಿದಲ್ಲಿ ನೀನು ಅಹಲ್ಯೆಯನ್ನು ಶಾಪದಿಂದ ಮುಕ್ತಗೊಳಿಸಿದಂತಾಗುವುದು ಎನ್ನುತ್ತಾರೆ.

ಶಿಲೆಯನ್ನು ಸ್ಪರ್ಶಿಸಿದ ಶ್ರೀರಾಮ ಶಿಲೆಯನ್ನು ತನ್ನ ಪಾದದಿಂದ ಸ್ಪರ್ಶಿಸಿದಾಗ ಶಿಲೆಯು ಅಹಲ್ಯೆಯಾಗಿ ಪರಿವರ್ತಿತವಾಗಿ ಶಾಪವಿಮೋಚನೆಗೊಳ್ಳುತ್ತಾಳೆ. ಅಹಲ್ಯೆಯು ಶ್ರೀರಾಮನಿಗೆ ನಮಸ್ಕರಿಸಿ ನನ್ನ ಪತಿಯು ನನ್ನನ್ನು ಶಪಿಸಿದರೆಂದು ನಾನು ಭಾವಿಸಿದ್ದೆ. ಆದರೆ ಆ ಶಾಪದಿಂದ ನನ್ನ ಜನ್ಮ ಸಾರ್ಥಕವಾಗುತ್ತದೆ ಅಂದು ಕೊಂಡಿರಲಿಲ್ಲ. ಇಂದು ನನಗೆ ಭಗವಂತನ ದರ್ಶನ ಭಾಗ್ಯವು ಪ್ರಾಪ್ತಿಯಾಯಿತು.

ನನಗೆ ನನ್ನ ಪತಿಯು ಅವರು ಶಾಪ ಅಲ್ಲ ವರವನ್ನೇ ನೀಡಿದರು ಎಂದಳು. ಮಿಥಿಲಾಪುರದ ಹತ್ತಿರ ಒಂದು ಆಶ್ರಮ ಕಟ್ಟಿಕೊಂಡು ಗೌತಮ ಮಹರ್ಷಿ ಲೋಕಕಲ್ಯಾಣ ಕಾರ್ಯದಲ್ಲಿ ಪತ್ನಿ ಅಹಲ್ಯೆಯ ಜೊತೆ ಇದ್ದರು. ಅವರ ದರ್ಶನಕ್ಕೆ ದೇವತೆಗಳು ಬರುತ್ತಿದ್ದರು. ಬ್ರಹ್ಮನ ಮಾನಸ ಅಹಲ್ಯಾದೇವಿ (ಮುದ್ಗಲ ಮಹರ್ಷಿಯ ಪುತ್ರಿ ಎಂತಲೂ ಉಲ್ಲೇಖ ಇದೆ) ಇಡೀ ಜಗತ್ತಿನಲ್ಲಿ ಇವಳಷ್ಟು ಸೌಂದರ್ಯವತಿ ಯಾರು ಇರಲಿಲ್ಲ.

ಒಂದು ಸಾವಿರ ಸುಂದರಿಯನ್ನು ಸೃಷ್ಟಿ ಮಾಡಿದ ಬ್ರಹ್ಮ ಅವರೆಲ್ಲರಲ್ಲಿನ ಅತ್ಯಂತ ಸೌಂದರ್ಯದ ಅಂಶವನ್ನು ತೆಗೆದುಕೊಂಡು ಈಕೆಯನ್ನು ಸೃಷ್ಟಿ ಮಾಡಿದನು. ಒಂದು ಕಥೆಯಂತೆ ಈಕೆಯನ್ನು ಸೃಷ್ಟಿ ಮಾಡಿದ ಬ್ರಹ್ಮ ಇವಳ ರಕ್ಷಣೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಗೌತಮ ಮುನಿಗೆ ಒಪ್ಪಿಸಿದ. ಗೌತಮ ಮುನಿ ಈಕೆಯನ್ನು ಪಾಲಿಸಿ, ಪೋಷಿಸಿ ಈಕೆ ಪ್ರಾಪ್ತ ವಯಸ್ಸಿಗೆ ಬಂದಾಗ ಬ್ರಹ್ಮನ ಬಳಿ ತಂದು ಬಿಟ್ಟನು. ಇತನ ಪ್ರಾಮಾಣಿಕತೆಗೆ ಮೆಚ್ಚಿದ ಬ್ರಹ್ಮನು ಅಹಲ್ಯೆಯನ್ನು ಕೊಟ್ಟು ಮದುವೆ ಮಾಡಿಸಿದನಂತೆ, ಮತ್ತೊಂದು ಕಥೆಯಂತೆ,ಇಡೀ ಪ್ರಪಂಚ ಪರ್ಯಟನೆಯನ್ನೂ ಯಾರೂ ಮೊದಲಿಗೆ ಮುಗಿಸಿಕೊಂಡು ಬರುತ್ತಾರೋ, ಅವರಿಗೆ ಅಹಲ್ಯೆಯನ್ನು ಕೊಟ್ಟು ಮದುವೆ ಮಾಡುವೆನೆಂಬ ನಿಯಮವಿಟ್ಟಾಗ, ಈಕೆಯಲ್ಲಿ ಅನುರಕ್ತನಾಗಿದ್ದ ಗೌತಮರು ಒಂದು ಹಸುವಿಗೆ ಪ್ರದಕ್ಷಿಣೆ ಮಾಡಿ, ಸ್ವಯಂವರವನ್ನು ಗೆದ್ದು ಮದುವೆಯಾದರಂತೆ. ಈ ದಂಪತಿಗಳಿಗೆ ಶತಾನಂದ ಎಂಬ ಪುತ್ರ ಜನಿಸಿದ.

ಋಷಿ ಗೌತಮನ ಬಳಿಯಲ್ಲಿ ಶಿಷ್ಯವೃತ್ತಿಯನ್ನು ಮಾಡುತ್ತಿದ್ದ ಉತ್ತಂಕನೆಂಬ ವಟು ತನ್ನ ವಿದ್ಯಾಭ್ಯಾಸ ಮುಗಿಸಿ ಹಿಂತಿರುಗುವಾಗ ಗುರುದಕ್ಷಿಣೆಯಾಗಿ ಏನನ್ನು ಕೊಡಲಿ? ಎಂದು ಕೇಳುತ್ತಾನೆ. ಗೌತಮ ಯಾವ ಪ್ರತಿಫಲವನ್ನೂ ಅಪೇಕ್ಷಿಸುವುದಿಲ್ಲ. ಆದರೆ ಅಹಲ್ಯೆ ಸೌದಾಸನೆಂಬ ರಾಜನ ಹೆಂಡತಿ ಮದವತಿ ಎಂಬವಳು ಧರಿಸಿರುವ ಕಿವಿಯೋಲೆ ತನಗೆ ಇಷ್ಟವಾಗಿದೆಯೆಂದೂ ಅದನ್ನು ತಂದುಕೊಡಬೇಕೆಂದೂ ಕೇಳಿ ತನ್ನಾಸೆಯನ್ನು ಈಡೇರಿಸಿಕೊಳ್ಳುತ್ತಾಳೆ.

ರೂಪವಂತೆ ಅಹಲ್ಯೆಯ ಮೇಲೆ ಆಸೆಪಟ್ಟ ಇಂದ್ರ, ಒಂದು ಬೆಳಿಗ್ಗೆ ಗೌತಮರು ಸ್ನಾನ ಸಂಧ್ಯಾವಂದನಾದಿ ಆಹ್ನಿಕಗಳನ್ನು ಮಾಡಲು ನದಿಗೆ ಹೋದಾಗ, ಗೌತಮರ ವೇಷವನ್ನು ಧರಿಸಿ ಅವರ ಆಶ್ರಮದತ್ತ ಬರುತ್ತಿರುತ್ತಾರೆ. ತನ್ನ ಪ್ರತಿರೂಪ ನೋಡಿ ಕ್ರುದ್ಧರಾದ ಗೌತಮ ಮುನಿ ನನ್ನ ರೂಪ ಧರಿಸಿ ನೀನು ಮಾಡಬಾರದ ಪಾಪ ಮಾಡಿದ್ದೀಯ, ಸ್ತ್ರೀಯರ ಮೇಲೆ ಕಾಮವಿರಲು ಕಾರಣ ನೀನು ಪುರುಷನೆಂಬ ಅಹಂಕಾರ ನಪುಂಸಕನಾಗು ಎಂದು ಶಾಪ ಕೊಟ್ಟರು.

ನಮಗೆಲ್ಲಾ ತಿಳಿದಿರುವಂತೆ ಪ್ರಮುಖರಾದ ಏಳುಜನ ಮಹರ್ಷಿಗಳನ್ನು ಸಪ್ತಋಷಿಗಳೆಂದು ಕರೆಯುತ್ತಾರೆ. ಅವರಲ್ಲಿ ಅತ್ರಿಮಹರ್ಷಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಸಿಷ್ಠಮಹರ್ಷಿ, ಈ ಏಳು ಜನರು ಒಂದು, ಎರಡಲ್ಲ ಕೆಲವು ಸಾವಿರ ಯುಗಗಳ ಕಾಲ ತಪಸ್ಸು ಮಾಡಿದರು. ಆ ತಪೋಬಲದೊಂದಿಗೆ ನಕ್ಷತ್ರಮಂಡಲದಲ್ಲಿ ನಕ್ಷತ್ರಗಳಾಗಿ ಇಂದಿಗೂ ಪ್ರಕಾಶಿಸುತ್ತಲೇ ಇದ್ದಾರೆ. ರಾತ್ರಿಯ ವೇಳೆಯಲ್ಲಿ ಗಗನದ ಬೀದಿಯಲ್ಲಿನ ಉತ್ತರ ದಿಕ್ಕಿನಲ್ಲಿ ಈ ಸಪ್ತಮಹರ್ಷಿಮಂಡಲವನ್ನು ನಾವು ನೋಡಬಹುದು.

ಈ ಏಳು ಜನ ಮಹರ್ಷಿಗಳು ಒಂದು ಗುಂಪು ಎಂದು ಹೇಳಬಹುದು. ಆ ಏಳು ಜನ ಮಹರ್ಷಿಗಳು ತೀರ್ಥಯಾತ್ರೆಗಾದರೂ ಸರಿ ಅಥವಾ ಲೋಕಗಳಿಗಾದರೂ ಸರಿ, ಒಟ್ಟಿಗೇ ಸಂಚರಿಸುತ್ತಾರೆ. ಕಣ್ಣಿಗೆ ಕಾಣುವ ವಿಚಿತ್ರಗಳು, ವಿಶೇಷಗಳನ್ನು ನೋಡುತ್ತಾ, ಪರಸ್ಪರ ಚರ್ಚಿಸುತ್ತಾ ಆನಂದದಿಂದ ಸಾಗುತ್ತಿರುತ್ತಾರೆ. ಅವರ ಸಂಚಾರದಲ್ಲಿ ಅವರ ಯಾತ್ರೆಯಲ್ಲಿ ಅವರ ಮಾತುಕತೆಗಳಲ್ಲಿ ಲೋಕಕಲ್ಯಾಣಕರವಾದ ವಿಷಯಗಳು ಹೇರಳವಾಗಿರುತ್ತವೆ.

ನಕ್ಷತ್ರಮಂಡಲದಲ್ಲಿ ಮೂಗು ಹಿಡಿದುಕೊಂಡು ತಪಸ್ಸಿನಲ್ಲಿ ಮುಳುಗಿರುವ ಇವರುಗಳಿಗೆ, ಕಾಲಚಕ್ರ ಮುಂದುರುಳುವುದೇ ತಿಳಿಯುವುದಿಲ್ಲ. ಯಾವ ಯುಗ ನಡೆಯುತ್ತಿದೆ ಎಂಬುದೂ ಇವರ ಅರಿವಿಗೆ ಬಂದಿರುವುದಿಲ್ಲ. ಕೆಲವು ಸಾವಿರ ವರ್ಷಗಳ ನಂತರ ತಪಸ್ಸಿನಿಂದ ಎಚ್ಚೆತ್ತ ಮೇಲೆ ಈ ಸಪ್ತಋಷಿಗಳು ಕೆಲವು ದಿನಗಳ ಕಾಲ ಹಾಗೇ ಲೋಕಸಂಚಾರಕ್ಕೆ ಹೋಗೋಣವೆಂದುಕೊಂಡರು. ಎಲ್ಲಿಗೋ ಏಕೆ? ಮೊದಲು ವೈಕುಂಠಕ್ಕೆ ಹೋಗೋಣ, ನಂತರ ಕೈಲಾಸಕ್ಕೆ ಹೋಗೋಣ ಎಂದುಕೊಂಡರು. ಕೂಡಲೇ ಎಲ್ಲರೂ ಒಟ್ಟಿಗೇ ಹೊರಟರು. ತಪೋಧನರಾದ್ದರಿಂದ ಕ್ಷಣ ಮಾತ್ರದಲ್ಲೇ ಈ ಋಷಿಗಳೆಲ್ಲರೂ ನಕ್ಷತ್ರಲೋಕದಿಂದ ನೇರವಾಗಿ ಶ್ರೀವೈಕುಂಠದ ಬಂಗಾರದ ಬಾಗಿಲಿನ ಮುಂದೆ ಪ್ರತ್ಯಕ್ಷರಾದರು.

ಒಳಗೆ ಹೋಗೋಣವೆಂದುಕೊಳ್ಳುವಷ್ಟರಲ್ಲಿ ಅವರಿಗೆ ಒಂದು ದೃಶ್ಯ ಕಣ್ಣಿಗೆ ಬಿತ್ತು. ಆ ದೃಶ್ಯವನ್ನು ನೋಡಿದ ಸಪ್ತಋಷಿಗಳು ಆಶ್ಚರ್ಯಗೊಂಡರು ಏಕೆಂದರೆ...ವೈಕುಂಠದ ದ್ವಾರಪಾಲಕರಾದ ಜಯವಿಜಯರು ತಮ್ಮ ಗದೆಗಳನ್ನು ವೈಕುಂಠದ ದ್ವಾರದ ಎರಡೂ ಪಕ್ಕದಲ್ಲಿ ಇಟ್ಟು, ಬಾಗಿಲ ಮುಂದೆ ಕುಳಿತು ಹಾಯಾಗಿ ಸುತ್ತಮುತ್ತಲಿನ ಪರಿಸರವನ್ನೆಲ್ಲಾ ಮರೆತು ಕವಡೆ ಯಾಟದಲ್ಲಿ ನಿಮಗ್ನರಾಗಿದ್ದರು. ಕೂಡಲೇ ಆ ಋಷಿಗಳಲ್ಲಿ ಒಬ್ಬರು ಕೆಮ್ಮಿದರು, ಒಬ್ಬರು ಸೀನಿದರು, ಒಬ್ಬರು ಗೋವಿಂದಾ! ಎಂದರು, ಮತ್ತೊಬ್ಬರು ನಾರಾಯಣಾ! ಎಂದರು. ಇನ್ನೊಬ್ಬರು ವೈಕುಂಠವಾಸಾ! ಲಕ್ಷ್ಮಿಪತಿ! ಹೀಗೇ ಒಬ್ಬೊಬ್ಬರು ಒಂದೊಂದು ರೀತಿ ಅವರಿಗೆ ಇಷ್ಟವಾದ ರೀತಿಯಲ್ಲಿ ಸ್ವಾಮಿಯನ್ನು ಸ್ಮರಿಸಿದರು.


ಈ ಮಾತುಗಳನ್ನು ಕೇಳಿದ ಜಯವಿಜಯರು ನಿಧಾನವಾಗಿ ತಲೆಯೆತ್ತಿ ಋಷಿಗಳನ್ನು ನೋಡಿದರು.ನೀವೆಲ್ಲರೂ ಯಾರು ಸ್ವಾಮಿ? ಕೆಲವು ಸಾವಿರ ವರ್ಷಗಳಿಂದಲೂ ನಿಮ್ಮನ್ನು ನೋಡಿಲ್ಲವಲ್ಲಾ? ನೋಡಿದಂತೆಯೂ ನೆನಪಾಗುತ್ತಿಲ್ಲವಲ್ಲಾ? ಸರಿ! ನೀವು ಯಾರಾದರೆ ನಮಗೇನು? ಒಳಗೆ ನಮ್ಮ ಸ್ವಾಮಿಯು ಇಲ್ಲ, ಕೆಲವು ಸಾವಿರ ವರ್ಷಗಳಾಗಿವೆ. ಯಾವ ಲೋಕಕ್ಕೆ ಹೋದನೋ? ನಮಗೆ ತಿಳಿದಿಲ್ಲ. ನಾವು ನಿಜವನ್ನೇ ನುಡಿಯುತ್ತಿದ್ದೇವೆ. ಅವಸರನಪಟ್ಟು ಕೋಪಗೊಂಡು ಶಾಪಗಳನ್ನು ನೀಡಬೇಡಿ. ಆದರೂ ನೀವು ಸರ್ವಜ್ಞರಲ್ಲವೇ? ನಿಮಗೆ ಹೇಳುವುದೇನಿದೆ? ಎಂದರು.

ವಿಸ್ಮಯಗೊಂಡ ಋಷಿಗಳೆಲ್ಲರೂ ಅಲ್ಲಿಂದ ಹೊರಟು ಕೈಲಾಸಕ್ಕೆ ಹೋದರು. ಕೈಲಾಸದಲ್ಲಿ ಪರಿಸ್ಥಿತಿ ಇದಕ್ಕಿಂತಲೂ ವಿಚಿತ್ರವಾಗಿತ್ತು. ಎಲ್ಲೆಡೇ ನಿಶ್ಯಬ್ದವು ಆವರಿಸಿತ್ತು. ಯಾರಾದರೂ ಕಾಣುತ್ತಾರೇನೋ ಎಂದುಕೊಂಡು ಸಪ್ತಋಷಿಗಳು ಸುತ್ತಲೂ ದೃಷ್ಟಿಸಾರಿಸಿದರು. ಅಷ್ಟರಲ್ಲಿ ಇಬ್ಬರು ಶಿವಕಿಂಕರರು ಓಡುತ್ತಾ ಬಂದರು. ಅವರು ನೋಡುವುದಕ್ಕೆ ಕಪ್ಪಾಗಿ ಮಾತ್ರವಲ್ಲದೇ ವಿಚಿತ್ರವಾಗಿಯೂ ಕಂಡು ಬರುತ್ತಿದ್ದರು. ಮೈಗೆಲ್ಲಾ ಬೂದಿಯನ್ನು ಬಳಿದು ಕೊಂಡಿದ್ದರು, ಹೆಚ್ಚೂ ಕಡಿಮೆ ದಿಗಂಬರರಾಗಿದ್ದರು.

ಯಾರು ನೀವು? ಋಷಿಗಳಂತೆ ಇದ್ದೀರಲ್ಲಾ? ನಮ್ಮ ಸಾಂಬಶಿವಯ್ಯ ಇಲ್ಲಿಂದ ಕಣ್ಮರೆಯಾಗಿ ಕೆಲವು ಯುಗಗಳೇ ಕಳೆದಿವೆ. ಎಲ್ಲಿಗೆ ಹೋಗಿದ್ದಾನೋ ಗೊತ್ತಿಲ್ಲ. ಶಿವಯ್ಯನೊಂದಿಗೆ ಬಸವಣ್ಣ, ಗಣಪಯ್ಯ, ಕುಮಾರಯ್ಯ ಎಲ್ಲರೂ ಹೋಗಿದ್ದಾರೆ. ಆದರೂ ನಿಮ್ಮನ್ನು ನೋಡುತ್ತಿದ್ದರೆ ಎಲ್ಲಾ ತಿಳಿದಿರುವಂತೆ ಕಾಣುತ್ತಿದ್ದೀರಲ್ಲಾ? ನಿಮ್ಮ ಬುದ್ಧಿಯಿಂದಲೇ ಕಂಡು ಹಿಡಿದು, ನಮ್ಮ ಸ್ವಾಮಿಯು ಎಲ್ಲಿ ಹೋಗಿದ್ದಾನೋ ಅಲ್ಲಿಗೇ ಹೋಗಿ ಎಂದರು.

ಅವರ ಮಾತಿಗೆ ಬೆರಗಾದ ಋಷಿಗಳು, ಹರಿಹರರು ಎಲ್ಲಿಗೆ ಹೋಗಿರಬಹುದು? ಆ ಬ್ರಹ್ಮನಿಗೆ ತಿಳಿದಿರಬಹುದೇನೋ ನೋಡೋಣ! ಎಂದುಕೊಂಡು ಎಲ್ಲರೂ ಬ್ರಹ್ಮಲೋಕಕ್ಕೆ ಹೊರಟರು. ಇಲ್ಲಿ ಇನ್ನೂ ವಿಚಿತ್ರವಾಗಿತ್ತು. ಅತ್ತ ವೈಕುಂಠದಲ್ಲಿ,ಇತ್ತ ಕೈಲಾಸದಲ್ಲಿ ಒಬ್ಬಿಬ್ಬರಾದರೂ ಕಂಡು ಬರುತ್ತಿದ್ದರು. ಆದರೆ ಸತ್ಯಲೋಕದಲ್ಲಿ ಒಬ್ಬರೂ ಕಾಣಿಸುತ್ತಿರಲಿಲ್ಲ. ಮಾತನಾಡುವುದಕ್ಕೂ ಏನಾದರೂ ಕೇಳುವುದಕ್ಕೂ ಯಾರು ಇರಲಿಲ್ಲ. ಆ ಸ್ಥಳವು ಆಹ್ಲಾದವಾಗಿದ್ದರೂ ನಿಶ್ಯಬ್ದದಿಂದ ಕೂಡಿದ್ದು ಗಂಭೀರವಾಗಿತ್ತು. ಆ ವಾತಾವರಣವನ್ನು ತಡೆಯಲಾರದೇ ನಿಡಿಯುಸಿರು ಬಿಡುತ್ತಾ ಅಲ್ಲಿಂದ ಹೊರಗೆ ನಡೆದರು ಋಷಿಗಳು. ಅಷ್ಟರಲ್ಲಿ ನಾರದ ಮಹರ್ಷಿಗಳು ಎದಿರಾದರು. ಸಪ್ತಋಷಿಗಳು, ನಾರದರು ಪರಸ್ಪರ ವಂದನೆಯನ್ನು ವಿನಿಮಯ ಮಾಡಿಕೊಂಡರು.

# ಸಪ್ತಋಷಿಗಳ ಕವಿತೆಗಳಲ್ಲಿ ಸಪ್ತಗಿರಿಯೊಡೆಯ



ಋಷಿವರೇಣ್ಯರೇ! ಸಾವಿರ ವರ್ಷಗಳಾದ ಮೇಲೆ ನಿಮ್ಮೆಲ್ಲರ ದರ್ಶನವು ಒಂದೇ ಕಡೆ ದೊರೆತಿದೆ. ಆದರೂ ನೀವೆಲ್ಲರೂ ಇಲ್ಲಿ ಕಂಡು ಬಂದಿದ್ದು ವಿಶೇಷವೆಂದೇ ಹೇಳಬಹುದು, ಎನ್ನುತ್ತಾ ದೇವರ್ಷಿ ಆಶ್ಚರ್ಯವನ್ನು ವ್ಯಕ್ತಪಡಿಸಿದರು.

ಅಯ್ಯಾ ನಾರದಮುನೀ! ನೀವು ಹೇಳುತ್ತಿರುವುದು ನಿಜ! ನಮ್ಮ ನಕ್ಷತ್ರ ಮಂಡಲದಲ್ಲಿ ನಾವು ತಪೋನಿಮಗ್ನರಾಗಿ ಅನೇಕ ಸಾವಿರ ವರ್ಷಗಳ ಕಾಲ ಕಳೆದುಹೋಗಿದೆ. ನಾವೆಲ್ಲರೂ ತ್ರಿಮೂರ್ತಿಗಳನ್ನು ದರ್ಶಿಸೋಣವೆಂದು ಕೊಂಡು ಮೂರು ಲೋಕಗಳಿಗೆ ಹೊರಟೆವು ಆದರೆ ! ಆದರೆ ಎಂದು ಸಪ್ತಋಷಿಗಳು ಹೇಳುತ್ತಲೇ ನಾರದರು ಜೋರಾಗಿ ನಗುತ್ತಾ,

ನಿಮಗೆ ತ್ರಿಮೂರ್ತಿಗಳ ದರ್ಶನವಾಗುವುದು ಅಸಾಧ್ಯ. ಏಕೆಂದರೆ ಅವರೆಲ್ಲರೂ ಅವರವರ ಲೋಕದಲ್ಲಿದ್ದರಲ್ಲವೇ? ಅವರೇ ಅಲ್ಲ ನೀವು ಯಾವ ಲೋಕಕ್ಕೆ ಹೋದರೂ, ಎಲ್ಲಾ ಲೋಕದಲ್ಲೂ ಯಾರೂ ಕಂಡು ಬರುವುದಿಲ್ಲ ಅದಕ್ಕೆ ಕಾರಣವನ್ನು ಹೇಳುತ್ತೇನೆ ಸಾವಧಾನ ಚಿತ್ತರಾಗಿ ಕೇಳಿರಿ,

ಭೂಲೋಕದಲ್ಲಿನ ಭರತಖಂಡದ ದಕ್ಷಿಣಭಾಗದಲ್ಲಿ 'ವೇಂಕಟಾಚಲ' ಎಂಬ ಪರಮಾದ್ಭುತವಾದ ಪರ್ವತವಿದೆ. ಮೂರೂ ಲೋಕಗಳಲ್ಲಿ ಅದರ ಮಹಿಮೆ ಅನಂತವಾದುದು, ಅಪ್ರಮೇಯವಾದುದು. ಅಲ್ಲಿ ಆ ದಿವ್ಯ ಶಿಖರದ ಮೇಲೆ ಶ್ರೀವೈಕುಂಠಪತಿಯಾದ ಶ್ರೀಮನ್ನಾರಾಯಣನು "ವೇಂಕಟಪತಿ"ಯಾಗಿ ನೆಲೆಸಿರುವ ವಿಷಯ ನಿಮಗೆ ತಿಳಿದಿರುವುದೇ ಅಲ್ಲವೇ? ಆ ಭಕ್ತವತ್ಸಲನಿಗೆ ಬ್ರಹ್ಮ ದೇವನ ನೇತೃತ್ವದಲ್ಲಿ ಅತ್ಯಂತ ವೈಭವದಿಂದ 'ಬ್ರಹ್ಮೋತ್ಸವ' ಎಂಬ ಹೆಸರಿನಿಂದ ಹತ್ತು ದಿನಗಳ ಕಾಲ ಉತ್ಸವಗಳ ನಡೆಯುತ್ತಿವೆ. ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನ ಬ್ರಹ್ಮೋತ್ಸವದ ಸಂಭ್ರಮವನ್ನು ನೋಡಬೇಕೆಂದು ಅದರಲ್ಲಿ ಪಾಲ್ಗೊಳ್ಳುವುದಕ್ಕೆಂದು ಸಕಲ ಲೋಕವಾಸಿಗಳು ಭೂಲೋಕಕ್ಕೆ ಹೋಗಿದ್ದಾರೆ. ಇನ್ನೂ ಹೋಗುತ್ತಲೇ ಇದ್ದಾರೆ. ಅದರಲ್ಲೂ ಸಾಂಬಶಿವನು ವೇಂಕಟಾಚಲದ ಕ್ಷೇತ್ರಪಾಲಕನಾಗಿದ್ದಾನೆ! ಇನ್ನು ಬ್ರಹ್ಮದೇವನಾದರೋ ಆ ಉತ್ಸವಗಳಿಗೆ ತಾನೇ ಮುಂದಾಳತ್ವವನ್ನು ವಹಿಸಿದ್ದಾನೆ. ಆದ್ದರಿಂದಲೇ ಸಮಸ್ತ ಲೋಕಗಳೂ ಖಾಲಿಯಾಗಿವೆ. ಆ ಉತ್ಸವಗಳು ಸಮಾಪ್ತಿಯಾಗುವವರೆಗೂ ನಿಮಗೆ ಯಾರೂ ಕಂಡು ಬರುವುದಿಲ್ಲ. ಆದರೂ ಸುತ್ತ ಮುತ್ತಲಿನ ಪರಿಸರದಲ್ಲಿ ಏನಾಗುತ್ತಿದೆ ಎಂದು ತಿಳಿಯದೇ ಮೂಗು ಹಿಡಿದು ಕೊಂಡು ತಪಸ್ಸು ಮಾಡುತ್ತಾ ನಿಮ್ಮ ಲೋಕದಲ್ಲೇ ನೀವಿದ್ದರೆ ಹೇಗೆ? ಅದು ಸರಿ, ತಿರುಮಲೆಯ ಶ್ರೀಹರಿಯ ಬ್ರಹ್ಮೋತ್ಸವಕ್ಕೆ ಬರಬೇಕೆಂದು ಈಗಾಗಲೇ ನಿಮಗೂ ಆಹ್ವಾನ ಬಂದಿರ ಬೇಕಲ್ಲವೇ? ಸರಿ... ನಾವು ಪುನಃ ಆದಷ್ಟೂ ಬೇಗ ಸಪ್ತಗಿರಿ ಶಿಖರಗಳಲ್ಲಿ ಬ್ರಹ್ಮೋತ್ಸವದ ಸಂಭ್ರಮದಲ್ಲಿ ಭೇಟಿಯಾಗೋಣ. ನಾರಾಯಣ ! ನಾರಾಯಣ! ಎನ್ನುತ್ತಾ ನಾರದಮಹರ್ಷಿ ಅದೃಶ್ಯರಾದರು.

ನಾರದ ಮಹರ್ಷಿಯ ಮಾತಿಗೆ ಸರಿ ಹಾಗಾದರೆ ಎನ್ನುತ್ತಾ .. ನಾಲ್ಕು ಹೆಜ್ಜೆ ಹಾಕುವುದರೊಳಗೆ ಸಪ್ತಋಷಿಗಳ ಎದುರಿನಲ್ಲಿ ಖಗವಾಹನನಾದ ವೈನತೇಯನು ತಿರುಮಲೇಶನ ಬ್ರಹ್ಮೋತ್ಸವದ ಆಹ್ವಾನ ಪತ್ರಿಕೆಯೊಂದಿಗೆ ಪ್ರತ್ಯಕ್ಷನಾದ. 'ಮಹರ್ಷಿಗಳೇ! ನಕ್ಷತ್ರಮಂಡಲದಲ್ಲೆಲ್ಲಾ ನಿಮಗಾಗಿ ಹುಡುಕಾಡಿದೆ. ನಂತರ ಮೂರೂ ಲೋಕಗಳಲ್ಲೂ ಸುತ್ತಾಡಿದೆ. ಇಲ್ಲಿ ನಿಮ್ಮ ದರ್ಶನ ಭಾಗ್ಯವು ದೊರೆತಿದೆ. ನಾನು ಧನ್ಯನಾದೆ. ಬ್ರಹ್ಮಾಂಡ ನಾಯಕನ ಬ್ರಹ್ಮೋತ್ಸವಕ್ಕೆ ನಿಮ್ಮನ್ನು ಆಹ್ವಾನಿಸುತ್ತಿದ್ದೇನೆ. ಎಲ್ಲರೂ ಖಂಡಿತಾ ಬನ್ನಿ' ಎನ್ನುತ್ತಾ, ಎಷ್ಟು ವೇಗದಿಂದ ಬಂದನೋ ಅಷ್ಟೇ ವೇಗದಿಂದ ಅಲ್ಲಿಂದ ಅದೃಶ್ಯನಾದ ವೈನತೇಯನು.

ಪಕ್ಷಿರಾಜನ ಸ್ವಾಗತದಿಂದ ಸಪ್ತರ್ಷಿಗಳು ಸಂಭ್ರಮಗೊಂಡರು. ಇನ್ನೇಕೆ ನಿಧಾನ? ವೆಂಕಟಾಚಲಕ್ಕೆ ಹೋದರೆ,ಬ್ರಹ್ಮೋತ್ಸವಗಳ ವೈಭವವನ್ನು ನೋಡಬಹುದು, ಮುಕ್ಕೋಟಿದೇವತೆಗಳನ್ನು ನೋಡಬಹುದು. ಅವರ ಪ್ರಾರ್ಥನೆಗಳನ್ನು ಆಲಿಸುತ್ತಾ ಅನುಗ್ರಹಿಸುತ್ತಿರುವ ದೇವದೇವನನ್ನು ದರ್ಶಿಸಬಹುದಲ್ಲವೇ ಎಂದುಕೊಂಡು ತಡ ಮಾಡದೇ ಕಲಿಯುಗ ವೈಕುಂಠಕ್ಕೆ ಹೊರಟರು. ಅವರಿಗೆ ಯಾವುದೇ ರೀತಿಯ ವಾಹನದ ಅಗತ್ಯವಿಲ್ಲ ಅಲ್ಲವೇ, ಅವರೆಲ್ಲರೂ ಸಂಕಲ್ಪ ಮಾತ್ರದಿಂದಲೇ "ಸಪ್ತಗಿರಿ"ಯನ್ನು ತಲುಪಿದರು.

**ಸಪ್ತಗಿರಿಯ ಶೋಭೆ :**

ಅಂತರಿಕ್ಷದಿಂದಲೇ ಏಳು ಬೆಟ್ಟಗಳ ಅದ್ಭುತವಾದ ಶೋಭೆಯನ್ನು ವೀಕ್ಷಿಸುತ್ತಾ ಕೈಗಳನ್ನು ಎತ್ತಿ ನಮಸ್ಕರಿಸಿದರು. ಆ ಬೆಟ್ಟಗಳ ನಡುವೆ ವಿಚಿತ್ರವಾದ ಕಾಂತಿ ಯಿಂದ ಕಂಗೊಳಿಸುತ್ತಿರುವ ಬಂಗಾರದ ಆನಂದನಿಲಯದ ಶಿಖರವನ್ನು, ವಿಮಾನ ಗೋಪುರವನ್ನು ಆಶ್ಚರ್ಯದಿಂದ ಸಂಭ್ರಮದಿಂದ ವೀಕ್ಷಿಸುತ್ತಾ,ಇಷ್ಟು ವರ್ಷಗಳು ಅಲ್ಲಲ್ಲ.... ಇಷ್ಟು ಸಾವಿರ ವರ್ಷಗಳ ಕಾಲಕ್ಕೆ ಈ ಅವಕಾಶ ಒದಗಿದ್ದು ತಮ್ಮ ಸೌಭಾಗ್ಯವೆಂದು ಭಾವಿಸಿದರು.

ಏಳು ಬೆಟ್ಟಗಳಲ್ಲಿ ಎಲ್ಲಿ ನೋಡಿದರೂ, ಸಂಭ್ರಮವು ತಾಂಡವಾಡುತ್ತಿತ್ತು. ಬೆಟ್ಟವೆಲ್ಲಾ ಕೋಲಾಹಲದಿಂದ ತುಂಬಿತ್ತು. ಈ ಕ್ಷೇತ್ರದ ವೈಭವವನ್ನು ವರ್ಣಿಸುವುದು ಅಸಾಧ್ಯ!ಕೆಲವೇ ಜನರು ಮಾತ್ರಾ ಹೋಗಬಲ್ಲ, ಸದಾ ನಿಶ್ಶಬ್ದವಾಗಿರುವ, ನಿರಾಮಯವಾಗಿರುವ ಶ್ರೀವೈಕುಂಠ ಲೋಕವೆಲ್ಲಿ? ದೇವ ದಾನವ,ಮಾನವ,ಯಕ್ಷ,ಕಿನ್ನರ,ಗಂಧರ್ವಾದಿ ಸಿದ್ಧಪುರುಷರು ಸರ್ವಲೋಕ ವಾಸಿಗಳೂ ಅವರೂ ಇವರೂ ಎನ್ನುವ ಬೇಧವಿಲ್ಲದೇ ಸರ್ವ ಭಕ್ತರೂ ಆನಂದ ದಿಂದ, ನಿತ್ಯವೂ ಸಂಭ್ರಮದಿಂದ ಕೂಡಿರುವ ಕಲಿಯುಗ ವೈಕುಂಠವಾದ ಈ ವೇಂಕಟಾಚಲದ ವೈಭವವೆಲ್ಲಿ? ಆಹಾ! ಅದೋ! ಬ್ರಹ್ಮಚಾರಿಗಳು, ಯತೀಶ್ವರರು, ಯೋಗಿಗಳು, ಮಂತ್ರವೇತ್ತರು, ಅವಧೂತರು, ಸನ್ಯಾಸಿಗಳು, ಗೃಹಸ್ಥರು, ವಾನಪ್ರಸ್ಥರು,ಬಾಲಕ ಬಾಲಕಿಯರು, ಕನ್ಯಾಮಣಿಗಳು, ಪುಣ್ಯಾಂಗನೆಯರು, ಪೂರ್ವಸುವಾಸಿನಿಯರು, ಅಂಗವಿಕಲರು, ಕುರುಡರು, ಕುಂಟರು, ಅಧಿಕಾರಿಗಳು, ಪಂಡಿತರು, ಪಾಮರರು, ಚಕ್ರವರ್ತಿಗಳು, ರಾಜ್ಯಾಧಿಕಾರಿಗಳು ಒಬ್ಬೊಬ್ಬರೇ! ಲಕ್ಷಾಂತರ ಭಕ್ತವರೇಣ್ಯರು ಗೋವಿಂದನಾಮವನ್ನು ಹಾಡುತ್ತಾ ಭಜನೆಗಳೊಂದಿಗೆ, ನೃತ್ಯಗಳೊಂದಿಗೆ, ಆಟಪಾಠಗಳೊಂದಿಗೆ, ಸಂಗೀತನೀರಾಜನದೊಂದಿಗೆ, ಉಪಾಸನೆಗಳೊಂದಿಗೆ, ದೀಪಾರಾಧನೆಯೊಂದಿಗೆ, ಹಲವು ವಿಧವಾದ ಅಲಂಕಾರದೊಂದಿಗೆ ಪ್ರಕಾಶಿಸುತ್ತಿರುವ ಸಪ್ತಗಿರಿಗಳ ಸೌಂದರ್ಯವನ್ನು ವರ್ಣಿಸುವುದು ಹೇಗೆ? ಎಷ್ಟು ವರ್ಣಿಸುವುದು? ಹೀಗೆ ಸಪ್ತಋಷಿಗಳು ಆನಂದ ಸಾಗರದಲ್ಲಿ ಮುಳುಗಿ, ತಮ್ಮ ತಮ್ಮಲ್ಲೇ ಶ್ರೀವೆಂಕಟೇಶ್ವರನ ಶೋಭೆಯನ್ನು ವೈಭವವನ್ನು ಕಣ್ತುಂಬಿಕೊಳ್ಳುತ್ತಿದ್ದರು.



### ಬ್ರಹ್ಮೋತ್ಸವದ ವೈಭವ !!

ಶ್ಲೋ॥ ಶ್ರೀವೇಂಕಟೇಶ ಮತಿ ಸುಂದರ ಮೋಹನಾಂಗಂ
ಶ್ರೀಭೂಮಿಕಾಂತ ಮರವಿಂದ ದಳಾಯತಾಕ್ಷಮ್
ಪ್ರಾಣಪ್ರಿಯಂ ಪ್ರವಿಮಲ ಸತ್ಕರುಣಾಂಬುರಾಶಿಂ
ಬ್ರಹ್ಮೇಶ ವಂದ್ಯ ಮಮೃತಂ ವರದಂ ಭಜಾಮಿ

ಎನ್ನುತ್ತಾ ಮುನಿಗಳು ಪ್ರಾರ್ಥಿಸುತ್ತಾ ಸಾಕ್ಷಾತ್ತು ಸಾಂಬಶಿವನ ಕ್ಷೇತ್ರ ಪಾಲನೆಯಲ್ಲಿ ಚತುರ್ಮುಖ ಬ್ರಹ್ಮದೇವನ ನೇತೃತ್ವದಲ್ಲಿ ಸಕಲ ಲೋಕವಾಸಿಗಳ ಸಮಕ್ಷಮದಲ್ಲಿ ನಡೆಯುತ್ತಿರುವ ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನ ಬ್ರಹ್ಮೋತ್ಸವವನ್ನು ಪ್ರಾರಂಭದಿಂದ ಸಮಾಪ್ತಿಯವರೆಗೂ ವೀಕ್ಷಿಸುತ್ತಾ ಸಪ್ತಗಿರಿಯೊಡೆಯನಿಗೆ ಸಮರ್ಪಿಸಿದ ಘುಮಘುಮಿಸುವ ದಿವ್ಯಪ್ರಸಾದಗಳನ್ನು ಆಸ್ವಾದಿಸುತ್ತಾ ಸಂತೃಪ್ತಿಯನ್ನು ಹೊಂದಿದರು. ಶ್ರೀನಿವಾಸನ ಬ್ರಹ್ಮೋತ್ಸವಗಳನ್ನು ಧ್ವಜಾರೋಹಣದಿಂದ ಪ್ರಾರಂಭಿಸಿ, ಪ್ರತಿದಿನವು ಬೆಳಿಗ್ಗೆ, ರಾತ್ರಿಯಸಮಯದಲ್ಲಿ ನಡೆಯುವ ದೊಡ್ಡಶೇಷವಾಹನ, ಚಿಕ್ಕಶೇಷವಾಹನ, ಹಂಸ, ಸಿಂಹ, ಮುತ್ತಿನಚಪ್ಪರ,ಕಲ್ಪವೃಕ್ಷ, ಸರ್ವಭೂಪಾಲ, ಮೋಹಿನಿ ಅವತಾರ, ಗರುಡ, ಹನುಮಂತ, ಗಜ, ಸೂರ್ಯಪ್ರಭ, ಚಂದ್ರಪ್ರಭ, ಸ್ವರ್ಣರಥೋತ್ಸವ, ಕೊನೆಯಲ್ಲಿ ಅಶ್ವವಾಹನ, ಹೀಗೆ ಎಲ್ಲಾ ವಾಹನಸೇವೆಗಳನ್ನು ಸಪ್ತಋುಷಿಗಳು ಕಣ್ಣಾರೆ ವೀಕ್ಷಿಸಿದರು. ಮಾರನೆಯ ದಿನ ಬೆಳಿಗ್ಗೆ ಶ್ರೀಸ್ವಾಮಿಪುಷ್ಕರಿಣಿಯಲ್ಲಿ ನಡೆಯುವ 'ಚಕ್ರಸ್ನಾನ' ದಲ್ಲೂ ಪಾಲ್ಗೊಂಡರು.

ಸ್ವಾಮಿಪುಷ್ಕರಿಣೀಸ್ನಾನಂ ವೇಂಕಟೇಶ್ವರದರ್ಶನಂ
ಮಹಾಪ್ರಸಾದ ಸ್ವೀಕಾರತ್ರಯಂ ತ್ರೈಲೋಕ್ಯ ದುರ್ಲಭಮ್

ಶ್ರೀಸ್ವಾಮಿಪುಷ್ಕರಿಣಿಯ ಪುಣ್ಯಜಲವು ದಿವ್ಯವಾದ ಔಷಧವಿದ್ದಂತೆ! ಇನ್ನು ಶ್ರೀವೇಂಕಟೇಶ್ವರನಾದರೋ ಮೃತ್ಯು. ರೋಗಾದಿಗಳನ್ನು ಕಳೆದು ಪಾಲಿಸುವ ಅದ್ಭುತವಾದ ವೈದ್ಯನು! ಶ್ರೀಸ್ವಾಮಿಪುಷ್ಕರಿಣಿಯ ಸ್ನಾನ, ಶ್ರೀವೇಂಕಟೇಶ್ವರನ ದರ್ಶನ, ಶ್ರೀಸ್ವಾಮಿಯ ಪ್ರಸಾದ ಸ್ವೀಕಾರ... ಈ ಮೂರು ಪರಮಪಾವನವಾದುವು, ಅದ್ಭುತವಾದುವು.ಇವೆಲ್ಲವೂ ಮೂರೂ ಲೋಕಗಳಲ್ಲೂ ಎಲ್ಲರಿಗೂ ದೊರೆಯುವುದಿಲ್ಲ. ಅದೃಷ್ಟವಂತರಾದ್ದರಿಂದ ನಮಗೆ ಇವೆಲ್ಲವೂ ದೊರೆಯಿತು ಎಂದು ಭಾವಿಸಿದ ಸಪ್ತ ಋುಷಿಗಳು ಕೃತಜ್ಞತಾಮನೋಭಾವನೆಯೊಂದಿಗೆ ಶ್ರೀಸ್ವಾಮಿಪುಷ್ಕರಿಣಿಯಲ್ಲಿ ಶ್ರೀಸುದರ್ಶನ ಚಕ್ರ ಭಗವಾನನೊಂದಿಗೆ ಮಿಂದರು ನಂತರ ಆನಂದನಿಲಯದಲ್ಲಿನ ಗರ್ಭಗುಡಿಯಲ್ಲಿ ವಿರಾಜಮಾನನಾಗಿದ್ದ ಶ್ರೀವೇಂಕಟೇಶ್ವರನ ದಿವ್ಯಮಂಗಳ ವಿಗ್ರಹವನ್ನು ಕಣ್ಣಾರೆ ವೀಕ್ಷಿಸಿ ಪುನೀತರಾದರು.

ಬ್ರಹ್ಮೋತ್ಸವವು ವೈಭವದಿಂದ ಪರಿಪೂರ್ಣವಾದ ನಂತರ ಶ್ರೀನಿವಾಸನ ಮಹಾಮಣಿಮಂಟಪದಲ್ಲಿ ಆಸ್ಥಾನವು ನಡೆಯಿತು. ಉತ್ಸವಗಳಿಗೆ ಹಾಜರಾದ ಭಕ್ತರೆಲ್ಲರನ್ನೂ ಶ್ರೀನಿವಾಸನು ಅನುಗ್ರಹಿಸಿದ. ಆ ಸಂದರ್ಭದಲ್ಲಿ ಸಾಂಬಸದಾಶಿವನು, ಬ್ರಹ್ಮದೇವನು, ಸಪ್ತಋುಷಿಗಳನ್ನು ನೋಡಿ ಒಂದು ಮಾತು ಕೇಳಿದರು. ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನ ಬ್ರಹ್ಮೋತ್ಸವಗಳನ್ನು ಕಣ್ಣಾರೆ ನೋಡಿದಿರಲ್ಲವೇ! ಶ್ರೀಕಲ್ಯಾಣವೇಂಕಟೇಶ್ವರನ ದರ್ಶನ ನಿಮಗೆ ಯಾವ ರೀತಿಯ ಅನುಭವವನ್ನು ನೀಡಿತು? ಶ್ರೀನಿವಾಸನು ಒಬ್ಬನೇ ಆದರೂ, ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ದರ್ಶನವನ್ನು ನೀಡುತ್ತಾನೆ. ದಿವ್ಯವಾದ ಅನುಭವವನ್ನು ಅನುಗ್ರಹಿಸುತ್ತಾನೆ.

ಪ್ರತಿಯೊಬ್ಬರ ದರ್ಶನವೂ ಪ್ರತ್ಯೇಕವಾದುದು. ಪ್ರತಿಯೊಬ್ಬ ಭಕ್ತರ ಅನುಭವವೂ ಪ್ರತ್ಯೇಕವಾದುದು! ಇದು ಶ್ರೀವೇಂಕಟೇಶ್ವರ ಭಕ್ತರೆಲ್ಲರ ಅನುಭವಕ್ಕೆ ಬಂದಿ ರುವ ವಿಷಯವೇ ಆಗಿದೆ! ಆದ್ದರಿಂದ ಸಪ್ತಋುಷಿಗಳೇ! ಸ್ವಾಮಿಯ ದರ್ಶನದಿಂದ ನಿಮಗೆ ಉಂಟಾದ ವಿಶೇಷವಾದ, ಪ್ರತ್ಯೇಕವಾದ ಅನುಭವವನ್ನು ನೀವು ಒಬ್ಬೊಬ್ಬರು ಒಂದು ಶ್ಲೋಕದಿಂದ ತಿಳಿಸಿ, ಆದರೆ ನೀವೆಲ್ಲರೂ ಒಂದು ನಿಯಮವನ್ನು ಪಾಲಿಸಬೇಕು. ಅದೇನೆಂದರೆ ನಿಮ್ಮ ಹೆಸರಿನಲ್ಲಿ ಮೊದಲ ಅಕ್ಷರದೊಂದಿಗೆ ಮಾತ್ರಾ ಶ್ಲೋಕವನ್ನು ಹೇಳಬೇಕು. ಆ ಶ್ಲೋಕವು ಸಂಕ್ಷಿಪ್ತವಾಗಿರಬೇಕು ಎಂದು ಹೇಳಿ ಅಸೀನನಾದರು.ಆನಂದನಿಲಯದಲ್ಲಿ ಅಂದಿನ ಆಸ್ಥಾನದಲ್ಲಿ ಮುಕ್ಕೋಟಿ ದೇವತೆಗಳು ಉಪಸ್ಥಿತರಿದ್ದರು. ಅಷ್ಟೇ ಅಲ್ಲ ದೇವ, ದಾನವ, ಯಕ್ಷ, ಕಿನ್ನರ, ಕಿಂಪುರುಷರು, ಮಾನವರು ಹೀಗೇ ಅನೇಕರು ಸಪ್ತಋುಷಿಗಳು ಎಂತಾಹ ಶ್ಲೋಕವನ್ನು ಹಾಡುತ್ತಾರೋ ಎಂದು ತಮ್ಮ ಕಿವಿಗಳನ್ನು ನೆಟ್ಟಗೆ ಮಾಡಿಕೊಂಡು ಕುಳಿತರು.

### ಸಪ್ತಋುಷಿಗಳ ಕವಿತೆ

ಬ್ರಹ್ಮದೇವನ ಮಾತುಗಳನ್ನು ಕೇಳಿ, ಆತನ ಮಾತುಗಳನ್ನು ಶಿರಸಾವಹಿಸುತ್ತಾ ಸಪ್ತಗಿರೀಶನಿಗೆ ವಂದಿಸಿ ಆತನ ಅನುಮತಿಯನ್ನು ಬೇಡಿದರು. ಶ್ರೀನಿವಾಸನು ಲಕ್ಷ್ಮೀಸಮೇತನಾಗಿ ಮಂದಹಾಸ ಬೀರುತ್ತಾ ಸಪ್ತರ್ಷಿಗಳಿಗೆ ಕವಿತೆಯನ್ನು ಪ್ರಾರಂಭಿಸಿಬೇಕೆಂದು ತಿಳಿಸಿದರು.

ಮೊದಲು ಕಶ್ಯಪ ಮಹರ್ಷಿ ಪ್ರಾರಂಭಿಸಿದರು,

ಶ್ಲೋ॥ ಕಾದಿ ಹ್ರೀಮಂತ ವಿದ್ಯಾಯಾಃಪ್ರಾಪ್ಯೈವ ಪರದೇವತಾ
ಕಲೌ ಶ್ರೀವೇಂಕಟೇಶಾಖ್ಯಾ ತಾಮಽಹಂ ಶರಣಂ ಭಜೇ ॥

'ಕ' ಎಂಬ ಅಕ್ಷರದಿಂದ ಪ್ರಾರಂಭವಾಗಿ 'ಹ್ರೀಂ' ಎಂಬ ಅಕ್ಷರದಿಂದ ಮುಗಿಯುವ ಹದಿನಾರು ಅಕ್ಷರಗಳ ರಹಸ್ಯವಾದ ಮಂತ್ರವನ್ನು ಪ್ರಧಾನ ಪರದೇವತೆಯು ಇಂದಿನ ಈ ಕಲಿಯುಗದಲ್ಲಿ ಶ್ರೀವೇಂಕಟೇಶ್ವರನಾಗಿ ದರ್ಶನವನ್ನು ನೀಡುತ್ತಿದ್ದಾನೆ. ಆ ಪರದೇವತೆಯನ್ನು ಶ್ರೀವೇಂಕಟೇಶ್ವರನನ್ನಾಗಿ ದರ್ಶಿಸಿದ ಕಶ್ಯಪನಾದ ನಾನು ಆತನನ್ನು ಶರಣು ಬೇಡುತ್ತಿದ್ದೇನೆ.

ನಂತರ ಅತ್ರಿಮಹರ್ಷಿಯು ಕೈಗಳನ್ನು ಎತ್ತಿ ನಮಸ್ಕರಿಸುತ್ತಾ,

ಶ್ಲೋ॥ ಅಕಾರಾದಿ ಕ್ಷ ಕಾರಾಂತ, ವರ್ಣೈಯಃಪ್ರತಿಪಾದ್ಯತೇ
ಕಲೌ ಸ ವೇಂಕಟೇಶಾಖ್ಯಃ ಶರಣಂ ಮೇ ರಮಾಪತಿಃ

'ಅ' ಕಾರದಿಂದ ಪ್ರಾರಂಭವಾಗಿ 'ಕ್ಷ' ಕಾರದವರೆಗೂ ಇರುವ ಎಲ್ಲಾ ಅಕ್ಷರಗಳಿಂದಲೂ ಪ್ರತಿಪಾದ್ಯನಾಗಿರುವ ರಮಾಪತಿ ಈ ಕಲಿಯುಗದಲ್ಲಿ ಶ್ರೀ ವೇಂಕಟೇಶ್ವರನಾಗಿ ದರ್ಶನವನ್ನು ನೀಡುತ್ತಿದ್ದಾನೆ. ಅತ್ರಿ ಮಹರ್ಷಿಯಾದ ನಾನು ಆ ಸ್ವಾಮಿಯನ್ನು ಶರಣು ಬೇಡುತ್ತಿದ್ದೇನೆ.



ನಂತರ ಭರದ್ವಾಜ ಮಹರ್ಷಿಯ ಸರದಿ ಬಂತು,

ಶ್ಲೋ॥ಭಗವಾನ್ ಭಾರ್ಗವೀಕಾಂತೋ ಭಕ್ತಾಭೀಷಿತ್ಸ
ದಾಯಕಃ
ಭಕ್ತಸ್ಯ ವೇಂಕಟೇಶಾಖ್ಯೋ ಭರದ್ವಾಜಸ್ಯ ಮೇ ಗತಿಃ

ಭಾರ್ಗವೀ ಎಂದರೆ ಸಾಕ್ಷಾತ್ತು ಲಕ್ಷ್ಮಿದೇವಿಯ ಕಾಂತನಾದ ಶ್ರೀನಿವಾಸನು ಭಕ್ತರೆಲ್ಲರ ಕೋರಿಕೆಗಳನ್ನು ನೆರವೇರಿಸುತ್ತಿದ್ದಾನೆ. ಅಂತಹಾ ವೇಂಕಟೇಶ್ವರನನ್ನು ಭಾರದ್ವಾಜನಾದ ನಾನು ಶರಣು ಬೇಡುತ್ತಿದ್ದೇನೆ. ನನಗೆ ಅವನನ್ನು ಬಿಟ್ಟರೆ ಬೇರೆ ಗತಿಯಿಲ್ಲ.

ನಂತರ ವಿಶ್ವಾಮಿತ್ರ ಮಹರ್ಷಿಯು ಪ್ರಾರಂಭಿಸಿ,

ಶ್ಲೋ ॥ ವಿರಾಟ್ ವಿಷ್ಣುಃ ವಿಧಾತಾ ಚ ವಿಶ್ವಂ
ವಿಜ್ಞಾನ ವಿಗ್ರಹಃ
ವಿಶ್ವಾಮಿತ್ರ ಸ್ಯಶರಣಂ ವೇಂಕಟೇಶ ವಿಭುಸ್ಸದಾ

ವಿರಾಟ್ ಪುರುಷನಾದ ಶ್ರೀಮಹಾವಿಷ್ಣುವೇ ಇಂದಿನ ಶ್ರೀ ವೇಂಕಟೇಶ್ವರನಾಗಿದ್ದಾನೆ. ಆತನೇ ವಿಧಾತ! ವಿಶ್ವವೆಲ್ಲಾ ವಿಗ್ರಹನಾದ ಶ್ರೀವೇಂಕಟೇಶ್ವರನ ಸ್ವರೂಪದಿಂದ ತುಂಬಿದೆ. ಅಂತಹಾ ಜಗನ್ನಾಯಕನಾದ ಶ್ರೀವೆಂಕಟೇಶ್ವರನನ್ನು ಈ ವಿಶ್ವಾಮಿತ್ರನಾದ ನಾನು ಶರಣು ಬೇಡುತ್ತಿದ್ದೇನೆ.

ಈಗ ಗೌತಮ ಮಹರ್ಷಿಯ ಸರದಿ ಬಂತು,

ಶ್ಲೋ॥ಗೌಃ ಗೌರೀಶ ಪ್ರಿಯೋ ನಿತ್ಯಂ ಗೋವಿಂದೋ
ಗೋಪತಿ ರ್ವಿಭುಃ
ಶರಣಂ ಗೌತಮಸ್ಯಾಸ್ತು ವೇಂಕಟಾದ್ರಿ ಶಿರೋಮಣಿಃ

ಗೌರೀಪ್ರಿಯನಾದ ಪರಮೇಶ್ವರನು, ಆತನಿಗೆ ಅತ್ಯಂತ ಪ್ರಿಯನಾದ ಈ ಗೋವಿಂದನು, ಗೋಪಾಲಕನು, ಗೋಪಿಕೆಯರ ಪತಿಯೂ ಸಮಸ್ತ ಜೀವರಾಶಿಯ ವಿಭುವೂ ಆಗಿದ್ದಾನೆ! ಹಲವಾರು ವಿಧದಲ್ಲಿ ರಾರಾಜಿಸುತ್ತಾ ಈಗ ವೇಂಕಟಾದ್ರಿ ಶಿರೋಮಣಿಯಾಗಿ ದರ್ಶನವನ್ನು ನೀಡುತ್ತಿರುವ ಶ್ರೀನಿವಾಸುವಿಭುವೇ! ನಿನ್ನನ್ನು ಗೌತಮ ಮಹರ್ಷಿಯಾದ ನಾನು ಶರಣು ಬೇಡುತ್ತಿದ್ದೇನೆ.

ಗೌತಮ ಮಹರ್ಷಿಯ ನಂತರ ಜಮದಗ್ನಿಯು ಪ್ರಾರಂಭಿಸಿ

ಶ್ಲೋ॥ ಜಗತ್ಕರ್ತಾ ಜಗದ್ಭರ್ತಾ ಜಗದ್ಧರ್ತಾ ಜಗನ್ಮಯಃ
ಜಮದಗ್ನೇಃ ಪ್ರಪನ್ನಸ್ಯ ಜೀವೇಶೋ ವೇಂಕಟೇಶ್ವರಃ

ಸಮಸ್ತ ಲೋಕಗಳನ್ನು ನಡೆಸುತ್ತಿರುವ ಕರ್ತ! ಎಲ್ಲರನ್ನು, ಎಲ್ಲವನ್ನೂ ಧರಿಸಿದ ಧಾರಕನೂ ಆ ಸ್ವಾಮಿಯೇ! ಇಷ್ಟು ವಿಧದಲ್ಲಿ ಬೆಳಗುತ್ತಾ ವಿಶ್ವವ್ಯಾಪಕನಾಗಿರುವ ಜಗನ್ಮಯನೂ, ಸಕಲಜೀವೇಶನೂ ಆದ ವೇಂಕಟೇಶ್ವರನನ್ನು ಜಮದಗ್ನಿಯಾದ ನಾನು ಶರಣು ಬೇಡುತ್ತಿದ್ದಾನೆ.

ಕೊನೆಯಲ್ಲಿ ವಸಿಷ್ಠಮಹರ್ಷಿಯು ಎದ್ದು ನಿಂತು,

ಶ್ಲೋ॥ ವಸ್ತುವಿಜ್ಞಾನ ಮಾತ್ರಂ ಯ ನ್ನಿ
ರ್ವಿಶೇಷಂ ಶುಭಂಚ ಸತ್
ತತ್ ಬ್ರಹ್ಮೈವಾಹ ಮಸ್ಮೀತಿ ವೇಂಕಟೇಶಂ
ಭಜೇ ಸದಾ

ಆಶ್ರಿತರಾದ ಭಕ್ತರಿಗೆ ಸಂಪೂರ್ಣವಾದ ಸರ್ವ ಶುಭಗಳನ್ನು ಒದಗಿಸುವ ಸಾಕ್ಷಾತ್ತು ಪರಬ್ರಹ್ಮ ತತ್ವವಾಗಿ ಪ್ರಕಾಶಿಸುತ್ತಿರುವ ಶ್ರೀವೇಂಕಟೇಶ್ವರ ಸ್ವಾಮಿಯನ್ನು ವಸಿಷ್ಠನಾದ ನಾನು ನಿತ್ಯವೂ ಭಜಿಸುತ್ತಿದ್ದೇನೆ.

ಸಪ್ತಋಷಿಗಳ ಈ ಶ್ಲೋಕಗಳ ಶ್ರವಣದಿಂದ ಸಭೆಯಲ್ಲಿನ ಬ್ರಹ್ಮಾದಿ ದೇವತೆಗಳೆಲ್ಲರೂ ಪುಳಕಿತಗೊಂಡರು. ಈ ಶ್ಲೋಕಗಳನ್ನು ಎಲ್ಲರೂ ಮೆಚ್ಚಿ ಚಪ್ಪಾಳೆ ತಟ್ಟಿದ್ದರು.

ಕೂಡಲೇ ಶ್ರೀವೇಂಕಟೇಶ್ವರನು ಕಿರುಮಂದ ಹಾಸದಿಂದ ಭಕ್ತರೆಲ್ಲರನ್ನೂ ನೋಡುತ್ತಾ, ಸಪ್ತಋಷಿಗಳಿಗೆ ಈ ರೀತಿ ಹೇಳಿದ, ಮಹರ್ಷಿಗಳೇ ! ನೀವು ರಚಿಸಿದ ಈ ಶ್ಲೋಕಗಳು ಮಹಿಮಾನ್ವಿತ ವಾದುವು. ಈ ಶ್ಲೋಕಗಳನ್ನು ಯಾರು ಪಠಿಸುತ್ತಾರೋ, ಯಾರು ಪಾರಾಯಣ ಮಾಡಿದರೂ, ಸಕಲಭಯಗಳು ಕಳೆಯುತ್ತವೆ. ಎಲ್ಲಾ ವಿಧವಾದ ದೋಷಗಳು ನಾಶ ವಾಗುವುವು. ಅಷ್ಟೇ ಅಲ್ಲ ಸರ್ವವಿಧವಾದ ಶ್ರೇಯಸ್ಸು, ಸರ್ವ ಶುಭವುಂಟಾಗುವುವು.

ಸರ್ವವಿಧವಾದ ಸಂಪತ್ತುಗಳು ಸಿದ್ಧಿಸುವುವು ಎನ್ನುತ್ತಾ ರತ್ನ ಖಚಿತವಾದ ಶಾಲುಗಳಿಂದ ಸಪ್ತಋಷಿಗಳನ್ನು ಸತ್ಕರಿಸುತ್ತಾ ದಿವ್ಯಾಶೀರ್ವಾದವನ್ನು ಅನುಗ್ರಹಿಸಿದ.

ಹೀಗೆ ಸಪ್ತಋಷಿಗಳು ಸಪ್ತಗಿರೀಶನನ್ನು ಹಾಡಿ ಹೊಗಳಿದ ಈ ಸ್ತೋತ್ರಗಳು ಶ್ರೀವೇಂಕಟೇಶ್ವರನಿಗೆ ಅತ್ಯಂತ ಪ್ರೀತಿಪಾತ್ರವಾಗಿವೆ. ಅಷ್ಟೇ ಅಲ್ಲ ಭಕ್ತರಿಗೆ ಕಲಿಹರಣ ಕಾರಕವಾಗಿ ಎಲ್ಲಾ ರೀತಿಯಲ್ಲೂ ಮಂಗಳಕರವಾಗಿವೆ.

ಸಪ್ತಋಷಿಗಳು ಆಶುವಾಗಿ ಸ್ತುತಿಸಿದ ಈ ಸ್ತೋತ್ರಗಳನ್ನು ಶ್ರವಣ ಮಾಡಿದರೂ, ಪಠಿಣೆ ಮಾಡಿದರೂ ಎಲ್ಲಾ ರೀತಿಯ ಭಯವೂ ಪರಿಹಾರವಾಗುತ್ತದೆ. ಎಲ್ಲೆಡೇ ವಿಜಯವೂ ಸಿದ್ಧಿಸುತ್ತದೆ ಎಂದು ಬ್ರಹ್ಮಾದಿ ದೇವತೆಗಳು ತಿಳಿಸಿದರು.

ಶ್ಲೋ ॥ ಸಪ್ತರ್ಷಿ ರಚಿತಂ ಸ್ತೋತ್ರಂ
ಸರ್ವದಾ ಯಃ ಪಠೇನ್ನರಃ
ಸೋಽಭಯಂ ಪ್ರಾಪ್ನುಯಾತ್ ಸತ್ಯಂ
ಸರ್ವತ್ರಾ ವಿಜಯೀ ಭವೇತ್॥

ಹೀಗೆ ಸಪ್ತಋಷಿಗಳು ಕಲಿಯುಗ ವೈಕುಂಠದಲ್ಲಿ ತಮ್ಮ ಯಾತ್ರೆಯನ್ನು ಪೂರೈಸಿಕೊಂಡು ಈ ದಿವ್ಯಧಾಮದಲ್ಲಿ ತಾವು ಅನುಭವಿಸಿದ, ತಾವು ಪಡೆದ ಆಧ್ಯಾತ್ಮಿಕಾನಂದವನ್ನು ಮೆಲುಕು ಹಾಕುತ್ತಾ ನಕ್ಷತ್ರಮಂಡಲವನ್ನು ತಲುಪಿದರು.

ಹೀಗೆ ಸಪ್ತಋಷಿಗಳು ರಚಿಸಿದ ಸಪ್ತಗಿರೀಶನ ಸ್ತೋತ್ರಗಳು ಅಂದಿನಿಂದ ಇಂದಿನವರೆಗೂ ಅತ್ತ ವೇಂಕಟೇಶ್ವರನಿಗೆ,ಇತ್ತ ವೇಂಕಟೇಶ್ವರನ ಭಕ್ತರಿಗೆ ಪ್ರೀತಿ ಪಾತ್ರವಾಗಿ ವರಪ್ರದಾಯಕವಾಗಿವೆ.

ಶ್ಲೋ॥ ನಮಃ ಶ್ರೀವೇಂಕಟೇಶಾಯ।
ಶುದ್ಧಜ್ಞಾನ ಸ್ವರೂಪಿಣೇ
ವಾಸುದೇವಾಯ ಶಾಂತಾಯ।
ಶ್ರೀನಿವಾಸಾಯಮಂಗಳಮ್

- ತೆಲುಗು ಮೂಲ. ಜೆ. ಬಾಲಸುಬ್ರಹ್ಮಣ್ಯಂ
ಅನುವಾದ : ಶ್ರೀಮತಿ. ಬಿ. ಪದ್ಮಜ



# ನವರಾತ್ರಿಯ ದುರ್ಗಾಷ್ಟಮಿ

**ಮನೋಹರ ಜೋಶಿ**
**98869 19689**

ಅಶ್ವೀನಮಾಸದ ಶರದ್ ಋತುವಿನ ಒಂಭತ್ತು ರಾತ್ರಿಗಳಲ್ಲಿ ದುರ್ಗೆಯ ವಿವಿಧ ರೂಪಗಳು ಆರಾಧಿಸುವುದೇ ನವರಾತ್ರಿ ಹಬ್ಬದ ವಿಶೇಷ. ಅದಕ್ಕೆಂದೆ ಇದು ಎಲ್ಲರಿಗೂ ದೊಡ್ಡ ಹಬ್ಬ. ಸಕಲರಿಗೂ ಸುಖ, ಶಾಂತಿ ನೆಮ್ಮದಿ ತರುವ ನವದುರ್ಗೆಯರ ಆರಾಧಿಸುವ ಹಬ್ಬ. ಎಲ್ಲ ಶುಭ ಕಾರ್ಯಗಳು ಪ್ರಾರಂಭಿಸಲು ಮುನ್ನುಡಿ ಬರೆಯುವ ಶುಭ ನವರಾತ್ರಿ .

“ತ್ರಿಕಾಲಂ ಪೂಜಯೇತ್ ದೇವಿಂ” ಎನ್ನುವ ಸೂಕ್ತಿಯಂತೆ ದುರ್ಗಾದೇವಿಯನ್ನು ತ್ರಿಕಾಲದಲ್ಲಿಯೂ ಪೂಜಿಸಬೇಕೆಂದು ಪುರಾಣಗಳು ಹೇಳುತ್ತಿವೆ. ಬ್ರಹ್ಮ ದೇವರು ಶ್ರೀಲಕ್ಷ್ಮೀ ರೂಪವಾದ ದುರ್ಗೆಯನ್ನು ವಿಶೇಷ ವಾಗಿ ಆರಾಧಿಸಿದರು. ನವರಾತ್ರಿಯ ಎಲ್ಲಾ ದಿನಗಳು ಕುಲದೇವತೆ ಜೊತೆಗೆ ದುರ್ಗಾದೇವಿಯರನ್ನು ವಿಶೇಷವಾಗಿ ಆರಾಧಿಸಲು ಶಾಸ್ತ್ರಗಳಲ್ಲಿ ನಿಯಮಿಸಲಾಗಿದೆ. ಅದರಲ್ಲೂ ನವರಾತ್ರಿಯ ದುರ್ಗಾ ಅಷ್ಟಮೀ ಎಂದೇ ಕರೆಯುವ ಅಷ್ಟಮೀ ತಿಥಿ ದುರ್ಗಾ ಆರಾಧನೆಗೆ ಪ್ರಶಸ್ತವಾದ ದಿನ. ದುರ್ಜನರನ್ನು ಶಿಕ್ಷಿಸಲು ಸಜ್ಜನರ ಉದ್ಧಾರಕ್ಕಾಗಿ ಅವತರಿಸಿದ ರೂಪವೇ ದುರ್ಗಾ. ದುರ್ಗಾ ರೂಪವು ಸಾಕ್ಷಾತ್ ವಿಷ್ಣುವಿನ ವಿಶೇಷ ಸನ್ನಿಧಾನದಿಂದ ಕೂಡಿದೆ. ಹೀಗಾಗಿ ದುರ್ಗಾ ಅಷ್ಟಮೀಯಂದು ಶ್ರೀದುರ್ಗೆಯ ಪೂಜೆಯು ಪ್ರತಿಯೊಬ್ಬರು ಆಚರಿಸ ಬೇಕೆನ್ನುವುದು ಇದರ ಒಟ್ಟು ತಾತ್ಪರ್ಯ.

ನವರಾತ್ರಿಯ ಎಂಟನೇ ದಿನವೇ ದುರ್ಗಾ ಅಷ್ಟಮೀ. ನವರಾತ್ರಿಯಲ್ಲಿ ದುರ್ಗಾಅಷ್ಟಮೀಗೆ ಹೆಚ್ಚಿನ ಮಹತ್ವವಿದೆ. ಭಾರತ ಎಲ್ಲ ಭಾಗಗಳಲ್ಲಿ ಭಕ್ತಿ ಶ್ರದ್ಧೆಗಳಿಂದ ಆಚರಿಸುವ ದುರ್ಗಾ ಅಷ್ಟಮೀಯು ಪಶ್ಚಿಮ ಬಂಗಾಲದಲ್ಲಿ ಇದೊಂದು ದೊಡ್ಡ ಸಂಭ್ರಮದ ಹಬ್ಬ ವಾಗಿ ಆಚರಿಸಲಾಗುತ್ತದೆ. ಗಣೇಶನಿಗೆ ನಿರ್ಮಿಸುವ ಪೆಂಡಾಲಗಳಂತಹ ನವರಾತ್ರಿಯಲ್ಲೂ ಕೂಡ ಅದ್ದೂರಿಯಾಗಿ ದೊಡ್ಡ ದೊಡ್ಡ ಪೆಂಡಾಲಗಳು ಓಣಿಗಳಲ್ಲಿ ನಿರ್ಮಿಸಿ ಎತ್ತರದ ದುರ್ಗಾ ವಿಗ್ರಹಗಳು ಪ್ರತಿಷ್ಠಾಪಿಸಿದವರು. ಪ್ರತಿ ಪ್ರದೇಶಗಳಲ್ಲೂ ನವರಾತ್ರಿಯ ಈ ವೈಭವವನ್ನು ನೋಡುವುದೇ ಒಂದು ಆನಂದ. ಪ್ರತಿಷ್ಠಾಪಿಸಿದ ದುರ್ಗೆಗೆ ಅದ್ದೂರಿ ಪೂಜೆ ನೆರವೇರಿಸಲಾಗುತ್ತದೆ. ಸಾಯಂಕಾಲದಲ್ಲಿ ಭಕ್ತಿ ಸಂಗೀತ ಸಾಂಸ್ಕೃತಿಕ ಕಾರ್ಯಕ್ರಮಗಳು ಒಂಬತ್ತು ದಿನಗಳವರೆಗೆ ಹಮ್ಮಿಕೊಳ್ಳಲಾಗುತ್ತದೆ.

## ವ್ಯಾಸ ರಾಜರು

“ಪ್ರಾತಃಸ್ಮರಾಮಿ ರಮಯಾ ಸಹ ವೆಂಕಟೇಶಂ, ಮಂದಸ್ಮಿತ ಮುಖ ಸರೋರುಹ ಕಾಂತಿ ರಮ್ಯಂ, ಮಾಣಿಕ್ಯ ಕಾಂತಿ ವಿಲಸನ್ಮಕುಟೋರ್ಧ್ವಪುಂಡ್ರಂ,ಪದ್ಮಾಕ್ಷಲಕ್ಷ ಮಣಿ ಕುಂಡಲ ಮಂಡಿತಾಂಗಂ”ಎಂದು ಆರಂಭವಾಗುವ ಶ್ಲೋಕ ತ್ರಯದಲ್ಲಿ ಶ್ರೀನಿವಾಸ ನನ್ನು ಈ ಪರಿಯಾಗಿ ವರ್ಣಿಸುತ್ತಾರೆ. ಮಂದಹಾಸದಿಂದ ಕೂಡಿದ ಕಮಲದಂತಹಾ ಮುಖಕಾಂತಿಯಿಂದೊಪ್ಪುವ, ಮಾಣಿಕ್ಯಮಯ ಕಿರೀಟ ಊರ್ಧ್ವಪುಂಡ್ರಗಳಿಂದ ವಿಶಿಷ್ಟನಾದ ಕಮಲಾಕ್ಷ ಮಣಿಗಳಿಂದಲೂ, ರತ್ನಖಚಿತ ಕುಂಡಲಗಳಿಂದಲೂ, ಅಲಂಕೃತನಾದ ಶರೀರವುಳ್ಳ ಲಕ್ಷ್ಮೀ ಸಮೇತನಾದ ಶ್ರೀನಿವಾಸನನ್ನು ಪ್ರಾತಃಕಾಲದಲ್ಲಿ ಸ್ಮರಿಸುತ್ತೇವೆ. ಶೋಭಿಸುವ ಶಂಖ,ಚಕ್ರಗಳನ್ನು ಕೈಯಲ್ಲಿ ಧರಿಸಿರುವ, ಭಕ್ತರಿಗೆ ಅಭಯಪ್ರದನೆನಿಸಿ, ಕಟಿ ಸ್ಥಳದಲ್ಲಿ ಕೈಯಿಟ್ಟು ನಿಂತಿರುವ, ಶ್ರೀವತ್ಸ, ಕೌಸ್ತುಭ ಮಣಿ, ಮತ್ತು ರತ್ನ ಖಚಿತ ಆಭರಣಗಳಿಂದ ಮಂಡಿತನಾದ, ಪೀತಾಂಬರವನ್ನುಟ್ಟು, ಮನ್ಮಥ ನಿಗಿಂತಲೂ, ಹೆಚ್ಚು ಸೌಂದರ್ಯಶಾಲಿಯಾದ ಶ್ರೀನಿವಾಸನನ್ನು ಪ್ರಾತಃಕಾಲದಲ್ಲಿ ಭಜಿಸುವೆವು. ಮಣಿಗಣ ಖಚಿತನಾದ, ನೂಪುರಗಳಿಂದ ಶೋಭಿಸುವ, ಪೂರ್ಣಾನಂದ ಸ್ವರೂಪನಾದ, ಭಕ್ತರಿಗೆ ಇದೇ ವೈಕುಂಠವೆಂದು ತನ್ನ ಕರಕಮಲಗಳಿಂದ ಸೂಚಿ ಸುವ, ಶ್ರೀನಿವಾಸನ ಶ್ರೀಚರಣಗಳಿಗೆ ಪ್ರಾತಃಕಾಲದಲ್ಲಿ ವಂದಿಸುವೆವೆನ್ನುವರು.



# ದುರ್ಗಾ ಪೂಜೆ:



ಅಧರ್ಮವು ಹೋಗಲಾಡಿಸಿ, ಸುಖ,ಶಾಂತಿ,ನೆಮ್ಮದಿ ಪುನರುತ್ಥಾನವಾಗಬೇಕಾದರೆ ಇಂದಿನ ದಿನಗಳಲ್ಲಿ ದುರ್ಗಾ ಆರಾಧನೆಯು ಮಾಡಲೇಬೇಕಾಗಿದೆ. ಶರದೃತುವಿನ ಅಶ್ವೀಜ ಮಾಸದ ಅಷ್ಟಮೀ ದಿನವೂ ದುರ್ಗೆಯನ್ನು ಆರಾಧಿಸುವ ಪವಿತ್ರ ದಿನವಾಗಿದೆ. ಇಂದು ಬ್ರಾಹ್ಮಿ ಮುಹೂರ್ತದಲ್ಲಿಯೇ ಎದ್ದು ಅಭ್ಯಂಜನ ಮಾಡುವರು. ಮನೆಯ ಮಂದಿ ಎಲ್ಲ ಸೇರಿ ಸಂಭ್ರಮದೊಂದಿಗೆ ಮಂಟಪವು ಸ್ಥಾಪಿಸುವರು. ಮಂಟಪದ ಮಧ್ಯದಲ್ಲಿ ಕಲಶ ಸ್ಥಾಪಿಸಿ ಸುವರ್ಣ ರಜತಗಳ ಆಭರಣದಿಂದ ಅಲಂಕರಿಸುವರು ಜೊತೆಗೆ ಅರಿಸಿನ, ಕುಂಕುಮ, ಕೇದಿಗೆ, ಧವಳ ಪರಿಮಳದಿಂದ ಕೂಡಿದ ಹೂವುಗಳಿಂದ ಅರ್ಚಿಸುವರು. ಈ ದಿನ ತುಂಬೆ ಹೂವಿನಿಂದ ದುರ್ಗೆಯನ್ನು ಅರ್ಚನೆ ಮಾಡುವುದು ಶ್ರೇಯಸ್ಕರವಾಗಿದೆ ಎನ್ನುವ ನಂಬಿಕೆ ಇದೆ. ಮಂಟಪದ ಎರಡು ಬದಿಗಳಲ್ಲಿ ತುಪ್ಪದ ನಂದಾದೀವಿಗೆಗಳು ಬೆಳಗುವರು ಪುರೋಹಿತರ ಸಮ್ಮುಖದಲ್ಲಿ ದುರ್ಗಾಹೋಮ ನೆರವೇರಿಸುವರು. ಅನೇಕ ವಿಧವಾದ ಚಟ್ನಿ, ಶಾಖ, ಪಲ್ಯಗಳು, ಕೋಸಂಬರಿ ಚಕ್ಕುಲಿ ಕರಿಗಡುಬು, ಹೊಳಿಗೆ, ಹಪ್ಪಳ ಸಂಡಿಗೆಗಳ, ಪಾಯಸ ಪರಮಾನ್ನಗಳು ತಯಾರಿಸಿ ಪಕ್ವಾನ್ನದ ಅಡುಗೆ ಮಾಡಿ ದುರ್ಗೆಗೆ ನಿವೇದಿಸುತ್ತಾರೆ. ಶ್ರೀದುರ್ಗೆ ಕುಮಾರಿಕಾ ದೇವಿ, ಅದಕ್ಕೆಂದೇ ನವರಾತ್ರಿಯ ಪವಿತ್ರ ಕಾಲದಲ್ಲಿ ಕುಮಾರಿಕ ಪೂಜೆಗೆ ಶಾಸ್ತ್ರಗಳು ಮಹತ್ವ ಕೊಟ್ಟಿವೆ.

**ದುರ್ಗೆಯ ವರ್ಣನೆ:**

ಅಧರ್ಮವನ್ನು ಹೋಗಲಾಡಿಸಲು, ಧರ್ಮವನ್ನು ಸ್ಥಾಪಿಸಲು ದುರ್ಗೆಯ ಅವತಾರವಾಯಿತು. ದುರ್ಗಾದೇವಿಯ ಕುರಿತು ಪುರಾಣ ಇತಿಹಾಸಗಳಲ್ಲಿ ಇವಳ ರೂಪವನ್ನು ಈ ರೀತಿಯಾಗಿ ಚಿಂತಿಸಿದ್ದಾರೆ. ದುರ್ಗೆಯು ಮೂರೂ ಕಣ್ಣುಗಳು ಉಳ್ಳವಳಾಗಿದ್ದು ಮೂರನೇ ಕಣ್ಣು ಭಯಂಕರವಾದ ಬೆಂಕಿಯ ಜ್ವಾಲೆಯ ಉಂಡಿಗಳು ಹೊರಸೂಸುತ್ತಿವೆ ಎಂತಲೂ ಮಹಾತ್ಮರು ಮಾತ್ರ ಈ ಮೂರನೇ ಕಣ್ಣಿನ ದುರ್ಗೆಯನ್ನು ಆರಾಧಿಸುತ್ತಾರೆ. ಸಾಮಾನ್ಯರಿಗೆ ಎರುಡು ಕಣ್ಣುಗಳು ಹೊಂದಿರುವ ದುರ್ಗೆಯು ಕಾಣುವಳು. ಉಗ್ರವಾದ ಮುಖದೊಂದಿಗೆ ತನ್ನ ಬೇಟೆಯನ್ನು ಆಕ್ರಮಣ ಮಾಡುವ ರೀತಿಯಿಂದ ಅತಿ ಸಿಟ್ಟಿನಿಂದ ಕೂಡಿದ ಸಿಂಹದ ಮೇಲೆ ಕುಳಿತು ಸಿಂಹವಾಹಿನಿಯಾಗಿದ್ದಾಳೆ. ಚಂದ್ರನನ್ನು ಮುಡಿಯಲ್ಲಿ ಧಾರಣೆ ಮಾಡಿದ್ದಾಳೆ. ಚತುರ್ಭುಜಗಳಿಂದ ಯುಕ್ತವಾಗಿ ಶಂಖ, ಚಕ್ರ ಬಾಣ, ಧನುಸ್ಸು ನಾಲ್ಕು ಕೈಗಳಲ್ಲಿ ಧರಿಸಿರುವಳು. ಮೂರು ಕಣ್ಣುಗಳಿಂದ ಪ್ರಜ್ವಲವಾದ ಬೆಳಕು ಹೊರ ಸೂಸುತ್ತಿರುವಳು. ಸುವರ್ಣಮಯವಾದ ವಂಕೀ,ತೋಳ್ಬಂಧಿಗಳು ಧರಿಸಿದ್ದಾಳೆ. ಶುಭ್ರವಾದ ಮುತ್ತಿನಹಾರ, ಸುವರ್ಣಮಯ ಆಭರಣಗಳು ಕಂಠದಲ್ಲಿ ಧರಿಸಿ ದುರ್ಜನರನ್ನು ಸಂಹರಿಸಲು ಸಿದ್ಧವಾದಂತೆ ಕಾಣುವಳು,ಎಂದು ದುರ್ಗಾ ಮಹಿಮೆಯನ್ನು ಹೇಳುತ್ತಿವೆ. ವೇದಗಳಲ್ಲಿ ದೇವಿ ಮಹಾತ್ಮೆ ದುರ್ಗಾಸಪ್ತಶತೀಗಳಲ್ಲಿ ದುರ್ಗೆಯನ್ನು ಅವಳ ಅಪಾರ ಮಹಿಮೆ ಕರುಣೆಗಳು ವಿಸ್ತಾರವಾಗಿ ತಿಳಿಸುತ್ತಿವೆ.

**ಕಾಳಿರೂಪದ ದುರ್ಗೆ:**

ಅಶ್ವಿಜ ಮಾಸದ ಅಷ್ಟಮೀ ದಿನದಂದು ಅರ್ಧರಾತ್ರಿಯಲ್ಲಿ ದುರ್ಗೆಯು ಭದ್ರಕಾಳಿ ರೂಪ ತಾಳಿದಳು. ಋಷಿ- ಮುನಿಗಳಿಗೆ, ದೇವತೆಗಳಿಗೆ ಪೀಡಿಸುತ್ತಿದ್ದ ಶಂಭು-ನಿಶುಂಭರನ್ನು ಸಂಹರಿಸಲು ಹೊರಟ ದುರ್ಗೆಯನ್ನು ರಕ್ತಬೀಜಾಸುರನು ಅಡ್ಡಿ ಪಡಿಸುತ್ತಾನೆ. ರಕ್ತ ಬೀಜಾಸುರನನ್ನು ಸಂಹರಿಸಲು ದುರ್ಗೆಯ ಅಂದು ಕಾಳಿರೂಪಧಾರಣೆ ಮಾಡಿದಳು. ರಕ್ತಬೀಜಾಸುರನ ಹನಿ ರಕ್ತವು ಭೂಮಿಗೆ ಬಿಳದಂತೆ ಬೃಹದಾಕಾರದ ನಾಲಿಗೆ ಹೊರ ಚಾಚಿ ಅಸುರನನ್ನು ನುಂಗಿ ಸಂಹಾರ ಮಾಡಿದಳು ಅಂದು ಲೋಕಕ್ಕೆ ಆಗುವ ಕಂಟಕ ತಡೆದಳು. ಅಂದು ಸಂಧ್ಯಾಕಾಲದಲ್ಲಿ ದುರ್ಗಾಸಪ್ತಶತೀ, ದೇವಿ ಮಹಾತ್ಮ ಗ್ರಂಥಗಳ ಪಾರಾಯಣ ದುರ್ಗಾ ಸುಳಾದಿ ಸ್ತೋತ್ರಗಳು ಪಠಿಸಿ ದುರ್ಗೆಯ ಅನುಗ್ರಹ ಪಡೆದುಕೊಳ್ಳುತ್ತಾರೆ. ದುರ್ಗಾಷ್ಟಮಿಯು ದೇಶದ ತುಂಬೆಲ್ಲ ಶ್ರದ್ಧಾ, ಭಕ್ತಿಗಳಿಂದ ಆಚರಿಸಲಾಗುತ್ತಿದೆ.

### ಶ್ರೀಗೋವಿಂದರಾಜಸ್ವಾಮಿ ದೇವಾಲಯ ,ತಿರುಪತಿ


ತಿರುಪತಿಯ ರೈಲ್ವೇ ಸ್ಟೇಷನ್ನಿನ ಸಮೀಪದಲ್ಲಿ ಶ್ರೀಗೋವಿಂದರಾಜಸ್ವಾಮಿ ಆಲಯವಿದೆ. ವಿಷ್ಣುವನ್ನು ದ್ವೇಷಿಸುತ್ತಾ,ಶಿವಭಕ್ತಿಯನ್ನು ಹೊಂದಿರುವ ಚೋಳ ರಾಜನು ಕ್ರಿಮಿಕಂಠಕನಾಗಿದ್ದ. ತನ್ನ ದೇಶದಲ್ಲಿ ಇರುವ ವಿಷ್ಣು ವಿನ ಆಲಯಗಳನ್ನು ಧ್ವಂಸ ಮಾಡುತ್ತಿದ್ದ ಸಮಯದಲ್ಲಿ ಒಮ್ಮೆ ಚಿತ್ರಕೂಟ (ಚಿದಂಬರಂ) ದಿವ್ಯದೇಶದಲ್ಲಿ ಶ್ರೀಗೋವಿಂದರಾಜ ಸ್ವಾಮಿಯ ಶಯನಮೂರ್ತಿಯಾದ ಮೂಲಮೂರ್ತಿಯನ್ನು ಶ್ರೀದೇವಿಭೂದೇವಿಯರೊಂದಿಗೆ ಸಹ ಸಮುದ್ರದಲ್ಲಿ ವಿಸರ್ಜನೆ ಮಾಡಿದ,ಉತ್ಸವ ಮೂರ್ತಿ ಯಾದ ಉಭಯ ನಾಚ್ಚಿಯಾರ್‌ರೊಂದಿಗೆ ಕೂಡಿರುವ ದೇವದೇವನನ್ನು ಕೆಲವರು ಶ್ರೀವೈಷ್ಣವರು ಆ ರಾಜನಿಗೆ ತಿಳಿ ಯದಂತೆ ಮೆರವಣಿಗೆಯಲ್ಲಿ ತಂದು ತಿರುಪತಿಯಲ್ಲಿ ಆರಾ ಧಿಸುತ್ತಿದ್ದರು. ಈ ವಿಷಯವನ್ನು ತಿಳಿದುಕೊಂಡ ಭಗವದ್ರಾ ಮಾನುಜಾಚಾರ್ಯರು ತಿರುಮಲೆ, ತಿರುಪತಿಯ ಪ್ರಾಂತಕ್ಕೆ ಆ ಕಾಲದಲ್ಲಿ ರಾಜನಾಗಿದ್ದ ತಮ್ಮ ಶಿಷ್ಯನಾಗಿದ್ದ ಯಾದವ ರಾಜನ ಸಹಕಾರದೊಂದಿಗೆ, ಹೊಸ ಮೂಲ ಮೂರ್ತಿಗಳನ್ನು ನಿರ್ಮಾಣ ಮಾಡಿಸಿ, ಅವರೊಂದಿಗೆ ಚಿತ್ರಕೂಟದಿಂದ ತಂದಿದ್ದ ಉತ್ಸವ ಮೂರ್ತಿಗಳನ್ನು ಸೇರಿಸಿ, ತಿರುಪತಿಯಲ್ಲಿ ಒಂದು ಸನ್ನಿಧಿಯಲ್ಲಿ ತಿರುಮಲೆಯಲ್ಲಿ ಇರುವಂತೆ ವೈಖಾನಸಾಗಮೋಕ್ತ ಪ್ರಕಾರವಾಗಿ ಪ್ರತಿಷ್ಠಾಪನೆ ಮಾಡಿ ದರು. ಈ ಆಲಯವೇ ಈಗಿರುವ ಶ್ರೀಗೋವಿಂದ ರಾಜಸ್ವಾಮಿಯ ಆಲಯ.

ಶ್ರೀ ಗೋವಿಂದರಾಜಸ್ವಾಮಿ ದೇವಾಲಯದ ಪ್ರಾಕಾರದಲ್ಲಿ ಶ್ರೀಪಾರ್ಥಸಾರಥಿ ಸ್ವಾಮಿಯ ಆಲಯ, ಶ್ರೀಕಲ್ಯಾಣ ಶ್ರೀವೇಂಕಟೇಶ್ವರಸ್ವಾಮಿಯ ಆಲಯ, ಶ್ರೀಆಂಡಾಳ್ ಅಮ್ಮನವರು, ಶ್ರೀ ಪುಂಡರೀಕವಲ್ಲಿ (ಮಹಾಲಕ್ಷ್ಮಿ) ಅಮ್ಮನವರು, ಸುದರ್ಶನ ಚಕ್ರತ್ತಾಳ್ವಾರ್ ಸನ್ನಿಧಿ, ಭಗವದ್ರಾಮಾನುಜರ ಸನ್ನಿಧಿ,ತಿರುಮಲನಂಬಿ,ಅನಂತಾಳ್ವಾರರು ಇನ್ನೂ ಮುಂತಾದ ಆಳ್ವಾರರ ಸನ್ನಿಧಿಯಂತಹಾ ಉಪ ಆಲಯಗಳು ಇಲ್ಲಿ ನೆಲೆಸಿವೆ. ಆದ್ದರಿಂದ ಆಲಯಗಳ ಸಮುದಾಯವೆಂದು ಶ್ರೀಗೋವಿಂದರಾಜಸ್ವಾಮಿಯ ದೇವಾಲಯ ಪ್ರಸಿದ್ಧಿ ಯಾಗಿದೆ.

### ಶ್ರೀ ಪದ್ಮಾವತೀ ಸಮೇತ ಶ್ರೀಕಲ್ಯಾಣವೇಂಕಟೇಶ್ವರ ದೇವಾಲಯ , ನಾರಾಯಣವರಂ (ವನಂ)

ಶ್ರೀ ಆಕಾಶಮಹಾರಾಜನು ನಾರಾಯಣವರಂ ಅನ್ನು ಕೇಂದ್ರವಾಗಿರಿಸಿಕೊಂಡು ರಾಜ್ಯ ಭಾರವನ್ನು ಮಾಡುತ್ತಿದ್ದನಂತೆ. ಆತ ಪುತ್ರಕಾಮೇಷ್ಠಿಯಾಗವನ್ನು ಮಾಡುವ ಸಂದ ರ್ಭದಲ್ಲಿ ಯಾಗ ಸ್ಥಳವನ್ನು ಸ್ವರ್ಣಮಯವಾದ ನೇಗಿಲಿನಿಂದ ನೆಲವನ್ನು ಅಗಿಯುತ್ತಿದ್ದಾಗ ಒಂದು ಪೆಟ್ಟಿಗೆಯಲ್ಲಿ ಪದ್ಮದ ಮೇಲೆ ಮಲಗಿದ್ದ ಸುಂದರವಾದ ಒಂದು ಹೆಣ್ಣು ಮಗುವು ದೊರೆಯಿತು. ಆ ಮಗುವಿಗೆ ಪದ್ಮಾವತಿ ಎಂಬ ಹೆಸರನ್ನು ಇರಿಸಿದರು. ಶ್ರೀಪದ್ಮಾವತಿ ದೇವಿ ಒಂದು ದಿನ ತನ್ನ ಸಖಿಯರೊಂದಿಗೆ ವನವಿಹಾರ ಮಾಡುತ್ತಿದ್ದಾಗ ಶ್ರೀನಿವಾಸನು ಬೇಟೆಗಾಗಿ ಬಂದು ಆಕೆಯನ್ನು ನೋಡಿ ಆಕೆಯ ಅಂದಕ್ಕೆ ಮನಸೋತು ಆಕಾಶರಾಜನ ಅನುಮತಿಯೊಂದಿಗೆ ಸಕಲ ದೇವತೆಗಳ ಸಮಕ್ಷಮದಲ್ಲಿ ವಿವಾಹವನ್ನು ಮಾಡಿಕೊಂಡ. ಅವರ ಜ್ಞಾಪಕಾರ್ಥವಾಗಿ ಶ್ರೀ ಆಕಾಶ ಮಹಾರಾಜ ನಾರಾಯಣವರದಲ್ಲಿ ದೇವಾಲಯ ವನ್ನು ನಿರ್ಮಾಣ ಮಾಡಿದ.

ಶ್ರೀಕಲ್ಯಾಣವೇಂಕಟೇಶ್ವರ ಸ್ವಾಮಿಯ ವಕ್ಷಃಸ್ಥಳದಲ್ಲಿ ಲಕ್ಷ್ಮೀ ದೇವಿ ಇದ್ದಾಳೆ. ಇಲ್ಲೇ ಶ್ರೀಪದ್ಮಾವತೀ ಅಮ್ಮನವರು, ಶ್ರೀಗೋದಾದೇವಿ (ಆಂಡಾಳ್)ಅಮ್ಮನವರ ದೇವಾಲಯ



# ತಿ.ತಿ.ದೇ., ಅನುಬಂಧ ಆಲಯಗಳು

– ಎಸ್.ವಾದಿರಾಜ



ಗಳಿವೆ. ಈ ಆಲಯದ ಪ್ರಾಂಗಣದಲ್ಲಿ ಶ್ರೀಕೋದಂಡರಾಮಸ್ವಾಮಿ, ಶ್ರೀರಂಗನಾಥ ಸ್ವಾಮಿ, ಶ್ರೀರಾಜಮನ್ನಾರ್ ಸ್ವಾಮಿಯ ಉಪಾಲಯಗಳನ್ನೂ ನೋಡಬಹುದಾಗಿದೆ.

ತಿರುಪತಿಯಿಂದ (ಪುತ್ತೂರಿನ ಮೂಲಕ) 39 ಕಿ.ಮೀ. ದೂರದಲ್ಲಿ ಈ ದೇವಾಲಯವಿದೆ. ತಿರುಪತಿಯಿಂದ ಸಾರಿಗೆ ಸೌಕರ್ಯವಿದೆ.

### ಶ್ರೀವಾರಿ ಪಾದಾಲಮಂಟಪ, ಅಲಿಪಿರಿ

ವೇದಗಳೇ ಶಿಲೆಗಳಾಗಿ ತಿರುಮಲೆಯ ಬೆಟ್ಟಕ್ಕೆ ನಡೆದುಹೋಗುವ ದಾರಿಯಲ್ಲಿನ ಪರ್ವತದ ಮೂಲವೇ ಈ ಅಲಿಪಿರಿ, ಅದು ಸಪ್ತಗಿರಿಗಳ ಪಾದಪೀಠವಾಗಿದೆ. ಏಳು ಬೆಟ್ಟಗಳನ್ನು ಹತ್ತುವುದಕ್ಕೆ ಹೋಗುವ ಯಾತ್ರಿಕರು ತಮ್ಮ ಮೊದಲ ಪಾದವನ್ನು ಈ ಮಂಟಪದಲ್ಲೇ ಇರಿಸುತ್ತಾರೆ. ಶ್ರೀವೇಂಕಟೇಶ್ವರನು ತನ್ನ ಬೆಟ್ಟವನ್ನು ತಾನೇ ಹತ್ತುವುದಕ್ಕೆ ಎನ್ನುವಂತೆ ತನ್ನ ದಿವ್ಯ ಪಾದಗಳ ಚಿಹ್ನೆಗಳನ್ನು ಇಲ್ಲಿ ಮುದ್ರಿಸಿರುವುದು ವಿಶೇಷವಾಗಿದೆ. ಈ ಪ್ರದೇಶ ಪಾದಗಳ ಮಂಟಪವೆಂದು ಚರಿತ್ರೆಯಲ್ಲಿ ಹೆಸರು ವಾಸಿಯಾಗಿದೆ.


ತಿರುಮಲೆಯ ಗಿರಿಗಳಿಗೆ ಕಾಲ್ನಡಿಗೆಯಲ್ಲಿ ಹೋಗ ಬಯಸುವ ಯಾತ್ರಿಕರು ಮೊದಲು ಪಾದಗಳ ಮಂಟಪದಲ್ಲಿನ ಶ್ರೀಹರಿಯ ಪಾದಗಳಿಗೆ ನಮಸ್ಕರಿಸಿದ ನಂತರ ಶಿಖರಾರೋಹಣಕ್ಕೆ ಪ್ರಾರಂಭಿಸುತ್ತಾರೆ. ಪ್ರಾಚೀನ ಕಾಲದಲ್ಲಿ ತಿರುಮಲೆಯ ಆಲಯದ ಪ್ರದೇಶವನ್ನು ತಲುಪಲಾರದ ಭಕ್ತರು ಶೇಷಗಿರಿವಾಸನಿಗೆ ಈ ಪಾದಗಳ ಮಂಟಪದ ಬಳಿಯಿಂದಲೇ ಸಾಷ್ಟಾಂಗ ನಮಸ್ಕಾರ ಮಾಡಿ ತಮ್ಮ ಹೃದಯದ ಪ್ರಾರ್ಥನೆಯನ್ನು ನಿವೇದಿಸಿಕೊಂಡರು.

ಸ್ವಾಮಿಯ ಪಾದಗಳೊಂದಿಗೆ, ಶ್ರೀವೇಂಕಟೇಶ್ವರನ ವಿಗ್ರಹವನ್ನು ದ್ವಾರ ಪಾಲಕರನ್ನು ಪಾದಗಳ ಮಂಟಪದಲ್ಲಿ ಆಗಸ್ಟ್ 2001 ರಲ್ಲಿ ಪುನಃ ಪ್ರತಿಷ್ಠಾಪನೆ ಮಾಡಿದ್ದಾರೆ. ಪಾದಗಳ ಮಂಟಪಕ್ಕೆ ಶ್ರೀಲಕ್ಷ್ಮೀನಾರಾಯಣಸ್ವಾಮಿಯ ದೇವಸ್ಥಾನವು ಉಪಾಲಯ ವಾಗಿ ರಾರಾಜಿಸುತ್ತಿದೆ.

### ಶ್ರೀಕಲ್ಯಾಣವೇಂಕಟೇಶ್ವರಸ್ವಾಮಿ ಆಲಯ, ಶ್ರೀನಿವಾಸ ಮಂಗಾಪುರ

ಶ್ರೀಕಲ್ಯಾಣ ವೇಂಕಟೇಶ್ವರಸ್ವಾಮಿ ಆಲಯ ತಿರುಪತಿಯ ಸಮೀಪದಲ್ಲಿ ಶ್ರೀನಿವಾಸಮಂಗಾಪುರದಲ್ಲಿ ಇದೆ. ತಿರುಮಲೆಯ ಶ್ರೀಹರಿಯ ದೇವಾಲಯದ ನಂತರ ಈ ಆಲಯವನ್ನು ಪವಿತ್ರವಾದ ಪುಣ್ಯಕ್ಷೇತ್ರವಾಗಿ ಭಕ್ತರು ಭಾವಿಸುತ್ತಾರೆ. ತಿರುಮಲೆಯ ಶ್ರೀನಿವಾಸನನ್ನು ದರ್ಶಿಸಲಾಗದ ಭಕ್ತರು ಈ ಆಲಯಕ್ಕೆ ಹೋಗಿ ಸ್ವಾಮಿಯ ಆಶೀರ್ವಾದವನ್ನು ಪಡೆಯುತ್ತಾರೆ. ತಿರುಪತಿಗೆ 12 ಕಿ.ಮೀ. ದೂರದಲ್ಲಿ ಈ ಆಲಯವಿದೆ. ತಿರುಪತಿಯಿಂದ ಶ್ರೀನಿವಾಸಮಂಗಾಪುರಕ್ಕೆ ಹೋಗುವ ಬಸ್ಸುಗಳೊಂದಿಗೆ ಹತ್ತು ನಿಮಿಷಗಳಿಗೆ ಒಮ್ಮೆ ತಿರುಪತಿಯಿಂದ ಪಿಲೇರಿಗೆ ಹೋಗುವ ಪ್ರತಿ ಬಸ್ಸೂ ಇಲ್ಲಿ ನಿಲ್ಲುತ್ತದೆ. ಶ್ರೀವೇಂಕಟೇಶ್ವರನು ತೊಂಡವಾಡದಲ್ಲಿ ಅಗಸ್ತ್ಯೇಶ್ವರನನ್ನು ದರ್ಶಿಸಿದ ನಂತರ ಸಮೀಪದಲ್ಲಿರುವ ಶ್ರೀನಿವಾಸಮಂಗಾಪುರದಲ್ಲಿ ಆರು ತಿಂಗಳು ಇದ್ದು ಅಲ್ಲಿಂದ ಶ್ರೀ ಹರಿಯು ಮೆಟ್ಟಿಲುಗಳ ಮಾರ್ಗದಲ್ಲಿ ತಿರುಮಲೆಯನ್ನು ತಲುಪಿದನೆಂದು ಸ್ಥಳಪುರಾಣವು ತಿಳಿಸುತ್ತಿದೆ.

ಶ್ರೀನಿವಾಸನು ಪದ್ಮಾವತಿಯನ್ನು ಮದುವೆಯಾದ ನಂತರ,ತಿರುಮಲೆಗೆ ಹೋಗುವ ಮೊದಲು ಮಂಗಾ ಪುರಕ್ಕೆ ಬಂದು ಅಗಸ್ತ್ಯಾಶ್ರಮದಲ್ಲಿ ಅಗಸ್ತ್ಯರ ಪ್ರಾರ್ಥ ನೆಯ ಮೇರೆಗೆ ಇಲ್ಲೇ ಆರು ತಿಂಗಳು ವಿಶ್ರಾಂತಿ ಪಡೆದು ಸಪ್ತಗಿರಿಗೆ ತೆರಳಿದ ಹಾಗೇ ಹೋಗುವ ಮೊದಲು ಭಕ್ತರಿಗೆ ಎರಡು ವರಗಳನ್ನು





ನೀಡಿದ. ಯಾರು ಬೆಟ್ಟವನ್ನು ಹತ್ತಿ ತನ್ನ ದರ್ಶನವನ್ನು ಮಾಡಲಾರರೋ, ಅವರಿಗೆ ತಾನು ಆರ್ಚಾಮೂರ್ತಿಯಾಗಿ ಶ್ರೀನಿವಾಸಮಂಗಾಪುರದಲ್ಲಿ ದರ್ಶನವನ್ನು ನೀಡುತ್ತೇನೆ ಎಂದು ಅನುಗ್ರಹಿಸಿದ. ಶ್ರೀನಿವಾಸ ಮಂಗಾಪುರದಲ್ಲಿನ ಶ್ರೀನಿವಾಸನ ದರ್ಶನವನ್ನು ಮಾಡಿದರೆ ಮದುವೆಯಾಗದೇ ಕಷ್ಟಪಡುತ್ತಿರುವವರಿಗೆ ಅಡೆತಡೆಗಳು ತೊಲಗುತ್ತವೆ. ವಿವಾಹಕ್ಕೆ ಉಂಟಾಗುವ ವಿಘ್ನಗಳು ತೊಲಗುತ್ತವೆ. ಇಲ್ಲಿ ಇಂದಿಗೂ ಭಕ್ತರು ಶ್ರೀನಿವಾಸ ಕಲ್ಯಾಣವನ್ನು ಮಾಡುತ್ತಾರೆ. ಮದುವೆಗೆ ಉಂಟಾಗುವ ವಿಘ್ನಗಳನ್ನು ತೊಲಗಿಸಿಕೊಳ್ಳುತ್ತಿದ್ದಾರೆ.

## ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯ, ಶ್ರೀವಾರಿ ಮೆಟ್ಟು

ತಿರುಪತಿಗೆ ಶ್ರೀವಾರಿಮೆಟ್ಟು ಮಾರ್ಗ 18 ಕಿ.ಮೀ. ದೂರದಲ್ಲಿದೆ. ಪುರಾಣಗಳ ಪ್ರಕಾರ ಶ್ರೀನಿವಾಸನು ಪದ್ಮಾವತಿದೇವಿಯನ್ನು ವಿವಾಹ ಮಾಡಿಕೊಂಡ ನಂತರ ಈ ಪವಿತ್ರಮಾರ್ಗದ ಮೂಲಕ ತಿರುಮಲೆಗೆ ನಡೆದು ಹೋಗಿದ್ದರಿಂದ ಈ ಮಾರ್ಗಕ್ಕೆ ಶ್ರೀವಾರಿಮೆಟ್ಟು ಮಾರ್ಗ ಎಂದು ಹೆಸರು ಬಂದಿದೆ.

ಇಲ್ಲಿ ಶ್ರೀ ವೇಂಕಟೇಶ್ವರಸ್ವಾಮಿಯ ದೇವಾಲಯವಿದೆ. ಇದು ಶ್ರೀನಿವಾಸಮಂಗಾಪುರದಿಂದ 6 ಕಿ.ಮೀ. ದೂರದಲ್ಲಿ, ಅಲಿಪಿರಿ ಪಾದಗಳ ಮಂಟಪದಿಂದ 16 ಕಿ.ಮೀ. ದೂರದಲ್ಲಿದೆ. ಈ ಮಾರ್ಗದ ಮೂಲಕ ನಡೆಯುವವರು ಬೆಟ್ಟವನ್ನು ಸುಲಭವಾಗಿ ಒಂದು ಗಂಟೆಯೊಳಗೇ ತಲುಪಬಹುದು.

ಈ ಮಾರ್ಗದಲ್ಲಿ ಪ್ರಧಾನವಾದ ಅಲಿಪಿರಿ ನಡಿಗೆಯ ಮಾರ್ಗದಲ್ಲಿ ಇರುವ ಎಲ್ಲಾ ರೀತಿಯ ಸೌಕರ್ಯಗಳನ್ನು ತಿ.ತಿ.ದೇ., ಅವರು ಬಹಳ ಚೆನ್ನಾಗಿ ಏರ್ಪಡಿಸಿದ್ದಾರೆ.



# ಭಕ್ತರಿಗೆ ಅಭಯ ನೀಡುವ ಹುಲುಗಿನ ಮುರಡಿ ವೆಂಕಟರಮಣ



- ಎ.ಆರ್. ಗಿರಿಧರ
9986191160

ಚಿಕ್ಕ ತಿರುಪತಿ ಎಂದೇ ಕರೆಯಲ್ಪಡುವ ಹುಲುಗಿನ ಮುರಡಿ ವೆಂಕಟರಮಣಸ್ವಾಮಿ ದೇವಸ್ಥಾನವು ವ್ಯಾಘ್ರಾಚಲ ಎಂದೇ ಪ್ರಸಿದ್ದಿಯಾಗಿದೆ. ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಗ್ರಾಮದಿಂದ ಆಗ್ನೇಯ ದಿಕ್ಕಿನಲ್ಲಿ ಸುಮಾರು 8 ಕಿ.ಮೀ. ದೂರದಲ್ಲಿದೆ. ಗುಂಡ್ಲುಪೇಟೆಯಿಂದ ತೆರಕಣಾಂಬಿ ಮಾರ್ಗವಾಗಿ 20 ಕಿ.ಮೀ. ಜಿಲ್ಲಾ ಕೇಂದ್ರ ಚಾಮರಾಜನಗರದಿಂದ 30 ಕಿ.ಮೀ. ದೂರದಲ್ಲಿದೆ. 300 ಅಡಿಗಳಷ್ಟು ಎತ್ತರದ ಬೆಟ್ಟದ ಮೇಲಿರುವ ದೇವಾಲಯದಲ್ಲಿ ಪೂರ್ವಾಭಿಮುಖವಾಗಿ ಪ್ರಸನ್ನವದನನಾಗಿರುವ ಶ್ರೀನಿವಾಸನು ಅಭಯ ಹಸ್ತ ನಾಗಿದ್ದು, ಶಂಖ ಚಕ್ರಗಳನ್ನು ಧರಿಸಿದ್ದಾನೆ. ಎಡ ಪಾರ್ಶ್ವದಲ್ಲಿ ಆಂಡಾಳ್ ಅಥವಾ ನೀಳಾದೇವಿ, ಒಳಭಾಗದಲ್ಲಿ ಶ್ರೀ ವೈಕುಂಠನಾಥಸ್ವಾಮಿಯೂ ಶ್ರೀದೇವಿ ಮತ್ತು ಭೂದೇವಿ ಸಹಿತನಾಗಿದ್ದು ಮೂರು ದ್ವಾರಗಳಲ್ಲೂ ದ್ವಾರಪಾಲಕರಿದ್ದಾರೆ.

**ಸ್ಥಳಪುರಾಣ :**

ಸ್ಥಳಪುರಾಣದ ಪ್ರಕಾರ ವರಾಹ ಪುರಾಣದ ಉತ್ತರಖಂಡದಲ್ಲಿ ಈ ಬೆಟ್ಟಕ್ಕೆ ಕೃತಯುಗದಲ್ಲಿ ಶೇಷಾದ್ರಿ, ತ್ರೇತಾಯುಗದಲ್ಲಿ ಕನಕಾದ್ರಿ, ದ್ವಾಪರ ಯುಗದಲ್ಲಿ ವೆಂಕಟಾದ್ರಿ ಹಾಗೂ ಕಲಿಯುಗದಲ್ಲಿ ವ್ಯಾಘ್ರಾದ್ರಿ (ಹುಲುಗಿನ ಮುರಡಿ)ಯೆಂತಲೂ ಕರೆಯಲಾಗಿದೆ.

**ಪೌರಾಣಿಕ ಹಿನ್ನೆಲೆ:**

ಹಿಂದೆ ವಾಯು ಹಾಗೂ ಆದಿಶೇಷನಿಗೆ ಯಾರು ಶಕ್ತಿಶಾಲಿಗಳು ಎಂದು ಪರೀಕ್ಷಿಸುವ ಜಿದ್ದಿಗೆ ಬಿದ್ದು ಆದಿಶೇಷನು ಮೇರು ಪರ್ವತದ ಶಿಖರವನ್ನು ಸುತ್ತಿಕೊಂಡನು. ವಾಯು ಜೋರಾಗಿ ಗಾಳಿ ಬೀಸಿ ಆದಿಶೇಷನ ಬಂಧನ ಬಿಡಿಸಲು ಪ್ರಯತ್ನಿಸಿದರೂ ಸಾಧ್ಯವಾಗದೆ ಮೇರು ಶಿಖರವೇ ಎರಡು ಭಾಗವಾಗಿ ಮುರಿದು ಬಿದ್ದಿತಂತೆ. ಇದರಲ್ಲಿ ಒಂದು ವೃಷಭಾದ್ರಿ (ಈಗಿನ ತಿರುಪತಿ) ಮತ್ತೊಂದು ಹೋಳು ದಕ್ಷಿಣ ಶೇಷಾದ್ರಿ (ಹುಲುಗಿನ ಮುರಡಿ)ಎಂದು ಹೆಸರಾಯಿತು.

**ಪುಣ್ಯತೀರ್ಥಗಳು :**

ಈ ದಕ್ಷಿಣ ಶೇಷಾದ್ರಿಗೆ ವ್ಯಾಘ್ರಾಚಲ,ಹುಲುಗಿನ ಮುರಡಿ, ವೆಂಕಟಾಚಲಗಿರಿ ಎಂದು ಕರೆಯಲಾಗುತ್ತಿದೆ. ತನ್ನ ಹೆಸರಿನ ಬಗ್ಗೆ ವಿವಿಧ ಐತಿಹ್ಯವನ್ನು ಹೊಂದಿರುವ ಈ ದೇವಾಲಯದ ಆವರಣದಲ್ಲಿ ಪುರಾಣ ಪ್ರಸಿದ್ಧವಾದ ಧನುಷ್ಕೋಟಿ ತೀರ್ಥ, ವೇದ ಪುಷ್ಕರಿಣೀತೀರ್ಥ ಮತ್ತು ವೈಕುಂಠ ತೀರ್ಥಗಳೆಂಬ ತೀರ್ಥಕೊಳಗಳಿವೆ. ಶ್ರೀರಾಮನು ಲಂಕೆಗೆ ಹೊರಟ ಸಂದರ್ಭದಲ್ಲಿ ದೇವರ ಅನುಗ್ರಹ ಪಡೆಯಲು ತನ್ನ ಸ್ನಾನಕ್ಕಾಗಿ ಧನಸ್ಸಿನ ತುದಿಯಿಂದ ಚುಚ್ಚಿ ಕಲ್ಲು ಬಂಡೆಯಿಂದ ನೀರು ತೆಗೆದ ಸ್ಥಳವೇ ಧನಷ್ಕೋಟಿ ತೀರ್ಥ. ರಾಕ್ಷಸರಿಂದ ವೇದಗಳನ್ನು ರಕ್ಷಿಸಿದ ಸಂದರ್ಭದಲ್ಲಿ ಪರಮಪುರುಷನ ಶರೀರದಿಂದ ತೊಟ್ಟಿಕ್ಕಿದ ಬೆವರು ಬಿದ್ದ ಸ್ಥಳವೇ ವೇದ ಪುಷ್ಕರಿಣಿ ತೀರ್ಥ,ವೈಕುಂಠದಿಂದ ಬಂದ ಪರಮಪುರುಷನಿಂದಲೇ ನಿರ್ಮಿತವಾದ ವೈಕುಂಠ ತೀರ್ಥ ಎಂಬ ಕೊಳಗಳಿವೆ.

ಮಾಂಡವ್ಯ ಮಹರ್ಷಿಗಳು ಸ್ಥಾಪಿಸಿದ ಶ್ರೀನಿವಾಸ ದೇವರ ಮೂರ್ತಿ ಇದಾಗಿದೆ. ಮಾಂಡವ್ಯ ಮಹರ್ಷಿಗಳು ಶ್ರೀಮನ್ನಾರಾಯಣನ ಸಾನ್ನಿಧ್ಯ ಪಡೆಯಲು ಪುಷ್ಕರವೆಂಬ ದಿವ್ಯ ಕ್ಷೇತ್ರದಲ್ಲಿ ತಪಸ್ಸು ಮಾಡಿದರೂ ಸಿದ್ಧಿಸದ ಕಾರಣ ಅವರು ತಿರುಪತಿಗೆ ಹೋಗಿ ಬಂದು ಇಲ್ಲಿ ತಪಸ್ಸು ಮಾಡಿದ್ದರು. ಇವರ ತಪಸ್ಸಿಗೆ ಮೆಚ್ಚಿದ ಶ್ರೀಮನ್ನಾರಾಯಣನು ವೃದ್ಧ ಬ್ರಾಹ್ಮಣ ವೇಷದಲ್ಲಿ ಬಂದು ದಕ್ಷಿಣ ಶೇಷಾದ್ರಿ(ಹುಲುಗಿನ ಮುರಡಿ)ಯಲ್ಲಿ ಅಷ್ಟಾಕ್ಷರಾನುಸಂಧಾನ ಪೂರ್ವಕವಾಗಿ ಭಕ್ತಿಯಿಂದ ತಪಸ್ಸು ಮಾಡಿದರೆ ಅವರ

ಇಷ್ಟಾರ್ಥ ನೆರವೇರುವುದು ಎಂದು ಹೇಳಿ ಅಂತರ್ಧಾನನಾದನು. ನಂತರ ಮಾಂಡವ್ಯರು ಇಲ್ಲಿಗೆ ಬಂದು ತಪಸ್ಸನ್ನು ಆಚರಿಸಿ ಶ್ರೀನಿವಾಸನ ದರ್ಶನ ಪಡೆಯುತ್ತಾರೆ.

ಒಮ್ಮೆ ಅಗಸ್ತ್ಯ ಮುನಿಗಳು ವೈಕುಂಠ ತೀರ್ಥದ ಬಳಿ ನೀರು ತರಲು ಹೋಗಿದ್ದಾಗ ರಾಕ್ಷಸನೊಬ್ಬ ಅವರನ್ನು ಹಿಡಿದುಕೊಂಡನಂತೆ. ಆಗ ಅವರು ಶ್ರೀನಿವಾಸನನ್ನು ಪ್ರಾರ್ಥಿಸಿದಾಗ ವ್ಯಾಘ್ರ ರೂಪದಲ್ಲಿ ಒಂದು ರಾಕ್ಷಸನನ್ನು ಸಂಹರಿಸುತ್ತಾನೆ. ಹೀಗೆ ಶ್ರೀನಿವಾಸನು ವ್ಯಾಘ್ರನ ರೂಪದಿಂದ ಬಂದ ಗಿರಿಯು ವ್ಯಾಘ್ರಾಚಲವೆಂದು ಪ್ರತೀತಿಯಿದೆ.

**ದೇಗುಲ ನಿರ್ಮಾಣದ ಇತಿಹಾಸ :**

ಹುಲುಗಿನ ಮುರಡಿ ದೇವಸ್ಥಾನವನ್ನು 15 ನೇ ಶತಮಾನದ ಉತ್ತರಾರ್ಧದಲ್ಲಿ ಕ್ರಿ.ಶ. 1498 ರಲ್ಲಿ ತೆರಕಣಾಂಬಿಯ ಸಾಹುಕಾರ ದಾಸ ಕೇಶವಶೆಟ್ಟಿ ಕಟ್ಟಿಸಿದ್ದಾರೆ. ಕ್ರಿ.ಶ. 1620 ರಲ್ಲಿ ಚಿಕ್ಕಹಳ್ಳಿ ಅಪ್ಪಣ್ಣ ಗೌಡರು 4 ಅಂಕ ಕೈಸಾಲೆಯನ್ನು ಕ್ರಿ.ಶ.1629 ರಲ್ಲಿ ಶ್ರೀವೈಕುಂಠ ನಾರಾಯಣ ಸ್ವಾಮಿ ಗುಡಿಯನ್ನು ಮತ್ತು ಅಮ್ಮನವರ ಗುಡಿಯನ್ನು ತೆರಕಣಾಂಬಿ ದೊಡ್ಡ ನಾರಣಪ್ಪ ಕಟ್ಟಿಸಿದ್ದಾರೆ. ಕ್ರಿ.ಶ. 1678 ರಲ್ಲಿ ಪಾತಾಳ ಮಂಟಪವನ್ನು ತೆರ ಕಣಾಂಬಿಯ ಚೆನ್ನಯ್ಯಶೆಟ್ಟಿ ಎಂಬುವರು ಮತ್ತು ಕ್ರಿ.ಶ.1696 ರಲ್ಲಿ ಮೈಸೂರು ಅರಸರಾದ ಚಿಕ್ಕ ದೇವರಾಜ ಒಡೆಯರ ಧರ್ಮ ಪತ್ನಿ ದೊಡ್ಡ ಮುದ್ದಮ್ಮನವರು ಬೆಟ್ಟದ ಮೇಲಿನ ಕೋಟೆಯನ್ನು ಕಟ್ಟಿಸಿದರೆಂದು ದಾಖಲೆಗಳು ಹೇಳುತ್ತಿವೆ.

**ವ್ಯಾಸರಾಯರು ಪ್ರತಿಷ್ಠಾಪಿಸಿದ ಆಂಜನೇಯ ಮೂರ್ತಿ :**

ವ್ಯಾಸರಾಯರು ಸುಮಾರು 10 ಅಡಿ ಎತ್ತರದ ಬೃಹತ್ ಆಂಜ ನೇಯ ಸ್ವಾಮಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ದೇವಾಲಯದ ಬಲ ಭಾಗದಲ್ಲಿ ಬಾಲದಲ್ಲಿ ಗಂಟೆ ಹಾಗೂ ಕೈನಲ್ಲಿ ಪುಷ್ಪ ಹಿಡಿದಿರುವ ಅಪ ರೂಪದ ಅಳೆತ್ತರದ ಆಂಜನೇಯನ ವಿಗ್ರಹವಿದೆ.

**ರಾಜಗೋಪುರ ನಿರ್ಮಾಣ :**

ಶ್ರೀ ಹುಲುಗಿನ ಮುರಡಿ ಪ್ರಸನ್ನ ವೆಂಕಟರಮಣಸ್ವಾಮಿ ದೇವ ಸ್ಥಾನದ ಸೇವಾ ಸಮಿತಿ ಭಕ್ತಾದಿಗಳ ನೆರವಿನಿಂದ 2005 ರಲ್ಲಿ 36 ಲಕ್ಷ ರೂ. ವೆಚ್ಚದಲ್ಲಿ ಮಹಾದ್ವಾರ ಹಾಗೂ ರಾಜಗೋಪುರವನ್ನು ನಿರ್ಮಿಸ ಲಾಗಿದೆ.

**ಸಂಕ್ರಾಂತಿಯಂದು ದೊಡ್ಡ ಜಾತ್ರೆ, ರಥೋತ್ಸವ :**

ಪ್ರತಿವರ್ಷವೂ ಸಂಕ್ರಾಂತಿಯಂದು ಇಲ್ಲಿ ನಡೆಯುವ ರಥೋ ತ್ಸವಕ್ಕೆ ತಾಲ್ಲೂಕು ಸೇರಿದಂತೆ ನೆರೆಯ ತಮಿಳುನಾಡು ಹಾಗೂ ರಾಜ್ಯದ ಹಲವೆಡೆಯಿಂದ ಲಕ್ಷಾಂತರ ಜನ ಭಕ್ತರು ಹರಿದು ಬರುತ್ತಾರೆ.

ಜಾತ್ರೆ ಅಂಗವಾಗಿ ಸುಮಾರು ಹತ್ತು ದಿನಗಳ ಕಾಲ ವಿಶೇಷ ಪೂಜಾ ಕೈಂಕರ್ಯ ನಡೆಸಲಾಗುತ್ತದೆ. ಬಿದಿರಿನ ಬಂಬುಗಳಿಂದ ದಿವ್ಯಾ ಅಲಂಕಾರ ರಥವನ್ನು ಸಿದ್ಧಪಡಿಸಲಾಗುತ್ತಿದೆ.

**ಮಾಂಡವ್ಯ ಋಷಿಗಳಿಂದ ಪ್ರತಿಷ್ಠಾಪನೆ :**

ತಿರುಪತಿಗೆ ಹೋಗಲಾಗದವರು ಇಲ್ಲಿಗೆ ಬಂದು ಹರಕೆ ತೀರಿಸು ತ್ತಿದ್ದಾರೆ. ಮಾಂಡವ್ಯ ಮಹರ್ಷಿಗಳಿಂದ ಪ್ರತಿಷ್ಠಾಪಿಸಿದ ಮೂರ್ತಿಗಳಿಗೆ ಋಷಿಯು ಈಗಲೂ ಮಂಡೂಕ ರೂಪದಲ್ಲಿ ಬಂದು ಸ್ವಾಮಿಯನ್ನು ಆರಾಧಿ ಸುತ್ತಿದ್ದಾರೆ ಎಂಬ ಪ್ರತೀತಿಯಿದೆ. ಅವಿವಾಹಿತರು ಇಲ್ಲಿ ಬಂದು ಕಂಕಣ ಕಟ್ಟಿಸಿಕೊಂಡರೆ ಕಂಕಣಭಾಗ್ಯ ಹಾಗೂ ಮಕ್ಕಳಿಲ್ಲದ ದಂಪತಿಗಳು ಸಂಕ್ರಾಂತಿಯ ದಿವ್ಯ ರಥೋತ್ಸವ ಹಾಗೂ ಮೊದಲನೇ ಶ್ರಾವಣ ಶನಿವಾರ ಚಿಕ್ಕ ರಥೋತ್ಸವ ಸಂದರ್ಭದಲ್ಲಿ ಗರುಡಬುತ್ತಿ ಪಡೆದುಕೊಂಡರೆ ಸಂತಾನ ಭಾಗ್ಯ ದೊರಕುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ.


**ಹೀಗೆ ಬನ್ನಿ :**

ಹುಲುಗಿನ ಮುರಡಿ ವೆಂಕಟರಮಣ ದೇವಾಲಯಕ್ಕೆ ಬರುವವರು ಮೈಸೂರಿನಿಂದ ಗುಂಡ್ಲುಪೇಟೆ ಮಾರ್ಗವಾಗಿ ತೆರಕಣಾಂಬಿಗೆ ಬಂದರೆ ಅಲ್ಲಿಂದ ಶೇರ್ ಆಟೋ ಸೌಲಭ್ಯವಿದೆ. ಶನಿವಾರ ವಿಶೇಷ ಪೂಜೆ ನಡೆಯು ವುದರಿಂದ ನೇರವಾಗಿ ಆಟೋಗಳು ದೇವಾಲಯದವರೆಗೂ ಹೋಗುತ್ತವೆ. ಉಳಿದ ದಿನಗಳಲ್ಲಿ ಆಟೋ ಅಥವಾ ಬಸ್‌ನಲ್ಲಿ ಕಿಲಗೆರೆ ಕ್ರಾಸ್‌ನಲ್ಲಿ ಇಳಿದು ದೇಗುಲಕ್ಕೆ 3 ಕಿ.ಮೀ. ನಡೆದುಕೊಂಡು ಹೋಗಬಹುದು.

**ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನು ಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

– ಕಾರ್ಯನಿರ್ವಹಣಾಧಿಕಾರಿ



# ದಾಸರು ಕಂಡಂತಹ ತಿರುಮಲೆ ಬ್ರಹ್ಮೋತ್ಸವ

-ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ

ಶ್ರೀ ವೆಂಕಟೇಶ್ವರ ಸ್ವಾಮಿವಾರಿ ಬ್ರಹ್ಮೋತ್ಸವವು ಅಥವಾ ಅಥವಾ ಶ್ರೀವಾರಿ ಬ್ರಹ್ಮೋತ್ಸವವು ಭಾರತದ ಆಂಧ್ರಪ್ರದೇಶದ ತಿರುಪತಿ ಜಿಲ್ಲೆಯ ತಿರುಮಲೆ ತಿರುಪತಿಯಲ್ಲಿರುವ ವೆಂಕಟೇಶ್ವರ ದೇವಸ್ಥಾನದಲ್ಲಿ ಆಚರಿಸಲಾಗುವ ವಾರ್ಷಿಕ ಮಹೋತ್ಸವವಾಗಿದೆ. ಈ ಹಬ್ಬವು ಅಶ್ವೀಜ ಮಾಸದಲ್ಲಿ ಒಂದು ತಿಂಗಳವರೆಗೆ ಇರುತ್ತದೆ. ಉತ್ಸವವನ್ನು ನಡೆಸಲು ಬ್ರಹ್ಮನು ಭೂಮಿಗೆ ಇಳಿಯುತ್ತಾರೆ. ಈ ಬ್ರಹ್ಮೋತ್ಸವವನ್ನು ಒಂಬತ್ತು ದಿನಗಳ ಕಾಲ ನಡೆಸಲಾಗುತ್ತದೆ. ಮೊದಲ ದಿನದ ಹಿಂದಿನ ಸಂಜೆ, ಅಂಕುರಾರ್ಪಣೆ ವಿಧಿಯನ್ನು ನಡೆಸಲಾಗ್ತುತದೆ. ಪ್ರಮುಖ ಮೊದಲ ದಿನದ ಚಟುವಟಿಕೆ ಧ್ವಜಾರೋಹಣ, ಹಬ್ಬದ ಆರಂಭವನ್ನು ಸೂಚಿಸಲು ಗರುಡ ಧ್ವಜವನ್ನು ಏರಿಸುವುದು, ಹಬ್ಬದ ಸಮಯದಲ್ಲಿ ಧಾರ್ಮಿಕ ಚಟುವಟಿಕೆಗಳು ದೇವಸ್ಥಾನದ ಸುತ್ತಲಿನ ಬೀದಿಗಳಲ್ಲಿ ದೈನಂದಿನ ಹೋಮಗಳು ಮತ್ತು ಮೆರವಣಿಗೆಗಳನ್ನು ಒಳಗೊಂಡಿರುತ್ತದೆ. ಅಂತಿಮ ದಿನವು ವೆಂಕಟೇಶ್ವರನ ಜನ್ಮನಕ್ಷತ್ರದಲ್ಲಿ ಸುದರ್ಶನ ಚಕ್ರ ಪೂಜಿಸಿ ಧ್ವಜಾವರೋಹಣ, ಗರುಡ ಧ್ವಜವನ್ನು ಇಳಿಸುವುದರೊಂದಿಗೆ ಉತ್ಸವವು ಕೊನೆಗೊಳ್ಳುತ್ತದೆ.

ಇನ್ನು ದಾಸರ ಪದಗಳಲ್ಲಿ ಶ್ರೀವೆಂಕಟೇಶ್ವರ ದೇವರ ಬ್ರಹ್ಮೋತ್ಸವದ ವರ್ಣನೆಯನ್ನು ನೋಡೋಣ. ಪುರಂದರದಾಸರು ತಮ್ಮ ಸಾಹಿತ್ಯದಲ್ಲಿ,

ಬಂದು ನಿಂದಿಹ ನೋಡಿ -ಭೂತಳದಿ ವೆಂಕಟಂದಿರೆಯ ನೊಡಗೂಡಿ
ಒಪ್ಪುವ ನಿರಂತರಪೊಂದಿ ಭಜನೆಯ ಮಾಡಿಆನಂದ ಬೇಡಿ
ಪವಂದಿಸುತ ಮನದೊಳಗೆ ಇವನಡಿ
- ದ್ವಂದ್ವ ಭಜಿಸಲು ಬಂದ ಭಯಹರ

ಇಂದುಧರಸುರವೃಂದನುತ ಗೋವಿಂದ
ಘನದಯಾಸಿಂಧೂ ಶ್ರೀ ಹರಿ (ಅ.ಪ. )
ದ್ವಾರದೆಡಬಲದಲ್ಲಿ ಜಯ ವಿಜಯರಿಬ್ಬರು ಸೇರಿ ಸೇವಿಪರಲ್ಲಿ
ಸನಕಾದಿನುತ ಶೃಂಗಾರನಿಧಿ ಅಂಗದಲಿ -
ಮುತ್ತಿನಲಿ ಶೋಭಿಹಾರ ಹೊಂದಿಹುದಲ್ಲಿ
ವಿಸ್ತಾರದಲ್ಲಿ ವಾರವಾರಕೆ ಪೂಜೆ ಗೊಂಬುವಹಾರ
ಮುಕುಟಾಭರಣ ಕುಂಡಲ ಧಾರಿ ಭುಜ ಕೇಯೂರ ಭೂಷಿತ
ಮಾರಪಿತಗುಣಮೋಹನಾಂಗ ॥
ಚಾರುಪೀತಾಂಬರ ಕಟಿಯ ಕರವೀರ ಕಲ್ಹಾರಾದಿ
ಹೂವಿನಹಾರ ಕೊರಳೊಲು ಎಸೆಯುತಿರೆ

ಈ ಸಾಹಿತ್ಯದಲ್ಲಿ ಪುರಂದರದಾಸರು ಒಂದೊಂದು ಪದಗಳನ್ನು ಕಣ್ಣಿಗೆ ಹಬ್ಬದ ವಾತಾವರಣ ಕಾಣುವಂತೆ ಬರೆದಿದ್ದಾರೆ. ಭಗವಂತ ಭೂಮಿಗೆ ಬಂದು ಭಕ್ತರನ್ನು ಉದ್ಧರಿಸಲು ಬರುವ ಮಾಡಿಸಿಕೊಳ್ಳುತ್ತಾನೆ. ಎಡ, ಬಲದಲ್ಲಿ ಶ್ರೀದೇವಿ ಭೂದೇವಿಯರಿಂದ ಒಡಗೂಡಿ ಸ್ಥಿರಗಂಭೀರನಾಗಿ ಸಕಲ ಭೂಷಿತನಾಗಿ ಸರ್ವೇಶ್ವರನು ಬರುತ್ತಿರುವುದನ್ನು ವರ್ಣಿಸಿದ್ದಾರೆ. ಇನ್ನು ವಿಜಯದಾಸರು ತಮ್ಮ ಕೃತಿಯಲ್ಲಿ,

ಗಿರಿಯ ತಿಮ್ಮಪ್ಪ ವಾಹನಗಳೇರಿ ನಿತ್ಯಾ
ಮೆರೆದು ಚತುರ ಬೀದಿ ತಿರುಗಿ ಒಪ್ಪುದು ನೋಡೆ ಪ
ಸರಸಿಜಭವಾಗ್ರಜರುಳಿದವಾರು
ವರ ಸಕಲ ಮನೋಭೀಷ್ಟ ಕೈಕೊಳುತಾ

ನೆರೆದು ಸುತ್ತಲು ತಮ್ಮ ಭಕುತಿಯಲಿ ಸೂಸುತ್ತ
ಹರುಷ ವಾರಿಧಿಯಾಳು ಮುಳಗಿದಟ್ಟಿಡಿಯಿಂದಾ 1
--------------------------------
ಚಿನುಮಯ ರೂಪ ವಿಚಿತ್ರ ಮಹಿಮ ದೇವ
ನೆನೆದವರ ಹಂಗಿಗೆ ಸಿಲುಕುವಾ
ಘನಗಿರಿ ತಿರ್ಮಲ ವಿಜಯವಿಠ್ಠಲರೇಯಾ
ದನುಜದಲ್ಲಣನೆಂಬೊ ಬಿರಿದು ಪೊಗಳಿಸುತ್ತ 5

ಅವರವರ ಭಕುತಿಯ ಅನುಗುಣವಾಗಿ ಚಿತ್ರ ವಿಚಿತ್ರ ದರುಶನ ನೀಡುತ್ತಾ ಶ್ರೀವೆಂಕಟೇಶನು ಅಣು ತೃಣಾದಿಯಲ್ಲಿದ್ದರು, ಬೀದಿ ಬೀದಿಗಳಲ್ಲಿ ಮೆರವಣಿಯಲ್ಲಿ ಬರುತ್ತ ಸುಜನರಿಗೆ, ದೀನರಿಗೆ ಹೀಗೆ ಸಕಲರಿಗೆ ಅವರ ಮನೋಅಭಿಷ್ಟೇಗಳನ್ನು ಕೊಡುತ್ತಾ ಉದ್ಧರಿಸುತ್ತಾ ಬರುವನೆಂದು ಹೇಳಿರುವರು. ಹೀಗೆ ಸುಂದರವಾಗಿ ವರ್ಣಿಸಿ ಪದ ಪುಷ್ಪಗಳ ಸಮರ್ಪಣೆ ಮಾಡಿದ್ದಾರೆ.

ಹರಿದಾಸಿನಿಯರಾದ ನಮ್ಮ ಹರಪನಹಳ್ಳಿ ಭೀಮವ್ವನವರು ತಮ್ಮ ಸಾಹಿತ್ಯವಾದ,

ಎಷ್ಟು ಹೇಳಲಿ ವೆಂಕಟಗಿರಿಯ
ದೃಷ್ಟಿಗೆ ಬಹು ಸಿರಿಯ
ಬೆಟ್ಟವನೆ ಮನಸಿಟ್ಟೇರಲು ಬೇಡಿದ
ಇಷ್ಟಾರ್ಥಗಳ ಈಡಾಡುವ ದೊರೆಯ / ಪ
ಚಿತ್ರ ವಿಚಿತ್ರದ ಮಹಾದ್ವಾರ
ಚಿನ್ನದ ಗೋಪುರ
ಸ್ವಚ್ಛವಾದ ಸ್ವಾಮಿ ಪುಷ್ಕರಣಿ ತೀರ
ಸುತ್ತಲು ಪ್ರಾಕಾರ
ಹೆಚ್ಚಿನ ತೀವ್ರತವೆ ಮನೋಹರ
ಮಾರುವ ವಿಸ್ತಾರ
ಚಿತ್ತಜನಯ್ಯನ ಶೈಲವೆ ದೂರದಿಂದ್ದತ್ತಿ
ಬರುವುದೀತನ ಪರಿಹಾರ 1
ದೇಶದೇಶದೊಳು ಈತನ ವಾರುತೆಯು
ತುಂಬಿದ ಕೀರುತಿಯು
ಆಸೆಯ ದೈವ ಈ ಮೂರುತಿಯು
ಫಲ್ಗುಣ ಸಾರಥಿಯು
ಲೇಸಾಗಿ ಜನರ ನೋಡುವ ರತಿಯು
ಕರ್ಪೂರದಾರತಿಯು
ವಾಸವಾಗಿರುವ ಈ ಶೇಷಾದ್ರಿಯಲ್ಲಿ ಭೀ -
ಮೇಶ ಕೃಷ್ಣ ಶ್ರೀನಿವಾಸ ಕೃಪಾಳು 5

ಈ ಕೃತಿಯಲ್ಲಿ ಜಾತಿ ಮತ ಭೇದವಿಲ್ಲದೇ ಎಲ್ಲ ಜನರು ವೆಂಕಪ್ಪನ ದರುಶನಕ್ಕೆ ಕಾತರರಾಗಿ ಬರುತ್ತಾರೆ. ಇನ್ನು ತಾವು ತಪ್ಪುಗಳನ್ನು ಒಪ್ಪಿಕೊಂಡು ಪ್ರಾಯಶ್ಚಿತ ರೂಪದಲ್ಲಿ ಕಾಣಿಕೆ ಹಾಕಿ. ನಮ್ಮ ಇಷ್ಟಾರ್ಥ ಪೂರೈಸುವನು ಹಾಗೂ ಇವನ ಮಹಿಮೆ, ವಾರ್ತೆ, ಕೀರ್ತಿ ಜಗದಗಲ ವಿಸ್ತರಿಸಿದೆಯೆಂದು ಹೇಳಿದ್ದಾರೆ.

ಇನ್ನು ಅಂಬಾಬಾಯಿ ಹರಿದಾಸಿ ಅವರು ತಮ್ಮ ಕೃತಿಯಲ್ಲಿ,

ಎಂಥಾದ್ದೊ ಶ್ರೀ ತಿರುಪತಿ। ಎಂಥಾದ್ದೊ (ಪ)
ಎಂಥಾದ್ದೊ ತಿರುಪತಿ ಕ್ಷೇತ್ರ।
ಸತ್ಪಾಂಥರಿಗಿಲ್ಲಿ ಸುಗಾತ್ರ ಅಹ ಕಂತುಪಿತನು
ಇಲ್ಲಿ ನಿಂತು ಭಕ್ತರಿಗೆಲ್ಲ ಸಂತಸಪಡಿಸುವನಂತಾದ್ರಿ
ನಿಲಯ ನಿನ್ನೆಂದಾದ್ದೊ (ಅ.ಪ.)
ನಾಗಾದ್ರಿಗಿರಿಯ ಮೆಟ್ಟುಗಳು।
ಅಯೋಗ್ಯರಿಗಿದು ದುರ್ಲಭಗಳು।
ಅಲ್ಲಿ ಭಾಗವತರ ಸಮ್ಮೇಳಗಳು।
ಶಿರಬಾಗಿ ವಂದಿಪರು ಜನರುಗಳು।
ಆಹಪೋಗುತ ಗಾಳಿಗೋಪುರವ ಕಂಡೆರಗಿ
ಮುಂದ್ಯಾಗುತ ಸಜ್ಜನ ನೀಗುವರು ದುಃಖ 1
ಶ್ರೀಪತಿ ಜಲದೊಳಾಡೀದ
ಕೂರ್ಮ ರೂಪದಿಂ ಗಿರಿಯನೆತ್ತಿದ
ಬಹು ಪಾಪಿ ಕನಕಾಕ್ಷನ ಕೊಂದ
ನೃಹರಿ ರೂಪ ವಾಮನ ಭೃಗುಜನಾದ

ಆಹ ಚಾಪಖಂಡನ ಕೃಷ್ಣಚರಿಸಿ ಬತ್ತಲೆ ಕಲ್ಕಿ ಗೋಪಾಲಕೃಷ್ಣ ವಿಠ್ಠಲನ ಮಹಾಕ್ಷೇತ್ರ 15 ಈ ಕೃತಿಯಲ್ಲಿ ಸಮಸ್ತ ತಿರುಪತಿಯಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳು,ಶ್ರೀವೆಂಕಟೇಶ ದೇವರ ಮಹಿಮೆ, ಸ್ವಾಮಿ ಪುಷ್ಕರಣಿ ಮಹಿಮೆ, ಅಲ್ಲಿ ನಡೆಯುವ ವೈವಿಧ್ಯಮಯ ಸೇವೆಗಳು ನೃತ್ಯ ಗೀತಾದಿಗಳನ್ನು ವರ್ಣನೆ, ಗಿರಿಗಳ ಮಹಿಮೆ, ಕೋಟಿ ಭಕ್ತವೃಂದ ದರುಶನ ಹೀಗೆ ಸಮಸ್ತ ಸಾರ ವಿಷಯಾರ್ಥವನ್ನು ಈ ತಮ್ಮ ಕೃತಿಯಲ್ಲಿ ಹೇಳಿದ್ದಾರೆ.

ಒಟ್ಟಾರೆ ಈ ಹರಿದಾಸರು ರಚಿಸಿದ ಸಾಹಿತ್ಯ ಕೃತಿಗಳನ್ನು ಅವಲೋಕಿಸಿದಾಗ, ಭಗವಂತ ತನ್ನ ಪತ್ನಿಯರ ಸಮೇತ ಸಾಲಾಂಕೃತನಾಗಿ ವೈಭವದಿಂದ ಬಂದು ಮೆರವಣಿಗೆಯಲ್ಲಿ ಬೀದಿಬೀದಿಗೂ ಬಂದು ಸಕಲರ ಅವರವರ ಭಕ್ತಿ ಮತ್ತು ಕರ್ಮಗಳ ಅನುಗುಣವಾಗಿ ಈಡೇರಿಸುವನು. ಇವನ ಮಹಿಮೆ ಅಪಾರ ಅನಂತವರ್ಣಾತೀತ ಎಂದು ಹೇಳಿದ್ದಾರೆ.

ಮನಯೇವ ಮನುಷ್ಯಾಣಾಮಂ ಕಾರಣಂಬಂಧಮೋಕ್ಷಯೋ

ಅಂದರೆ ನಮ್ಮ ಮನಸ್ಸು ಚಂಚಲ ಯಾವ ಕೆಲಸವು ಮಾಡಲು ಹೇಸುವುದಿಲ್ಲ ಹೀಗಾಗಿ ಜಗದ್ರಕ್ಷಕನ ಮೊರೆ ನಿತ್ಯವು ಹೋಗಬೇಕು. ಮೇಲಿಂದ ಮೇಲೆ ದಾಸರ ಕೀರ್ತನೆಗಳನ್ನು ಅವಲೋಕಿಸುತ್ತಾ ಜೀವನದಲ್ಲಿ ಅಳವಡಿಸಿಕೊಂಡು ತಪ್ಪುಗಳೆಲೇ ಪರಿಹರಿಸುವ ನಮ್ಮಪ್ಪ ತಿಮ್ಮಪ್ಪನಲ್ಲವೇ.

# ಅಲಿಪಿರಿ ಯಲ್ಲಿರುವ ಪಾದ ಮಂಡಪ


ಕಲಿಯುಗದ ಪ್ರತ್ಯಕ್ಷ ದೇವರಾದ ಶ್ರೀ ವೆಂಕಟೇಶ್ವರಸ್ವಾಮಿ ತಿರುಮಲೆಯಲ್ಲಿ ನೆಲಸಿದ್ದಾರೆ. ಆ ವೇಂಕಟೇಶ್ವರ ಸ್ವಾಮಿಯ ದರ್ಶನಕ್ಕಾಗಿ ಸಾವಿರಾರು ಜನ ಭಕ್ತರು ಬರುತ್ತಿರುತ್ತಾರೆ. ಅವರಲ್ಲಿ ಕೆಲವರು ಬೆಟ್ಟವನ್ನೇರಿ ಬರುತ್ತಾರೆ. ಆಗ ಅವರು ನಡೆದು ಬರುವ ದಾರಿಯೇ ಅಲಿಪಿರಿ.

ಅಲಿಪಿರಿ ತಿರುಪತಿಯಿಂದ, ತಿರುಮಲೆಗೆ ಹೋಗುವ ಹಾದಿಯಲ್ಲಿ ಬೆಟ್ಟವನ್ನೇರುವ ಆರಂಭದ ಸ್ಥಳ. ಬೆಟ್ಟವನ್ನೇರಲು ಸೋಪಾನ ಮಾರ್ಗ ಇಲ್ಲಿ ಮೊದಲಾಗುತ್ತದೆ. ಅಲಿಪಿರಿಯನ್ನು ತಮಿಳಿನಲ್ಲಿ ಅಡಿಪಡಿ ಎನ್ನುತ್ತಾರೆ. ಅಡಿ ಎಂದರೆ ಕೆಳ ಭಾಗ, ಪಡಿ ಎಂದರೆ ಮೆಟ್ಟಿಲು ಎಂದರ್ಥ. ತಿರುಪತಿಯಿಂದ ನಡಿಗೆಯ ಮುಖಾಂತರ ತಿರುಮಲೆಗೆ ತೆರಳುವ ಹಾದಿಯಲ್ಲಿ ಮೊದಲನೆಯದು ಅಲಿಪಿರಿ, ತಿರುಮಲೆಯ ಕೆಳಗಿರುವ ಪ್ರದೇಶ, ಮತ್ತೆ ಕೆಲವರು ಅಲಿಪಿರಿಯನ್ನು ಅಡಿಪ್ಪುಳಿ ಎನ್ನುವರು. ಪುಳಿ ಎಂದರೆ ಹುಣಿಸೇಮರ. ಕೆಳ ಭಾಗದಲ್ಲಿ ಕಂಡುಬರುವ ಹುಣಿಸೇ ಗಿಡದ ಪ್ರದೇಶವೆಂದು ಅರ್ಥ. ನಮ್ಮಾಳ್ವಾರರಿಗೆ ಹುಣಿಸೇ ಮರದಡಿಯಲ್ಲಿಯೇ ಜ್ಞಾನೋದಯವಾಗಿರುವ ಕಾರಣ ವೈಷ್ಣವ ಕ್ಷೇತ್ರಗಳಲ್ಲಿ ಹುಣಿಸೇ ಮರಕ್ಕೆ ಮಾನ್ಯತೆ ಇದೆ.

ಅಲಿಪಿರಿ ಎಂದರೆ ಅಲ್ಪಶರೀರವನ್ನು ಹೊಂದಿರುವನೆಂಬ ವಿವರಣೆಯನ್ನು ಕೆಲವರು ನೀಡುತ್ತಾರೆ. ಸ್ವಾಮಿಯು ಈ ಪ್ರದೇಶ ದಲ್ಲಿ ಸೂಕ್ಷ್ಮ ಶರೀರಿಯಾಗಿದ್ದಾನೆಂಬ ಭಾವವೂ ಇದೆ. ಅಲಿಪಿರಿಯಲ್ಲಿ ಮೊದಲಿಗೆ ಸಿಗುವುದು ನಮಸ್ಕಾರ ಭಂಗಿಯಲ್ಲಿ ನಿಂತು ಸ್ವಾಗತ ಕೋರುವ, ಗರುಡ ವಿಗ್ರಹ, ಆದರಾಚೆಗೆ ಎರಡು ವಾಹನದ್ವಾರಗಳ ಸ್ವಾಗತತೋರಣ. ಒಂದಾನೊಂದು ಕಾಲದಲ್ಲಿ ಹುಣಿಸೆ ಮರದ ಕೆಳಗೆ ಭಗವದ್ ರಾಮಾನುಜರ ಸೋದರಮಾವ ತಿರುಮಲನಂಬಿ ರಾಮಾಯಣದ ರಹಸ್ಯ ಅರ್ಥವನ್ನು ವಿವರಿಸುತ್ತಾ ರಾಮಾನುಜರಿಗೆ ಹೇಳುತ್ತಾ ಇದ್ದರು. ಒಂದು ದಿನ ರಾಮಾಯಣ ಅರ್ಥದ ರಹಸ್ಯ ಕೇಳುವಾಗ ಸ್ವಾಮಿಗೆ ಅರ್ಚನೆಯ ಸಮಯ ಬಂತು ಆದರೆ ಆ ಸಮಯಕ್ಕೆ ಸರಿಯಾಗಿ ಬರಲಿಲ್ಲ ಆಗ ಸ್ವಾಮಿಯೇ ಕೆಳಗೆ ಬಂದರೆಂದು ಪ್ರತೀತಿ. ಆದಕ್ಕೆ ಅಲ್ಲಿ ಸ್ವಾಮಿಯ ಪಾದದ ಗುರುತುಗಳು ಅಲ್ಲಿಯೇ ಉಳಿಯಿತು. ಇಷ್ಟು ಒಳ್ಳೆಯ ಶಿಲ್ಪಗಳೊಂದಿಗೆ ಪಾದಮಂಟಪವನ್ನು ವಿಜಯನಗರ ಮಟ್ಲ ಕುಮಾರ ಅನಂತರಾಜ ಕಟ್ಟಿಸಿದರು. ಯಾರೆ ಆಗಲಿ ಸ್ವಾಮಿಯವರನ್ನು ಶರಣು ಬೇಡಿದರೆ ಆ ಶ್ರೀವೆಂಕಟೇಶ್ವರ ಸ್ವಾಮಿಯವರು ಕೈಯನ್ನು ಬಿಡುವುದಿಲ್ಲ, ಮತ್ತೆ ಇದಕ್ಕೆ ಇನ್ನೊಂದು ಪ್ರತೀತಿ ಇದೆ. ಕಾಲು ನಡಿಗೆಯ ಹಾದಿಯಲ್ಲಿ ಹೊರಟವರಿಗೆ ಅಲಿಪಿರಿ ಮಾರ್ಗ ಮಧ್ಯದಲ್ಲಿ ಕಾಣಿಸುವ ಮಂಟಪವೇ ಪಾದಗಳ ಮಂಟಪ. ಇದು ಕ್ರಿ.ಶ. 1628 ರ ಕಾಲದ್ದಾಗಿದ್ದು ಈ ಮಂಟಪದಲ್ಲಿ 'ಪಾದರಕ್ಷೆಗಳು' ಲೆಕ್ಕವಿಲ್ಲದಷ್ಟು ಇದೆ. 'ಮಾಧವದಾಸು' ಎಂಬ ಹರಿಜನನೊಬ್ಬನು ಶ್ರೀಹರಿಯನ್ನು ಕಾಣಲಾಗದೆ ಇಲ್ಲೇ ಶಿಲೆಯಾಗಿ ಉಳಿದು ಹೋದ



– ಶ್ರೀಮತಿ. ಎಸ್. ಸುರೇಖ











ನಂತೆ. ಶ್ರಾವಣಮಾಸದ ಶನಿವಾರಗಳು ತುಂಬಾ ಮುಖ್ಯವಾದುದು. ಆ ದಿನ ಭಕ್ತರು ಉಪವಾಸವಿದ್ದು ತಂಬಿಟ್ಟು ಮಾಡುವುದು ಸಂಪ್ರದಾಯ. ಕಾಳಹಸ್ತಿ ಮತ್ತು ಕಂಚಿಯಿಂದ ಒಬ್ಬೊಬ್ಬರು ಸ್ವಾಮಿಯ ಪಾದರಕ್ಷೆಗಳನ್ನು ತಲೆಯ ಮೇಲೆ ಹೊತ್ತು ತಂದು ಅಲಿಪಿರಿಯಲ್ಲಿ ಪೂಜೆ ಮಾಡಿ ಆ ದೇವಾಲಯದಲ್ಲೇ ಇಡುವರು. ಈ ಮಂಟಪದಲ್ಲಿರುವ ಪಾದರಕ್ಷೆಗಳು ಆಗಾಗ್ಗೆ ಸವೆದು ಹೋಗುತ್ತಿರುತ್ತದೆ. ಸ್ವಾಮಿಯು ಬೆಟ್ಟದಿಂದಿಳಿದು ಬಂದು ಪಾದರಕ್ಷೆಯನ್ನು ಧರಿಸಿ ಅಲಮೇಲುಮಂಗಮ್ಮನ ಬಳಿ ಹೋಗಿ ನಂತರ ಬರುವಾಗ ಪಾದರಕ್ಷೆಗಳನ್ನು ಇಲ್ಲಿಯೇ ಬಿಟ್ಟು ಬೆಟ್ಟ ಹತ್ತುವನೆನ್ನುವುದು ಪ್ರತೀತಿ.

ಪಾದಮಂಟಪದ ನಂತರ ಮೆಟ್ಟಿಲು ಹಾದಿಯಲ್ಲಿ ಕಾಣಸಿಗುವ ಪ್ರಥಮ ಗೋಪುರ ಭಗ್ನ ಗೋಪುರ (ಶಿಥಿಲವಾದ) ಇದು ವಿಜಯನಗರದ ಅರಸ ಸಾಳುವ ನರಸಿಂಹನ ಕಾಲದ್ದಾಗಿದ್ದು 20ನೇ ಶತಮಾನದ ಮೊದಲಿಗೆ ಸಿಡಿಲು ಬಡಿದು ಶಿಥಿಲವಾಗಿತ್ತು. ಇದನ್ನು ತಿ.ತಿ.ದೇ. ವತಿಯಿಂದ 1982 ರಲ್ಲಿ ಪುರ್ನನಿರ್ಮಾಣಗೊಳಿಸಲಾಗಿದೆ. ಇದು ಪಾದ ಮಂಟಪದ ಹಿಂದೆ ಚಿತ್ರರೂಪದಲ್ಲಿ ಕಾಣಬರುತ್ತದೆ.

ಮಂಟಪದ ಮೊದಲಿಗೇ ಸ್ವಾಮಿಗೆ ಸಾಷ್ಟಾಂಗವೆರಗುತ್ತಾ ಇರುವ ಶಿಲ್ಪಗಳಿವೆ. ಇವುಗಳಲ್ಲಿ ದೊಡ್ಡದೆಂದರೆ ಕೋಳಾಲಕೊಂಡಯ್ಯನ ಮಗನಾದ ಲಕುಮಯ್ಯನದು. ಹದಿನೈದು-ಇಪ್ಪತ್ತು ಅಡಿಗಳ ಅಗಲದ ದಾರಿಯ ಇಕ್ಕಲದಲ್ಲಿ ಅಂಕಣ ಮಂಟಪಗಳುಂಟು. ಮುಂದೆ ಒಂದು ಅಂಗಳ, ಇಲ್ಲಿ ಪಶ್ಚಿಮಕ್ಕೆ ಹಲವು ಕಲ್ಲು ಮಂಟಪಗಳು ಪೂರ್ವಕ್ಕೆ ಲಕ್ಷ್ಮೀನಾರಾಯಣ ಸ್ವಾಮಿ ಆಲಯ ಉತ್ತರಕ್ಕೆ ಪಾದಾಲಮಂಟಪ . ಈ ಆಲಯ ಮಂಟಪಗಳ ನಡುವೆ ಇವುಗಳ ಚಾವಣಿಯ ಎತ್ತರದಷ್ಟು ಮೆಟ್ಟಿಲುಗಳನ್ನೇರಿದರೆ ಒಂದು ದೊಡ್ಡ ದ್ವಾರಗೋಪುರ ಆ ಮೇಲೆ ಸೋಪಾನಪಂಕ್ತಿ ಅಲ್ಲಲ್ಲಿ ವಿಶ್ರಾಂತಿ ಮಂಟಪಗಳು.

ಒಂದು ಮಧ್ಯಗೋಪುರ, ಪುನಃ ಮೆಟ್ಟಿಲುಗಳ ಸಾಲು, ಬೆಟ್ಟದ ಕೊನೆಯಲ್ಲಿ ಮತ್ತೊಂದು ಗೋಪುರ ಇಲ್ಲಿ ಶಂಖು, ನಾಮ ಚಕ್ರಗಳ ವಿದ್ಯುತ್ ಸಂಯೋಜನೇ ಇದ್ದು ಇಲ್ಲಿ ಕಂಡು ಬರುವ ಸ್ಥೂಲ ಚಿತ್ರ. ಇಲ್ಲಿ ಮೊದಲು ನಿರ್ಮಾಣ ಆದ ಕಟ್ಟಡವೆಂದರೆ ಲಕ್ಷ್ಮೀನಾರಾಯಣಸ್ವಾಮಿ ವಿಗ್ರಹವನ್ನು ಹೊಂದಿ ನಿತ್ಯಪೂಜೆ ನಡೆಯುತ್ತಿರುವ ಆಲಯ. ಇಲ್ಲಿ ಮುಂದಿನ ಮುಖಮಂಟಪದ ಹೊರಾಂಗಣ ಉಪಾಲಯಗಳಲ್ಲಿ ದಕ್ಷಿಣದಲ್ಲಿ ಪೆರಿಯಾಳ್ವಾರರೂ, ಉತ್ತರದಲ್ಲಿ ಗೋದಾದೇವಿಯೂ ಪರಸ್ಪರ ಅಭಿಮುಖರಾಗಿ ನಿಂತಿದ್ದಾರೆ. ಮುಖಮಂಟಪ, ಅಂತರಾಳ, ಸುಕನಾಸಿ, ಗರ್ಭಗೃಹಗಳುಂಟು. ಆಸೀನ ಭಂಗಿಯಲ್ಲಿನ ಶ್ರೀಹರಿಯ ವಾಮಾಂಕದಲ್ಲಿ ಲಕ್ಷ್ಮೀ ಭಗ್ನ ಅವಸ್ಥೆಯಲ್ಲಿದ್ದ ಆಲಯವನ್ನು ಅಲ್ಲಿನ ಪೆರಿಯಾಳ್ವಾರರ ಹೆಸರಿನಲ್ಲಿ ಗುರುತಿಸುತ್ತಿದ್ದಂತೆ ಕಾಣುತ್ತದೆ. ಹಾಗೇಂದೇ ಇಲ್ಲಿನ ಎಲ್ಲ ಶಾಸನಗಳ ಸ್ಥಳ ನಿರ್ದೇಶನ ಮಾಡುವಾಗ ''ಪೆರಿಯಾಳ್ವಾರ್ ಆಲಯದ ಶಾಸನಗಳೆಂದೇ'' ಹೇಳಲಾಗಿದೆ. ಈ ಆಲಯ ಜೀರ್ಣೋದ್ಧಾರವಾಗಿ ನೂತನ ವಿಗ್ರಹಗಳ ಪ್ರತಿಷ್ಠಾಪನೆಯಾದಾಗ ಈ ಆಲಯದ ನಿರ್ಮಾಣ ಮೊದಲಿಗೆ ಕೃಷ್ಣದೇವರಾಯನಿಂದ ಆಯಿತೆಂದು ಹೇಳಲಾಗಿದೆ. ಆಲಯದ ಶಿಲ್ಪಕಲೆ, ಚಿತ್ರಕಲಾ ವಿನ್ಯಾಸಗಳು ನೋಡುಗರನ್ನು ಸೆಳೆಯುತ್ತದೆ.

ಪಾದಮಂಟಪದಲ್ಲಿ ಶ್ರೀವೆಂಕಟೇಶ್ವರ ಸ್ವಾಮಿಯ ವಿಗ್ರಹವನ್ನು ನೋಡಬಹುದು. ಶನಿವಾರ ಅಭಿಷೇಕ ದರ್ಶನ ಮಾಡಬಹುದು. ಇಲ್ಲಿ ವೆಂಕಟೇಶ್ವರ ಸ್ವಾಮಿಯ ತಿರುಪಾದವನ್ನು ದರ್ಶಿಸಬಹುದು. ಶುಕ್ರವಾರ ಕವಚವಿಲ್ಲದೆ ನಿಜಪಾದದರ್ಶನ ಮಾಡಬಹುದು. ಯಾವುದೇ ದೇವಸ್ಥಾನಕ್ಕೆ ಮೊದಲು ಹೋದರು ಪಾದದಿಂದ ಕಿರೀಟದವರೆಗೆ ನೋಡಬೇಕು. ಇಲ್ಲಿ ಪಾದಗಳ ಮಂಟಪದಲ್ಲಿ ಪಾದುಕೆಗಳನ್ನು ತಲೆಯಮೇಲೆ ಇಟ್ಟು ಪ್ರದಕ್ಷಿಣೆ ಮಾಡಿದರೆ ಅವರ ಎಲ್ಲ ಪಾಪಗಳು ಹೋಗಿ ಹಾಗೂ ಅವರ ಇಚ್ಛೆಗಳು ನೆರವೇರುತ್ತದೆ. ಆ ಕಲಿಯುಗ ಶ್ರೀನಿವಾಸನು ಈ ಪಾದಗಳ ಮಂಟಪದಲ್ಲಿ ಇದು ನಮಗೆ ಸಿಕ್ಕ ಭಾಗ್ಯ ಎಂದು ಹೇಳಬಹುದು. ಇದಕ್ಕೆ ಒಂದು ನಿದರ್ಶನವನ್ನು ನೋಡಬಹುದು, ಭರತನು ರಾಮನ ಪಾದುಕೆಗಳನ್ನು ತನ್ನ ತಲೆಯ ಮೇಲೆ ಪಾದಗಳನ್ನು ಇಟ್ಟುಕೊಂಡು ಹೇಗೆ ಭಕ್ತಿಯನ್ನು ತೋರಿಸುತ್ತಾನೆಯೋ ಅದೇ ರೀತಿ ಭಕ್ತರು ತಮ್ಮ ಇಚ್ಛೆಗಳನ್ನು ತೀರಿಸಲು ಈ ಪಾದಮಂಟಪದಲ್ಲಿ ತಮ್ಮ ತಲೆಯ ಮೇಲೆ ಪಾದಗಳನ್ನು ಇಟ್ಟುಕೊಂಡು ಪ್ರದಕ್ಷಿಣೆ ಮಾಡಿದರೆ ಆ ಸ್ವಾಮಿಯು ಭಕ್ತರ ಎಲ್ಲಾ ಬೇಡಿಕೆಗಳನ್ನು ನೆರವೇರಿಸುತ್ತಾನೆಂದು ಪ್ರತೀತಿ ಇದೆ.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ



**ಕಳೆದ ಸಂಚಿಕೆಯಿಂದ**

ಹೀಗೆ ರಾಮಾನುಜ ದಿವ್ಯಾಜ್ಞೆಗಳು ಉತ್ತರೋತ್ತರವಾಗಿ ಸಾಗುತ್ತಿರುವ ಪ್ರಾಚೀನ ಕಾಲದಲ್ಲಿ -

ಶ್ರೀಭಗವದ್ರಾಮಾನುಚಾರ್ಯರು ಅವತಾರ ಸಮಾಪ್ತಿಯನ್ನು ಒಬ್ಬ ಶ್ರೀವೈಷ್ಣವರು ಬಂದು ಹೇಳಲು ಅನಂತಾರ್ಯರು ಕೇಳಿ ಮನಸ್ಸು ಕರಗಿ ಒಂದು ವರ್ಷದ ಕಾಲ ಶ್ರೀನಂದನವನದ ಕೈಂಕರ್ಯವನ್ನು ಉಪೇಕ್ಷಿಸಿ ಶ್ರೀವೇಂಕಟಾಚಲಪತಿಯ ಮೇಲೆ ತಟಸ್ಥಭಾವವನ್ನು ಹೊಂದಿರಲು ಶ್ರೀನಿವಾಸನು ಶ್ರೀಅನಂತಾರ್ಯರಿಗೆ ಮಂಗಳಶಾಸನವನ್ನು ಮಾಡಿ !! ಓಯ್! ಅನಂತಾರ್ಯ ಭಗವದ್ರಾಮಾನುಜರನ್ನು ಕಳೆದುಕೊಂಡದ್ದು ನಾವಲ್ಲವೇ? ನಿನಗೆ ನಾವಿಲ್ಲವೇ? ನಿನಗೇನಾಗುವುದಿಲ್ಲ ಎನ್ನಲು ಶ್ರೀಪಾದದ ಶ್ರೀಶಠಗೋಪವೇ ಮೊದಲಾದ ಮರ್ಯಾದೆಗಳನ್ನೆಲ್ಲಾ ಮಾಡಿಸಿ"ನಿಮ್ಮ ಅಭಿಮತಕ್ಕನುವಾದವರನ್ನೇ ನಾವು ನೇಮಿಸುವೆವು" ಎಂದು ಹೇಳಿದ ನಂತರವೇ ಅನಂತಾರ್ಯರರ ಮನಸ್ಸು ಕಳವಳಗೊಂಡು ಶ್ರೀವೇಂಕಟೇಶನ ಶ್ರೀಮುಖ ಮಂಡಲವನ್ನು ಸೇವಿಸಿ, "ದೇವದೂತರಾದ ಶ್ರೀಭಗವದ್ರಾಮಾನುಜಾಚಾರ್ಯರ ವಿಷಯದಲ್ಲಿ ನಮ್ಮ ಭಿನ್ನಪವನ್ನು ಕೇಳಿ ತಾವು ಅನುಗ್ರಹಿಸುವುದು" ಎಂದು ಅನಂತಾರ್ಯರು ಹೇಳಲು ವೇಂಕಟೇಶ್ವರನು ಹಾಗೆ ಹೇಳುತ್ತಿರಲು ಅನಂತಾರ್ಯರು "ತಮಸಃ ಪರಮೋದಾತಾ ಶಂಖಚಕ್ರಗದಾಧರಃ ಎಂಬ ಪ್ರಶಸ್ತಿಯಂತೆ ಪರ್ವತ ಚಿನ್ಹವಾದ ಶ್ರೀಸುದರ್ಶನ ಪಾಂಚಜನ್ಯಗಳಿಗೆ ಆಶ್ರಿತನಾದ ವಿಷಯವನ್ನು ಕೇಳಿ ಸಂತೋಷಿಸಿ ಪ್ರಸಾದಿಸಿದ ಮಹೌದಾರ್ಯವನ್ನು ತಿಳಿಯದೇ ಅನ್ಯಥಾ ಅಹಂಭಾವದಿಂದ ನಾಶ ಹೊಂದುವ ಲೋಕದಲ್ಲೆಲ್ಲರಿಗೆ ನಿಮ್ಮ ವಿಷಯವು ತಿಳಿಯದೆ ಪರಾತ್ಪರವಾದ ಗರ್ವದಿಂದ ಅವರು ಜೀವಿಸಬೇಕೆಂದೇ ಶ್ರೀಸುದರ್ಶನ ಪಾಂಚಜನ್ಯಗಳನ್ನು ಶ್ರೀಹಸ್ತಗಳಲ್ಲಿ ಧರಿಸಿ, ಅನುಗ್ರಹಿಸಿ ಸಂಕಲ್ಪಿಸಿದ ತಮ್ಮ ವಿಷಯವಾದ ನಿರ್ಗುಣತ್ವಾದಿ ದೋಷಗಳನ್ನು ಹೇಳಿದ ವೇದಬಾಹ್ಯರೂ, ಕುದೃಷ್ಟರೂ, ಮಣ್ಣು ಮೆತ್ತಿರುವಂತೆ, ದೇವರ ದೂತರು ಸಕಲ ಜಗತ್ಕಾರಣಭೂತರೆಂಬ, ಸಕಲ ಕಲ್ಯಾಣ ಗುಣಾಧಿಕರು, ಅಪ್ರಾಕೃತ ದಿವ್ಯಮಂಗಳ ವಿಶಿಷ್ಟವಾದ, ಸಕಲ ಕಲ್ಯಾಣ ಗುಣಾತ್ಮಕನೆಂದೂ, ಉಭಯ ವಿಭೂತಿ ನಿರ್ವಾಹಕನೆಂದೂ, ಮೋಕ್ಷಪ್ರದನೆಂದೂ, ನಿತ್ಯ ಮುಕ್ತಾ

ನುಭಾವ್ಯನೆಂದೂ,ವೇದಾಂತಗಳಲ್ಲಿ (ಉಪನಿಷತ್ತು) ಪ್ರಸಿದ್ಧವಾದ ಅರ್ಥವನ್ನೆಲ್ಲರೂ ತಿಳಿದು ಉದ್ಧಾರವಾಗಲು ಶ್ರೀಭಾಷ್ಯವನ್ನು ಪ್ರಸಾದಿಸಿ ಜಗತ್ತನ್ನು ರಕ್ಷಿಸುವ ಮಹೋಪ ಕರ್ತೃವಾದ ಶ್ರೀಭಗವದ್ರಾಮಾನುಜರ ವಿಷಯದಲ್ಲಿ 'ಇರಾಮಾನುಜನೂತ್ತಂದಾದಿಯನ್ನು ಅಧ್ಯಯನೋತ್ಸವಾ ನಂತರದಲ್ಲಿ ಪ್ರತ್ಯೇಕವಾಗಿ ಒಂದು ದಿನ ದೇವದೂತರ ಕೇಳಿ ಆನಂದಿಸುವರು' ಎಂದು ಬೇಡಿಕೊಂಡರು.

ಶ್ರೀವೇಂಕಟೇಶ್ವರಸ್ವಾಮಿ ಅದನ್ನು ಕೇಳಿ ಸಂತುಷ್ಟಾಂತರಂಗರಾಗಿ "ನಮ್ಮ ಶಠಗೋಪುರಭೂಷಿತ ಪ್ರಿಯವಾದ ಪ್ರಬಂಧಗಳಿಂದಲೇ ನಮ್ಮ ರಾಮಾನುಜ ವಿಷಯದ ಪ್ರಬಂಧಗಳು ಸಹಾ ನಮ್ಮ ಎದುರೇ ಅನುಸಂಧಾನ ಮಾಡುವುದು ಎಂದು ಅಣತಿಯಿತ್ತರು. ಅನಂತಾರ್ಯರು ಇದನ್ನು ಕೇಳಿ ಮಿಗಿಲಾಗಿ ಹರ್ಷಿಸಿ "ಕಣ್ಣಿನುಣ್ ಸಿರುತ್ತಾಂಬು" ಯನ್ನು ಅನುಸಂಧಿಸಿದ ಮರುದಿನ ರಾಮಾನುಜಾ ನೂತ್ತಂದಾದಿಯನ್ನು ಸನ್ನಿಧಿಯಲ್ಲಿ ಅನುಸಂಧಿಸುವಂತೆ ಸಂಕಲ್ಪಿಸಿ, ಅದನ್ನು ಮಾರನೇಯ ದಿನ ಭಗವದ್ರಾಮಾನುಜರ ನಿಯಮದ ಪ್ರಕಾರವಾಗೇ ಶ್ರೀಶೈಲಪೂರ್ಣರೊಡಗೂಡಿ ತೀರ್ಥಾಭಿಗಮನೋತ್ಸವ ಕೈಂಕರ್ಯವನ್ನೂ ಸಹಾ ನಡೆಸುವಂತೆ ನೇಮಿಸಿ ದಿವ್ಯಸೂರರು ತಿರುಮಲೆ ಬೆಟ್ಟವನ್ನು ಹತ್ತಿ, ಮಂಗಳಾಶಾಸನವನ್ನು ಮಾಡದೇಯಿರುವ ಲೋಪವಾಗದಂತೆ ಭಗವದ್ರಾಮಾನುಜರನ್ನು ತಿಳಿಸಲು ಕಲಿಕಾಲ ದೋಷದಿಂದಾಗಿ ವೃದ್ಧಿಯಾಗುತ್ತಿರುವ ಬಾಹ್ಯಕುದೃಷ್ಟಿ ಸಿದ್ಧಾಂತವೇ ಮೊದಲಾದವು ನಶಿಸಿ ಹೋಗಬೇಕೆಂಬ ಅರಿವಿನೊಂದಿಗೆ ಶ್ರೀವೇಂಕಟಾಚಲಪತಿ ಆಜ್ಞೆಯನ್ನು ಸಕೋರಿ, ನಂತರ ಶ್ರೀಭಗವದ್ರಾಮಾನುಜಾಚಾರ್ಯರ ವಿಗ್ರಹಪ್ರತಿಷ್ಠೆಯನ್ನು ಮಾಡಿಸಿ ಅವರ ಪಾದಗಳಿಗೆ (ಶಠಗೋಪವಂತಹುದು) ತಮ್ಮ ನಾಮಧೇಯವಾದ (ಆನಂದಾಳ್ವಾನ್) ಹೆಸರುಯಿಟ್ಟು, ಹೀಗೆ ಶೇಷಾದ್ರಿಯ ಮೇಲೆ ಅನೇಕ ಶ್ರೀವೈಷ್ಣವಧರ್ಮಗಳನ್ನು ಪ್ರವರ್ತನೆಗೊಳಿಸಿ 'ರಾಮಾನುಜಾಚಾರ್ಯದಿವ್ಯಾಜ್ಞಾವರ್ಧತಾಮಭಿವರ್ಧಾತ್' (ಭಗವದ್ರಾಮಾನುಜಾಚಾರ್ಯರ ದಿವ್ಯಾಜ್ಞ ಕಾರ್ಯಗತವಾದುದಲ್ಲದೇ, ಎಲ್ಲವೂ ವೃದ್ಧಿಯಾಗಲಿ) ಎಂದು ಹೇಳಲು, ಭಗವದ್ರಾಮಾನುಜರ ಆಜ್ಞೆಯಲ್ಲಿ ಹೇಳಿದಂತೆ ಶ್ರೀವೇಂಕಟಾಚಲ ವೈಭವವು ಪ್ರತಿದಿನದಲ್ಲಿ ಸುಸ್ಥಿರವಾಗಿ ನಡೆಸುವಂತೆ ಮಂಗಳಾಶಾಸನಾಸಕ್ತರಾಗಿ ಶ್ರೀನಿವಾಸನ ವಿಷಯದಲ್ಲಿ ಗುಣಾನುಭವ ಕೈಂಕರ್ಯದಲ್ಲಿ ಲೋಪವುಂಟಾಗದಂತೆ ಅನುಷ್ಠಾನ ಮಾಡಿ ಸುಖವನ್ನು ಹೊಂದಿದ್ದಾರೆ.

ಶ್ರೀಮಣವಾಳ ಮಹಾಮುನಿಗಳು ಶ್ರೀಚರಣವನ್ನು ಆಶ್ರಯಿಸಿದ ಶ್ರೀರಾಮಾನುಜ ಸಿದ್ಧಾಂತ ಅನುಯಾಯಿಗಳಾದ ಅಷ್ಟದಿಗ್ಗಜರ (ಉದ್ದಂಡ ಪಂಡಿತರು) ನಾಮಧೇಯವಾಯಿತು.

ವಾನಾದ್ರಿಯೋಗಿವರ ವೇಂಕಟಯೋಗಿವರ್ಯ
ಶ್ರೀ ಭಟ್ಟನಾಥಮುನಿ ವಾದಿಭಯಂಕರಾರ್ಯಃ
ರಾಮಾನುಜಾರ್ಯ ವರದಾರ್ಯನತಾರ್ತಿಹರಿ
ಶ್ರೀದೇವರಾಜ ಗುರುವ್ಪೋಽಷ್ಟದಿಶಾಗಜಾಸ್ತೇ

(ವಾನಾದ್ರಿಯೋಗಿವರರು (ವನಮಾಮಲೈ ಜೀಯ್ಯರ್ ) ವೇಂಕಟಯೋಗಿವರ್ಯರು (ತಿರುವೇಂಗಡ ರಾಮಾನುಜ ಜೀಯ್ಯರ್),ಶ್ರೀಭಟ್ಟನಾಥ ಮುನಿಗಳು (ಪರವಸ್ತು ಭಟ್ಟರ್ ಪಿರಾನ್ ಜೀಯ್ಯರ್) ವಾದಿ ಭಯಂಕರಾರ್ಯರು (ಪ್ರತಿವಾದಿ ಭಯಂಕರ ಅಣ್ಣಾ),ರಾಮಾನುಜಾಚಾರ್ಯರು (ಅಪ್ಪಿಳ್ಳೈ) ವರದಾರ್ಯರು (ಕೋಯಿಲ್ ಕಂದಾಡೈ ಅಣ್ಣನ್)ಪ್ರಣತಾರ್ತಿಹಾರರು, (ಕಿಡಾಂಬಿ ಅಪ್ಪುಳ್ಳಾನ್) ಶ್ರೀದೇವರಾಜ ಗುರುಗಳು (ಎರುಂಬಿಯಪ್ಪಾ). ಪೂರ್ವಕಾಲದಲ್ಲಿ ವಿಷಯ ಭೋಗವಿರಕ್ತರಿಗೆ ಬ್ರಾಹ್ಮಣರೆಂದು ಪರಿಗಣಿಸಬೇಕೆಂದು ಶ್ರೀರಂಗಮುನಿ ಹೇಳಿದಂತೆ ಪರಮೇಕಾಂತರಿಗೆ ಆವಾಸ ಭೂಮಿಯಾದ ಶ್ರೀರಂಗದಿವ್ಯಕ್ಷೇತ್ರದಲ್ಲಿ ನಿತ್ಯನಿವಾಸಿಯಾದ ಶ್ರೀರಂಗನಾಥಸ್ವಾಮಿ ಶ್ರೀಪಾದಗಳಲ್ಲಿ ಅಚಂಚಲಭಕ್ತಿಯಿಂದ "ಆಳ್ವಾರರೈಯರ್"ಎಂಬ ಪ್ರಬಂಧಗಾಯಕರು ಒಂದಾನೊಂದು ಸಮಯದಲ್ಲಿ ತಿರುಮಲೆಯಾತ್ರೆ ಮಾಡಬೇಕೆಂದು ಬೆಟ್ಟದ ಮೇಲೆ ಜಯಮಾಡಿ ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನಮಾಡಿ, ಸಮಸ್ತಾನುಷ್ಠಾನಗಳನ್ನು ಮಾಡಿ, ಜ್ಞಾನ ವರಾಹಸ್ವಾಮಿಗೆ ಮುಂಭಾಗದ ಮಹಾದ್ವಾರಕ್ಕೆ 'ಆವಾವರಿಚ್ಚಾಳ್‌ನ್ದಾನ್' ಎಂದು ಶ್ರೀದ್ವಾರವನ್ನು ಸೇವಿಸಿ, ಒಳಗಿರುವ ಜನಿಶ್ರೀತಿಂತ್ರಿಣಿ ವೃಕ್ಷಕ್ಕೆ, ಶ್ರೀರಂಗನಾಥಸ್ವಾಮಿ ಮಂಟಪವನ್ನು ಸಹಾ ಸೇವಿಸಿ ಶ್ರೀಬಲಿಪೀಠದ ಮುಂದೆ ನಿಂತು ಚಾರಂಪ್ರಣಾಮಗಳನ್ನು (ಆರ್ತನು, ಜಿಜ್ಞಾಸುನು, ಅರ್ಥ ಕಾಯಮ, ಜ್ಞಾನಿ ಎಂಬ) ಚತುರ್ವಿಧ ಪುರುಷಾರ್ಥಗಳ ಆಶ್ರಿತರನ್ನು ಆಶೀರ್ವಾದಿಸಿದ ಮಾನಸಿಕಹ್ಲಾದಗಳಿಂದ ಒಳಗೆ ಪ್ರವೇಶಿಸಿ ಪಾಕಶಾಲೆಯಲ್ಲಿ ಪಾಕಶಾಲಾ ನಿರ್ವಾಹಕರಿಗೆ ನಮಸ್ಕರಿಸಿ ಶ್ರೀಮಹಾಮಣಿ ಮಂಟಪಕ್ಕೆ ಹೋಗಿ "ಆನಂದಮಯಾಯ ಮಂಟಪರತ್ನಾಯ ನಮಃ" (ಆನಂದಮಯನಾದ ಮಂಟಪ ರತ್ನಕ್ಕೆ ನಮಸ್ಕಾರವು ಎಂದು,

**ಮುಂದುವರೆಯುತ್ತದೆ.**

# ಶ್ರೀ ವೆಂಕಟಾಚಲ ಮಹಾತ್ಮ್ಯ


ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್

ಅನುವಾದ – ಶ್ರೀಮತಿ. ಎಸ್. ಪಾರ್ವತಿ

ಹಿಂದಿನ ಸಂಚಿಕೆಯ ನಂತರ.....

ಹರಿಯು ಬ್ರಹ್ಮರ್ಷಿ ಮುಖ್ಯಸ್ಥರನ್ನು ಕರುಣೆಯಿಂದ ನೋಡುತ್ತಾ -

ವನಜಗರ್ಭಾ! ಯಾವ ಕಾರ್ಯದ ನಿಮಿತ್ತ ನೀನು ಇಲ್ಲಿಗೆ ಬಂದಿರುವೆ? ವಿವರವಾಗಿ ಹೇಳು ಎಂದು ಅಣತಿ ಮಾಡಿದರು. ಬ್ರಹ್ಮನು ಕೈಮುಗಿಯುತ್ತಾ, ದೇವದೇವಾ! ದೀನ ರಕ್ಷಕ! ದಯವಿಟ್ಟು ನಮ್ಮ ಮನವಿಯನ್ನು ಆಲಿಸಿ, ವಿಶ್ರವಃನ ಮಗನಾದ ರಾವಣನು ತನ್ನ ತಪಸ್ಸು ಮುಂದುವರೆಸಿ, ಸುರರು, ಯಕ್ಷ, ಗರುಡ, ಗಂಧರ್ವರಿಂದ ತಾನು ಹತನಾಗದಂತೆ ವರ ಪಡೆದಿರುತ್ತಾನೆ. ನಾನು ಕೂಡಾ ಸರಿ ಎಂದು ಅನುಗ್ರಹಿಸಿದ್ದೇನೆ. ಆತ್ಮರಕ್ಷಣೆಗಾಗಿ ನೀಡಿದ ವರವನ್ನು ರಾವಣನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾನೆ. ಅವನು ಅಹಂಕಾರದಿಂದ ತನ್ನನ್ನು ಎದುರಿಸುವವರಾರು ಇಲ್ಲವೆಂದು ಬೀಗುತ್ತಿದ್ದಾನೆ. ಶ್ರೀಶೈಲ ಪ್ರದೇಶದಲ್ಲಿನ ಮುಗ್ಧ ಸಂತರನ್ನು ಹಿಂಸಿಸಲು ಪ್ರಾರಂಭಿಸಿದ್ದಾನೆ.



"ಸ್ವಾಮೀ ! ರಾವಣನು ದೇವತೆಗಳಿಗೆ ಹೆದರಿ ಅವರಿಂದ ಸಾವು ಬರಬಾರದೆಂದು ವರ ಪಡೆದಿದ್ದಾನೆ. ಆದರೆ ಮನುಷ್ಯರು ತನ್ನನ್ನು ಏನೂ ಮಾಡಲಾಗುವುದಿಲ್ಲ ಎಂಬ ಧೈರ್ಯದಿಂದ ಮನುಷ್ಯರಿಂದ ಮರಣ ಬರಬಾರದೆಂದು ಕೇಳಲಿಲ್ಲ. ಬೀಗುತ್ತಿರುವ ರಾವಣ ಅಂತ್ಯ ಕಾಲದಲ್ಲಿ ಒಬ್ಬ ಸಾಮಾನ್ಯ ಮನುಷ್ಯನಿಂದ ಸಾಯುತ್ತಾನೆ ಎಂದು ಭಾವಿಸಿದ್ದೆ."


ಬ್ರಹ್ಮನ ಮಾತು ಕೇಳಿದ ಹರಿಯು ಅಗಸ್ತ್ಯರನ್ನು ಕಂಡು ಮುನಿಗಳೇ ! ನೀವೆಲ್ಲರೂ ಇಲ್ಲಿಗೆ ಏಕೆ ಬಂದಿದ್ದೀರಿ ಎಂದು ಕೇಳಿದರು. ಅಗಸ್ತ್ಯರು ಕಮಲಾಕ್ಷನನ್ನು ಸುತ್ತಿಸುತ್ತಾ ಭಗವಂತ ದಶಶಿರವುಳ್ಳ ಅತ್ಯಂತ ಮೂರ್ಖನಾದ ರಾವಣನು ಮನುಷ್ಯರನ್ನು ಅನೇಕ ವಿಧಗಳಲ್ಲಿ ಪೀಡಿಸುತ್ತಿದ್ದಾನೆ. ಭೂಲೋಕದಲ್ಲಿನ ಮನುಷ್ಯರ ನರಳಾಟವನ್ನು ನೋಡಲಾಗಿದೆ. ನಿಮ್ಮೊಂದಿಗೆ ಬಿನ್ನವಿಸಲು ಇದೊಂದು ಸದವಕಾಶ ಎಂದು ಚತುರ್ಮುಖನೊಂದಿಗೆ ನಾವೂ ಬಂದಿದ್ದೇವೆ.

"ಸ್ವಾಮಿ! ಪಂಕ್ತಿಕಂಠನನ್ನು ವಧಿಸಿ ಪ್ರಜೆಗಳನ್ನು ರಕ್ಷಿಸು. ಲೋಕರಕ್ಷಣೆಯನ್ನು ಆಶಿಸುವ ನಮ್ಮಂಥವರನ್ನು ಕರುಣಿಸು" ಎಂದು ಪ್ರಾರ್ಥಿಸಿದಾಗ ಹರಿ ಮುಗುಳ್ನಗುತ್ತಾ ಸನಕಸನಂದರನ್ನು ನೋಡುತ್ತಾ ನೀವು ಯಾವ ಕೆಲಸದ ಮೇಲೆ ಬಂದಿದ್ದೀರಾ? ನೀವು ಆದಿಯೋಗಿಗಳು, ಸದಾನಂದ ಸ್ವರೂಪರು ಅಂತಹವರು ಇಲ್ಲಿಗೆ ಬರಲು ಕಾರಣವೇನು ಎಂದು ಪ್ರಶ್ನಿಸಿದರು.

ಸ್ವಾಮಿ! ಅಂತರಂಗದಲ್ಲಿನ ಸುಜ್ಞಾನ ನೇತ್ರಗಳಿಂದ ಸದಾ ದರ್ಶಿಸುತ್ತಿದ್ದ ನಿಮ್ಮನ್ನು ಕಮನೀಯಕಾರನನ್ನು ಕರ್ಮಚಕ್ಷುಗಳು ಹೇಗೆ ದರ್ಶಿಸುತ್ತವೆ ಎಂದು ನೋಡಲು ಬಂದಿದ್ದೇವೆ ಎಂದರು.ಹರಿ ಅಲ್ಲಿ ನಿಲ್ಲದೆ ದೇವೇಂದ್ರನಿಗೆ ನಿನ್ನ ಬರುವಿಕೆಗೆ ಕಾರಣವೇನು ಎಂದು ಕೇಳಿ ದನು.

ನಿರ್ಮಲಾತ್ಮ! ಮಾಧವ! ಬ್ರಹ್ಮ, ಅಗಸ್ತ್ಯಾದಿ ಮುನಿಗಳು ಮನವಿ ಮಾಡಿದಂತೆ ರಾವಣನು ತನ್ನ ಇಚ್ಛಾನುಸಾರ ವಿಹಾರ ಮಾಡುತ್ತಾ ತನ್ನನ್ನು ಎದುರಿಸುವವರು ಇಲ್ಲವೆಂದು ಬೀಗುತ್ತಾ ಶ್ರೀ ಶೈಲ ಕ್ಷೇತ್ರಗಳಲ್ಲಿ ಮುನಿಗಳನ್ನು ಮತ್ತು ಮನುಷ್ಯರನ್ನು ವಿವಿಧ ರೀತಿಯಲ್ಲಿ ಪೀಡಿಸುತ್ತಿದ್ದಾನೆ. ರಾಕ್ಷಸನನ್ನು ಮಣಿಸುವವರು ಯಾರೂ ಇಲ್ಲ ಎಂದು ಸ್ವರ್ಗಾಧಿಪತಿ ದೇವೇಂದ್ರನು ಎಂದನು.





ಉಡುಪಿ ಕೃಷ್ಣ ಹಾಗೂ ತಿರುಮಲೆಯ ತಿಮ್ಮಪ್ಪನ ಮೇಲೆ ಅಪಾರ ಭಕ್ತಿ ಕುಸುಮಗಳನ್ನು ಆದಿ ಕೇಶವನ ಅಂಕಿತದಲ್ಲಿ ಅರ್ಪಿಸಿದ್ದಾರೆ. ಅವರು ತಿರುಮಲೇಶನನ್ನು ಕುರಿತು 'ಎಲಾ ತಿರುಮಲೇಶ, ನೀನು ವೆಂಕಟೇಶ, ನಿನ್ನ ನಾಮಸ್ಮರಣೆಯಿಂದ ನಾನು ಬದುಕುವೆನು' ಎಂದಿದ್ದಾರೆ. ಮುಂದುವರಿಯುತ್ತಾ, "ಬಂದೆವಯ್ಯಾ ಗೋವಿಂದ ಶೆಟ್ಟಿ, ನಿಮ್ಮ ಹರಿವಾಣ ನೈವೇದ್ಯ ಪ್ರಸಾದಕ್ಕಾಗಿ" ಎನ್ನುವರು. ಶೇಷಾಚಲವಾಸಿಯಾದ ನೀನು ಹೆಸರಾಂತ ಶೆಟ್ಟಿ. ನೀನು ಕಾಸು ಕಾಸಿಗೆ ಬಡ್ಡಿ ಗಳಿಸುವ ಆದಿಕೇಶವ ನಾರಾಯಣ ತಿಮ್ಮಶೆಟ್ಟಿ ಎನ್ನುವರು. ಅಪ್ಪ ಅತಿರಸ, ಮುಂತಾದ ಭಕ್ಷಗಳನ್ನು ಹಾಗೂ ಅಪರೂಪದ ಕಜ್ಜಾಯಗಳನ್ನು ಸರ್ವತ್ರ ಮಾರಿ ಧನ ಸಂಪಾದಿಸುವ ಆದಿಕೇಶವ ನಾರಾಯಣ ತಿಮ್ಮಶೆಟ್ಟಿ ಎಂದು ತನ್ನ ಆರಾಧ್ಯ ದೈವ ಶ್ರೀವೆಂಕಟೇಶನನ್ನು ಹಲವಾರು ನಾಮಗಳಲ್ಲಿ ಭಾವಪರವಶರಾಗಿ ಭಜಿಸಿ, ಕೊಂಡಾಡಿ, ಧನ್ಯರಾಗುತ್ತಾರೆ. ದುರುಳ ಕೌರವರನ್ನು ಶಿಕ್ಷಿಸಿ ಭಾವ



ಮೈದುನರಾದ ಪಂಚಪಾಂಡವರನ್ನು ರಕ್ಷಿಸಿ, ಭೂವಲಯದಲ್ಲಿ, ಕೀರ್ತಿಯಿಂದ ಮೆರೆವ ದೇವ ನೆಲೆಯಾದಿಕೇಶವ ವೆಂಕಟೇಶ ಎಂದು ಕೊಂಡಾಡುತ್ತಾ ಮಹಾಭಾರತದ ಸಾರಾಂಶವನ್ನು ಒಂದೇ ಶ್ಲೋಕದಲ್ಲಿ ಹೇಳುತ್ತಾರೆ. ನೀನು ಹಿರಣ್ಯಕಶಿಪುನನ್ನು ನರಸಿಂಹನಾಗಿ ಬಂದು ಹರಣ ಮಾಡಿರುವಿ. ನೀನು ಕರಿರಾಜ ರಕ್ಷಕನಾದ ಕಾರುಣ್ಯಮೂರ್ತಿಯಾಗಿರುವಿ. ನೀನು ಅಪ್ರಮೇಯನು. ಆದಿಕೇಶವ ಸಿರಿಧರ ಹರಿ ಶೇಷಗಿರಿ ವರತಿಮ್ಮರಾಯನು ನೀನು-ಎಂಬಲ್ಲಿ ಸಂಕ್ಷಿಪ್ತವಾಗಿ, ಹಿರಣ್ಯಕಶಿಪು ಸಂಹಾರ ಹಾಗೂ ಗಜೇಂದ್ರಮೋಕ್ಷದ ವಿಚಾರವನ್ನು ಶ್ರೀವೆಂಕಟೇಶನ ಹಿರಿಮೆ ಗರಿಮೆಗಳನ್ನೂ ಹತ್ತಾರು ಶಬ್ದಗಳಲ್ಲಿ ಬಾಯಿ ತುಂಬಾ ಬಣ್ಣಿಸುತ್ತಾರೆ.

**ಕನಕದಾಸರು**

ದೇವಾ! ನೀವೇ ಸಮರ್ಥರು. ನಾವು ಈಗಾಗಲೇ ಸಾಕಷ್ಟು ತೊಂದರೆ ಅನುಭವಿಸಿದ್ದೇವೆ. ನೀವು ರಾವಣನನ್ನು ತಡೆಯಬೇಕು. ಭೂಲೋಕವಾಸಿಗಳನ್ನು ಉಳಿಸಿ, ಮುನಿಗಳು ತಪಸ್ಸು ಮಾಡಲು ಅನುಕೂಲವಾಗುವಂತೆ ನೀಡುವ ನಿರ್ಧಾರ ಮಾಡಿ ನಮ್ಮಂತಹವರ ಮೇಲೆ ದಯೆ ತೋರಿ, ನಿಮ್ಮ ಸಾಮರ್ಥ್ಯ ನಮಗೆ ತಿಳಿದಿದೆ. ನೀವು ರಾವಣನನ್ನು ಸಂಹರಿಸಬಲ್ಲಿರಿ. ನಮ್ಮ ದುಃಖವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು, ನಾವು ನಿಮ್ಮ ದರ್ಶನಕ್ಕಾಗಿ ಎಲ್ಲೆಲ್ಲೋ ಅಲೆದಿದ್ದೇವೆ. ಅನ್ವೇಷಿಸಿದ್ದೇವೆ ಕೊನೆಗೆ ಇಲ್ಲಿ ನಿಮ್ಮ ದರ್ಶನಭಾಗ್ಯ ಸಿಕ್ಕಿದೆ.

ಸ್ವಾಮಿ ! ಸಾಮಾನ್ಯ ಜನರು ದರ್ಶಿಸಲಾಗದ ನಿಮ್ಮ ಪಾದಗಳನ್ನು ದರ್ಶಿಸುವ ಪುಣ್ಯ ಲಭಿಸಿತು. ಎಲ್ಲರ ಮೇಲೆ ಕರುಣೆ ತೋರಿ ರಾವಣನನ್ನು ಸಂಹರಿಸಬೇಕು ಎಂದು ದೈನ್ಯದಿಂದ ಪ್ರಾರ್ಥಿಸಿದರು.


ಸ್ವಾಮೀ ! ದಿವ್ಯ ಕ್ಷೇತ್ರಗಳಾದ ಕ್ಷೀರಸಾಗರ, ಶ್ರೀ ವೈಕುಂಠಗಳನ್ನು ತೊರೆದು ಶೇಷಪರ್ವತದಲ್ಲಿ ತಂಗಲು ಕಾರಣವೇನೆಂದು ತಿಳಿಯಲಾಗಿಲ್ಲ. ಮೇಲಾಗಿ ಈ ಪರ್ವತಗಳಲ್ಲಿ ಸಾಮಾನ್ಯ ಮನುಷ್ಯರ ಕಣ್ಣಿಗೆ ಕಾಣದೆ ವಿಹರಿಸುವುದರ ಔಚಿತ್ಯವನ್ನು? ಭೂಲೋಕದಲ್ಲಿ ರಾವಣನು ಅಟ್ಟಹಾಸದಿಂದ ಮೆರೆಯುತ್ತಿರುವುದಾದರೂ ಏಕೆ? ಸ್ವಾಮಿ ನಮ್ಮನ್ನು ಕ್ಷಮಿಸಿ, "ದುಷ್ಟ ಶಿಕ್ಷಣ ಶಿಷ್ಟರಕ್ಷಣೆ" ಮಾಡುವ ಸತ್ಕೀರ್ತಿಯನ್ನು ಹೊಂದಿರುವ ನೀವು ಮರೆತು ಹೋಗುವುದೆಂದರೇನು?

ಸ್ವಾಮೀ! ನೀವು ಕರ್ತವ್ಯಪರರು, ಸ್ಥಿತಿಕಾರಕರು ನಮ್ಮೆಲ್ಲರನ್ನು ರಕ್ಷಿಸಬೇಕು. ಪಂಕ್ತಿಕಂಠನನ್ನು ಸಂಹರಿಸಬೇಕೆಂದು ಪ್ರಾರ್ಥಿಸುತ್ತಿದ್ದವರನ್ನು ನೋಡಿದ ಸ್ವಾಮಿಯು-"ಓ ಬ್ರಹ್ಮಾದಿ ಪ್ರಮುಖರೇ ಎದೆಗುಂದಬೇಡಿ, ನಿಮ್ಮೆಲ್ಲರ ಕ್ಷೇಮ ಕಾಪಾಡುವುದು ನನ್ನ ಕರ್ತವ್ಯ. ನಾನು ನಿಮ್ಮನ್ನು ಖಂಡಿತವಾಗಿ ರಕ್ಷಿಸುತ್ತೇನೆ. ನಾನು ಸಹ ದುಷ್ಟದಾನವನ ಅಂತ್ಯಕ್ಕಾಗಿ ಕಾಯುತ್ತಿದ್ದೇನೆ. ಸಮುದ್ರವನ್ನು ದಾಟಿ ಈ ಗುಡ್ಡಗಳಲ್ಲಿ ಮತ್ತು ಕಾಡುಗಳಲ್ಲಿ ಕಾಲಿಟ್ಟ ಕ್ಷಣದಿಂದ ದಶಮುಖ ರಾಕ್ಷಸನನ್ನು ನಾಶಮಾಡಲು ಯೋಚಿಸುತ್ತಿದ್ದೇನೆ" ಎಂದು ಭರವಸೆ ನೀಡುತ್ತಿದ್ದಂತೆ, ಕೈಲಾಸವಾಸಿಯು ಅಲ್ಲಿಗೆ ಬಂದನು.

ಸ್ವಾಮಿ! ವೈಕುಂಠವನ್ನು ತ್ಯಜಿಸಿದಿರಿ, ಶೇಷಗಿರಿಯಲ್ಲಿ ನೆಲೆಸಿದ್ದೀರಿ, ಆದರೂ ಭೂಲೋಕವಾಸಿಗಳು ಇನ್ನೂ ನರಳಬೇಕೆ?

ಜನಸಾಮಾನ್ಯರು ರಾಕ್ಷಸರ ಬಾಧೆಗಳಿಂದ ಮುಕ್ತರಾಗಲು ತಾವು ಶೇಷಾದ್ರಿಯಲ್ಲಿ ಪ್ರತ್ಯಕ್ಷವಾಗಿ ನೆಲೆಸುವುದು ಒಳ್ಳೆಯದು. ನೀವಿದ್ದರೆ ರಾಕ್ಷಸರು ಈ ಕಡೆ ಸುಳಿಯುವುದಿಲ್ಲ. ಇದಲ್ಲದೆ, ಮಾನವರು ಆತ್ಮವಿಶ್ವಾಸದಿಂದ ನಿಮ್ಮ ಸೇವೆ ಮಾಡುತ್ತಿದ್ದಾರೆ. ಈ ಕಾರಣದಿಂದ ಈ ಸ್ಥಳವನ್ನು ಭೂಲೋಕವೈಕುಂಠ ಎಂದು ಪ್ರಖ್ಯಾತವಾಗುತ್ತದೆ. ನಾನು ನಿಮ್ಮಿಂದ ದೂರವಾಗದೇ ಭೂಲೋಕದಲ್ಲಿಯೇ ನೆಲೆಸುತ್ತೇನೆ. ನನ್ನ ವಾಸಕ್ಕೆ ಸೂಕ್ತ ಸ್ಥಳವನ್ನು ಸೂಚಿಸಿ, ನಾವಿಬ್ಬರೂ ಭೂವಾಸಿಗಳಾಗೋಣ ಎಂದನು.

**ಮುಂದುವರೆಯುತ್ತದೆ.**



# ಅಕ್ಟೋಬರ್ ತಿಂಗಳ ರಾಶಿ ಫಲಗಳು



ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎಸ್.ಎಸ್

**ಮೇಷ**

ಮನೋನೈರ್ಮಲ್ಯ, ಪತ್ನಿ-ಮಕ್ಕಳಿಂದ ಶುಭಾಷಯದ ಸ್ಥಿರಾಸ್ತಿ ಸಿದ್ಧಿ. ಅನೇಕ ಮೂಲಗಳಿಂದ ಆದಾಯ ಬೆಳವಣಿಗೆ ಸರ್ವ ಕಾರ್ಯಗಳಲ್ಲಿ ಅನುಕೂಲತೆ. ಶರೀರ ಸೌಖ್ಯ.ಮನೆ ವಾತಾವರಣ ಅನುಕೂಲಕರ.

**ವೃಷಭ**

ಕೆಲಸದೊತ್ತಡದಿಂದಾಗಿ ಕುಟುಂಬ ಸದಸ್ಯರೊಡನೆ ಸರಿಯಾಗಿ ಸಮಯ ಕಳೆಯದೇ ಹೋಗುವುದರಿಂದ ನಿರ್ವಹ ಣಾಲೋಪ ಮಸ್ತಿ, ವಿನೋದ, ಇತ್ಯಾದಿ ವಿಷಯಗಳಿಂದ ದೂರವಿರುವುದು ಒಳಿತು ಸಂಘಗಳಲ್ಲಿ ಗೌರವ, ಉದ್ಯೋಗ ವಿಷಯಗಳಲ್ಲಿ ಅನುಕೂಲ.

**ಮಿಥುನ**

ಉದ್ಯೋಗ ಜೀವನದಲ್ಲಿ ಸಮಸ್ಯೆಗಳು ವ್ಯಾಪಾರಸ್ಥರಿಗೆ ಅಧಿಕಾರಿಗಳಿಂದ ಒತ್ತಡ ಈ ಮಾಸದ ಆರಂಭದಲ್ಲಿ ಹೊಟ್ಟೆ ಸಂಬಂಧಿ ಸೋಂಕು. ಉತ್ತರಾರ್ಧದಲ್ಲಿ ಉಪಶಮನ. ಈ ಕಾಲದಲ್ಲಿ ವಿರೋಧಿಗಳ ಜಾಲಗಳಿಗೆ ತಿರು ಗೇಟು ಕೊಡುವಿರಿ.

**ಕರ್ಕಾಟಕ**

ಪ್ರತಿಕೂಲ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳದಿರುವಿಕೆ. ಅಹಂಕಾರಕ್ಕೆ ಗುರಿಯಾಗುವುದು. ಅಸಂಬದ್ಧವಾದುದನ್ನು ನೋಡುವ ಸಂದರ್ಭ. ಸ್ವತಃ ನೀವೇ ನಿರ್ಣಯಾಧಿಕಾರವನ್ನು ತ್ಯಜಿಸುವುದು ಕೋರಿಕೆಗಳು ನೆರವೇರಲಿವೆ. ಸಂಪತ್ತು-ಆಸ್ತಿ ವೃದ್ಧಿ.

**ಸಿಂಹ**

ವ್ಯಾಪಾರ ಲಾಭದಾಯಕವಾಗಿದೆ. ಎಲ್ಲಲಿಂದ ಉತ್ತಮ ವಾದ ಪ್ರೋತ್ಸಾಹವನ್ನು ಪಡೆಯುವಿರಿ. ಒಡಹುಟ್ಟಿದವರಿಂದ ಉತ್ತಮ ವಾತಾವರಣ. ಮಕ್ಕಳ ವಿಷಯಗಳು ಸಹಾ ಸಂತೋಷ ಮತ್ತು ಶುಭವಾರ್ತೆಯನ್ನು ತರುತ್ತವೆ.

**ಕನ್ಯೆ**

ಆತ್ಮ ವಿಮರ್ಶೆ ಮಾಡಿಕೊಂಡು ಪ್ರಶಾಂತವಾಗಿರಲು ಪ್ರಯತ್ನಿಸಬೇಕು. ಆರೋಗ್ಯದ ಕಡೆ ಸಹಾ ಶ್ರದ್ಧೆ ಅಗತ್ಯ ಶತ್ರುಗಳನ್ನು ತೊರೆಯುವುದು ಒಳಿತು. ಆಯುಧಗಳಿಂದ ಕೆಟ್ಟಸಹವಾಸಗಳಿಂದಾಗಿ ಮುಪ್ಪು ಎದುರು ಬರಬಹುದು.

**ತುಲಾ**

ಮಿತ್ರರೊಂದಿಗೆ ಆನಂದವಾಗಿ ಸಮಯ ಕಳೆಯುವ ಕಾಲ. ಕುಟುಂಬದಲ್ಲಿರುವ ವಂಶೋದ್ಧಾರಕರಿಗೆ ಅಭಯವನೀಯುವಿರಿ. ಗೃಹದಲ್ಲಿ ಮಂಗಳ ತೋರಣಗಳು, ಕುಟುಂಬ ವಾತಾವರಣ ಅನುಕೂಲಕರ. ಆರ್ಥಿಕ ಸಮತೋಲನೆ, ಆರ್ಥಿಕ ಅಭಿವೃದ್ಧಿ ಉಂಟಾಗಲಿದೆ.

**ವೃಶ್ಚಿಕ**

ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಿರಿ. ಗೃಹ ನಿರ್ಮಾಣ ಕಲೆತು ಬರಲಿದೆ. ಬಂಧು-ಮಿತ್ರರ ಸಮಾಗಮ. ವೃತ್ತಿಯಲ್ಲಿ ಲಾಭ ಅಖಂಡೈಶ್ವರ್ಯಗಳು ಒದಗಿ ಬರಲಿವೆ. ನೆನೆಸಿ ಕೊಳ್ಳುತ್ತಲೇ ಕಾರ್ಯಗಳು ಕೈಗೂಡುತ್ತವೆ.

**ಧನಸ್ಸು**

ಧೈರ್ಯ, ಛಲಗಳಿಂದ ಹಿಡಿದ ಕಾರ್ಯಸಿದ್ಧಿ, ಎಲ್ಲಾ ತರಹದ ಪ್ರಯತ್ನಗಳಲ್ಲಿಯೂ ಜಯವುಂಟಾಗಲಿದೆ. ಎಂತಹ ಕಾರ್ಯವನ್ನು ಸುಲಭವಾಗಿ ಸಾಧಿಸಿ ಕೊಳ್ಳುವಿರಿ. ಒಳ್ಳೆಯ ನಿಟ್ಟಿನಲ್ಲಿ ಹೆಸರನ್ನು ತಂದುಕೊಳ್ಳುವಿರಿ.

**ಮಕರ**

ಪ್ರಾರಂಭದಲ್ಲಿ ಅಧಿಕ ಖರ್ಚುಗಳು, ಕಿವಿ, ಮೂಗು, ಗಂಟಲು ವೈದ್ಯರ ಸಹಾಯ ಪಡೆಯಬೇಕಾಗಬಹುದು. ವಸ್ತ್ರಗಳು, ನಿತ್ಯೋಪಯೋಗಿ ಅಗತ್ಯಗಳ ಖರೀದಿ ಮಾಡುವಿರಿ. ಆಕಸ್ಮಿಕ ಧನಲಾಭಗಳುಂಟಾಗಲಿವೆ. ಶತ್ರುಗಳ ಕಾಟ ಸಹಾ ಬೆಳೆಯುವ ಸಾಧ್ಯತೆಯಿದೆ.

**ಕುಂಭ**

ನಿಮ್ಮ ಸಾಮಾಜಿಕ ಸ್ಥಿತಿ ವೃದ್ಧಿಯಾಗಲಿದೆ. ವಿಲಾಸಮಯಿ ಜೀವನ ನಡೆಸುವಿರಿ. ಮಕ್ಕಳ ವ್ಯವಹಾರಗಳು ಸಹ ಸರಾಗವಾಗಿ ನಡೆಯಲಿವೆ. ಅರಿವಿನ ನಿರ್ಧಾರಗಳನ್ನು ತೆಗೆದು ಕೊಳ್ಳುವ ಮೂಲಕ ಸ್ಫೂರ್ತಿಯಾಗಿರುವಿರಿ.

**ಮೀನ**

ಮಾನಸಿಕ ವೇದನೆ, ಎದೆ, ಉಸಿರಾಟದ ಸಮಸ್ಯೆ ಬರುವ ಸಾಧ್ಯತೆಯಿದೆ. ಕುಜನ ಅಷ್ಟಾರ್ಧಮ ಸಂಚಾರದ ಪ್ರಭಾವವನ್ನು ಅತಿಕ್ರಮಿಸಲು ಸುಬ್ರಮಣ್ಯ ಆರಾಧನೆ ಒಳಿತು. ಹೊಸ ಪ್ರಯತ್ನಗಳಿಂದ ದೂರವಿರಿ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

- ಡಾ. ಅನಸೂಯ ಎಸ್.ರಾಜೀವ್

### 1.ನವರಾತ್ರಿಯ ಅಂತರಾರ್ಥವೇನು?

**ಉತ್ತರ :** ಬಾಳಿನ ಸಂಕಷ್ಟಗಳ ನೋವುನರಳಾಟಗಳ, ಅಶಾಂತಿ ಗೊಂದಲಗಳ ಕತ್ತಲಿಗೆ ಕಾರಣರು ಒಂಭತ್ತು ಮಂದಿ ಆಂತರಿಕ ವೈರಿಗಳು, ಯಾರೆಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ, ಅಹಂಕಾರ, ಮಮಕಾರ, ಸಂಶಯ, ಈ ಒಂಭತ್ತು ಮಂದಿ ಆಂತರಿಕ ವೈರಿಗಳಲ್ಲಿ ಒಬ್ಬೊಬ್ಬರನ್ನು ಆ ಜಗನ್ಮಾತೆಯ ಪದತಲಕ್ಕೆ ಅರ್ಪಿಸುವುದೇ ನವರಾತ್ರಿಯ ಅಂತರಾರ್ಥ. ನವರಾತ್ರಿಯಲ್ಲಿ ಆದಿಶಕ್ತಿಯು ದುರ್ಗೆ, ಲಕ್ಷ್ಮಿ ಹಾಗೂ ಸರಸ್ವತಿ ರೂಪಗಳಲ್ಲಿ ಆರಾಧಿಸಲ್ಪಡುತ್ತಾಳೆ. ವಿಜಯದಶಮಿಯಂದು ನಮ್ಮ ಮನಸ್ಸಿನ ವಿಜಯದ ಸಂಕೇತವಾಗಿ ಆಚರಿಸಲ್ಪಡುವ ಹಬ್ಬವಾಗಿದೆ. ಲಕ್ಷ್ಮಿ ಎಂದರೆ ಸಂಪತ್ತು, ಸಮೃದ್ಧಿ, ಅದು ಆಂತರಿಕಸಮೃದ್ಧಿ. ಆಧ್ಯಾತ್ಮಿಕ ಜೀವನದಿಂದ ಮಾತ್ರ ಆಂತರಿಕಸಮೃದ್ಧಿ ಸಾಧ್ಯ. ಸದ್ಗುಣಗಳ ಭಂಡಾರವೇ ಲಕ್ಷ್ಮಿಯ ನಿಜವಾದ ರೂಪ. ಏಕೆಂದರೆ ನಮ್ಮ ಮನಸ್ಸಿನ ಅಶುದ್ಧಿಗಳು ನಷ್ಟವಾಗಲೆಂದು ನಂತರ ದೇವಿಲಕ್ಷ್ಮಿಯ ಆವಾಹನೆ ಮಾಡುತ್ತೇವೆ ಏಕೆಂದರೆ ನಮ್ಮ ಮನಸ್ಸು ಸದ್ಗುಣಗಳಿಂದ ಸಂಪನ್ನವಾಗಲಿ ಎಂದು ಕಡೆಯದಾಗಿ ಸರಸ್ವತಿಯನ್ನು ಆವಾಹಿಸುತ್ತೇವೆ. ಏಕೆಂದರೆ ನಮಗೆ ಆತ್ಮಜ್ಞಾನ ಉಂಟಾಗಲಿ ಎಂದು. ಈ ಮೂರರ ವಿಜಯ ಆದಾಗಲೇ ವಿಜಯದಶಮಿಯಾಗುತ್ತದೆ.

### 2. ನವರಾತ್ರಿಯಲ್ಲಿ ಆರಾಧಿಸುವ ನವದುರ್ಗಿಯರು ಯಾರು?

**ಉತ್ತರ:** ನವರಾತ್ರಿಯ ಮೊದಲನೇ ದಿನ ಶೈಲಪುತ್ರಿ ದುರ್ಗಿಯನ್ನು ಆರಾಧಿಸುತ್ತೇವೆ. ಆದಿಶಕ್ತಿಯು ದಕ್ಷನ ಮಗಳಾಗಿ ಜನಿಸಿ ಶಿವನನ್ನು ಮದುವೆಯಾಗಿದ್ದಳು. ದಕ್ಷನ ಮಾತಿನಿಂದ ಕುಪಿತಳಾಗಿ ಯೋಗಾಗ್ನಿಯಲ್ಲಿ ಭಸ್ಮವಾಗಿ ಮುಂದಿನ ಜನ್ಮದಲ್ಲಿ ಹಿಮವಂತನ ಪುತ್ರಿಯಾಗಿ ಜನಿಸಿದಳು. ಶೈಲಪುತ್ರಿ ಎಂದೆನಿಸಿದಳು. ಎರಡನೆಯ ದಿನ ಬ್ರಹ್ಮಚಾರಿಣಿ ದುರ್ಗಿಯ ಆರಾಧನೆ ಮಾಡಬೇಕು. ದೇವಿ ಪಾರ್ವತಿಯು ಶಿವನನ್ನು ಪತಿಯಾಗಿ ಪಡೆದುಕೊಳ್ಳಲು ಬಹಳ ವರ್ಷ ಕಠಿಣ ತಪಸ್ಸನ್ನು ಮಾಡಿದಳು. ಇಂತಹ ದುಷ್ಕರ ತಪಸ್ಸಿನ ಕಾರಣ ಇವಳನ್ನು ಬ್ರಹ್ಮಚಾರಿಣಿ ಎಂದು ಕರೆಯಲಾ ಯಿತು. ಮೂರನೆಯ ದಿನ ಚಂದ್ರಘಂಟಾ ದುರ್ಗಿಯನ್ನು ಆರಾಧಿಸುತ್ತೇವೆ. ಮಹಾಗೌರಿಯು ಶಿವನನ್ನು ಮದುವೆಯಾದ ಮೇಲೆ ಅವಳ ಮಸ್ತಕದಲ್ಲಿ ಗಂಟೆಯ ಆಕಾರದ ಅರ್ಧಚಂದ್ರನಿದ್ದಾನೆ. ಇದರಿಂದಲೇ ಅವಳನ್ನು ಚಂದ್ರಘಂಟಾದೇವಿ ಎಂದು ಹೇಳಲಾಗಿದೆ. ನಾಲ್ಕನೆಯ ದಿನ ಕೂಷ್ಮಾಂಡಾ ದುರ್ಗಿಯ ಆರಾಧನೆ ಮಾಡಲಾಗುತ್ತದೆ. ಕು ಎಂದರೆ ಸ್ವಲ್ಪ. ಉಷ್ಮ ಎಂದರೆ ಬಿಸಿ, ಅಂಡ ಎಂದರೆ ಅಂತರಿಕ್ಷೀಯ ಮೊಟ್ಟೆ. ಅಂದರೆ ಬ್ರಹ್ಮಾಂಡದ ಸೃಷ್ಟಿಕರ್ತಳು. ಸೃಷ್ಟಿಯ ಮೊದಲಲ್ಲಿ ಎಲ್ಲೆಲ್ಲೂ ಕತ್ತಲಿದ್ದು ತಾಯಿಯು ಸೂರ್ಯ ಮಂಡಲದಲ್ಲಿದ್ದು ಎಲ್ಲೆಲ್ಲೂ ಬೆಳಕು ಹರಿಸಿದಳು. ನವರಾತ್ರಿಯ ಐದನೆಯ ದಿನ ಸ್ಕಂದಮಾತಾ ದುರ್ಗಿಯನ್ನು ಆರಾಧಿಸಬೇಕು. ದೇವಿಯು ಕುಮಾರ ಕಾರ್ತಿಕೇಯನಿಗೆ ಜನ್ಮಕೊಟ್ಟಿದ್ದರಿಂದ ಸ್ಕಂದಮಾತಾ ಎಂಬ ಹೆಸರು ಬಂತು. ಇವಳನ್ನು ಆರಾಧಿಸುವವರ ಮನಸ್ಸು ವಿಶುದ್ಧ ಚಕ್ರದಲ್ಲಿ ನೆಲೆಗೊಂಡು ಐಹಿಕ ಬಂಧನದಿಂದ ಮುಕ್ತನಾಗುತ್ತಾನೆ. ಆರನೆಯ ದಿನ ಕಾತ್ಯಾಯನಿ ದುರ್ಗಿಯ ಆರಾಧನೆ ಮಾಡಲಾಗುತ್ತದೆ. ಮಹರ್ಷಿ ಕಾತ್ಯಾಯನರು ಭಗವತಿ ಪರಾಂಬಿಕೆಯ ಉಪಾಸನೆ ಮಾಡುತ್ತಾ ಅನೇಕ ವರ್ಷಗಳವರೆಗೆ ಕಠಿಣ ತಪಸ್ಸನ್ನಾಚರಿಸಿದರು. ಏಳನೆಯ ದಿನ ಕಾಲರಾತ್ರಿ ದುರ್ಗಿಯ ಆರಾಧನೆ ಮಾಡಲಾಗುತ್ತದೆ. ಕಾಲರಾತ್ರಿಯು ರಕ್ತಬೀಜಾಸುರನನ್ನು ಸಂಹಾರ ಮಾಡಿದಳು. ಭಯಂಕರ ಸ್ವರೂಪಳಾಗಿದ್ದರೂ ಅತ್ಯಂತ ಶುಭಫಲವನ್ನೇ ಕೊಡುವವಳು. ಎಂಟನೆಯ ದಿನ ಮಹಾಗೌರಿಯನ್ನು ಆರಾಧಿಸಬೇಕು. ಪಾರ್ವತಿಯು ಚಿಕ್ಕವಳಿದ್ದಾಗ ಗೌರವರ್ಣದವಳಾಗಿದ್ದಳು. ಶಿವನನ್ನು ಪಡೆಯಲು ಕಠೋರ ತಪಸ್ಸನ್ನು ಆಚರಿಸಿದಾಗ ಅವಳ ಬಣ್ಣ ಭಾಸಿತ್ತು. ಶಿವನು ಇವಳ ತಪಸ್ಸಿಗೆ ಮೆಚ್ಚಿ ಇವಳ ಶರೀರವನ್ನು ಗಂಗೆಯ ಪವಿತ್ರ ಜಲದಿಂದ ಚೆನ್ನಾಗಿ ತೊಳೆದಾಗ ಅದು ವಿದ್ಯುತ್ತಿನಂತೆ ಅತ್ಯಂತ ಪ್ರಕಾಶಮಾನವಾಗಿ ಬೆಳ್ಳಗಾಯಿತು. ಆಗಿನಿಂದ ಇವಳ ಹೆಸರು ಗೌರಿಯಾಯಿತು. ನವರಾತ್ರಿಯ ಒಂಭತ್ತನೆಯ ದಿನ ಸಿದ್ಧಿದಾತ್ರಿ ದುರ್ಗಿಯನ್ನು ಆರಾಧಿಸಬೇಕು. ಸೃಷ್ಟಿ ಆರಂಭದಲ್ಲಿ ಮಹಾದೇವನು ಸೃಷ್ಟಿಯ ಕಾರ್ಯಕ್ಕಾಗಿ ಆದಿಶಕ್ತಿಯನ್ನು ಕುರಿತು ತಪಸ್ಸು ಮಾಡಿದನು. ಆದಿಶಕ್ತಿಗೆ ಯಾವ ಆಕಾರವೂ ಇರಲಿಲ್ಲ. ಶಿವನ ತಪಸ್ಸಿಗೆ ಅವಳು ಸಿದ್ಧಿಧಾತ್ರಿಯ ರೂಪದಲ್ಲಿ ಶಿವನ ವಾಮ ಭಾಗದಿಂದ ಆವಿರ್ಭವಿಸಿದಳು, ಶಿವನು ಅರ್ಧನಾರೀಶ್ವರನೆನಿಸಿದನು.

### 3. ನವರಾತ್ರಿಯಂದು ಗೊಂಬೆ ಕೂರಿಸಲು ಕಾರಣವೇನು?

**ಉತ್ತರ :** ನವರಾತ್ರಿಯ ಪಾಡ್ಯದಿಂದ ನವಮಿಯವರೆಗೆ ಗೊಂಬೆಗಳನ್ನು ಕೂರಿಸಿ ಪೂಜಿಸುತ್ತಾರೆ. ಪಾಡ್ಯದ ದಿನ ಕಲಶ ಇಟ್ಟು ಪೂಜೆ ಪ್ರಾರಂಭಿಸಬೇಕು. ಪ್ರತಿದಿನ ಎರಡು ಹೊತ್ತು ಗೊಂಬೆಗೆ ಆರತಿ ಮಾಡಿ ಮಕ್ಕಳಿಗೆ ಗೊಂಬೆ ಬಾಗಿನ ಕೊಡುವುದು ಸಂಪ್ರದಾಯ. ದೇವಿಯು ಮಹಿಷಾಸುರನನ್ನು ಸಂಹಾರ ಮಾಡಲು ಶಕ್ತಿ ಸಾಲದಾದಾಗ ದೇವತೆಗಳು, ತ್ರಿಮೂರ್ತಿಗಳು ತಮ್ಮ ಶಕ್ತಿಯನ್ನೆಲ್ಲಾ ದೇವಿಗೆಧಾರೆ ಎರೆಯುತ್ತಾರೆ. ದೇವತೆಗಳು ಗೊಂಬೆಗಳ ರೂಪದಲ್ಲಿದ್ದು ಅವಳಿಗೆ ಶಕ್ತಿ ತುಂಬುತ್ತಾರೆ ಎನ್ನುವ ಸಂಕೇತವಾಗಿ ಗೊಂಬೆ ಕೂರಿಸುವ ಪದ್ಧತಿ ಜಾರಿಗೆ ಬಂದಿದೆ. ಈ ಗೊಂಬೆ ಹಬ್ಬದಿಂದ ಮಕ್ಕಳಿಗೆ ನಮ್ಮ ಸಂಸ್ಕೃತಿಯ ಅರಿವು ಮಾಡಲು ಸಾಧ್ಯವಾಗುತ್ತದೆ. ವಿಜಯದಶಮಿಯಂದು ಗೊಂಬೆಗಳನ್ನು ಕದಲಿಸಿ ಎತ್ತಿಡುತ್ತಾರೆ.



# ಸ್ನೇಹ ಬಯಸಿದವರಿಗೆ ಮೋಸ ಮಾಡಬಾರದು

- ಎ.ಆರ್. ರಘುರಾಮ
9916138436

ಒಂದು ಕೆರೆ ಸಮೀಪ ಗಂಡು ಮತ್ತು ಹೆಣ್ಣು ಇಲಿಗಳು ವಾಸವಾಗಿದ್ದವು. ಒಂದು ದಿನ ನರಿಯೊಂದು ಇಲಿಗಳನ್ನು ಪರಿಚಯ ಮಾಡಿಕೊಂಡಿತು. ನಿತ್ಯವೂ ಮಾತನಾಡಿಸುತ್ತಿದ್ದ ಕಾರಣ ನರಿರಾಯನ ಸಂಗಡ ಇಲಿಗಳ ಸ್ನೇಹ ಬೆಳೆಯಿತು. ಒಂದು ದಿನ ನರಿ ಹೇಳಿತು.

ಇಲಿ ದಂಪತಿಗಳೇ ನಿತ್ಯವೂ ಕೇವಲ ನಿಮ್ಮ ಆಹಾರ ಸಂಗ್ರಹಣೆಗೇ ಸಮಯ ಕಳೆಯುತ್ತೀರಿ. ನಂತರ ಬಿಲದಲ್ಲಿ ಸೇರಿ ಬಿಡುತ್ತೀರಿ, ನಿಮಗೆ ಹೊರ ಜಗತ್ತು ಹೇಗಿದೆ ಎಂದು ಗೊತ್ತೇ ಇಲ್ಲ. ನನ್ನ ಸಂಗಡ ನಿತ್ಯವೂ ಕೆಲ ಸಮಯ ವಾಯು ವಿಹಾರಕ್ಕೆ ಬನ್ನಿ. ನಮ್ಮ ಕೆರೆ ಸುತ್ತಮುತ್ತವಾದರೂ ಏನಿದೆ ಎಂದು ತಿಳಿಯಿರಿ ಎಂಬ ಸಲಹೆ ಕೊಟ್ಟಿತು. ಪಾಪ, ಇಲಿಗಳು ಈ ಮಾತನ್ನು ನಂಬಿದವು. ಎರಡು ದಿನ ವಾಯು ವಿಹಾರ ನಡೆಯಿತು.

ಮಾರ್ಗಮಧ್ಯೆ ಸಿಕ್ಕ ಪಕ್ಷಿ, ಪ್ರಾಣಿಗಳನ್ನು ನರಿ ಪರಿಚಯ ಮಾಡಿಕೊಟ್ಟಿತು. ಇಲಿಗಳು ಖುಷಿಯಾದವು. ಒಂದು ದಿನ ನರಿ ಕೇಳಿತು, ನಿಮಗೆ ಇಂದು ಹಾವಿನ ಪರಿಚಯ ಮಾಡಿಕೊಡುತ್ತೇನೆ. ಅದು ತುಂಬಾ ಒಳ್ಳೆಯದು ಎಂದು ವಿವರ ಹೇಳಿತು. ಇಲಿಗಳು ಸಹಜವಾಗಿಯೇ ಭಯಗೊಂಡವು. ಬೇಡಪ್ಪಾ ಬೇಡ, ಸರ್ಪದ ಸಹವಾಸ ಎಂದವು. ಆದರೂ ನರಿ ತನ್ನ ಬುದ್ಧಿ ಬಿಡಲಿಲ್ಲ. ನಿಮಗೆ ಕೇವಲ ಬಿಲದ ಜೀವನ ಮಾತ್ರ ಗೊತ್ತು. ಹೆದರಬೇಡಿ, ನಾನಿದ್ದೇನೆ ಎಂದು ಭರವಸೆ ನೀಡಿತು. ವಾಯು ವಿಹಾರದ ಮಾರ್ಗಮಧ್ಯೆ ಹಾವಿನ ಹುತ್ತ ಸಿಕ್ಕಿತು.

ನರಿ ಜೋರಾಗಿ ಹಾವನ್ನು ಕೂಗಿ ಕರೆಯಿತು. ಹುತ್ತದೊಳಗೆ ಹಸಿವೆಯಿಂದ ಮಲಗಿದ್ದ ಹಾವು ಮೇಲೆ ಬಂತು. ನರಿರಾಯ ಈ ಎರಡೂ ಇಲಿಗಳ ಪರಿಚಯ ಮಾಡಿಕೊಟ್ಟ ನಿನ್ನ ಮಿತ್ರತ್ವ ಅರಸಿ ಬಂದಿದ್ದಾರೆ ಎಂದು ಪೀಠಿಕೆಯನ್ನೂ ನೀಡಿತು.


ಇಲಿಗಳ ಪರಿಚಯವಾದ ನಂತರ ಹಾವಿಗೆ ಮಿತ್ರಭಾವ ಬರಲೇ ಇಲ್ಲ. ಬದಲಾಗಿ ಬಾಯಲ್ಲಿ ನೀರೂರಿತು. ಗಬಕ್ಕನೆ ಒಂದು ಇಲಿಯನ್ನು ಹಿಡಿದು ನುಂಗೇ ಬಿಟ್ಟಿತು! ಇನ್ನೊಂದು ಇಲಿ ಗಾಬರಿಗೊಂಡು ಓಡಿ ಹೋಯಿತು. ನರಿ ಬಗ್ಗೆ ಅತೀವ ಕೋಪ ಬಂತು,ಸಣ್ಣ ಬುದ್ಧಿಯ ಜನರ ಮಿತ್ರತ್ವ ಮಾಡಿಕೊಂಡರೆ ಅಪಾಯ ಎಂದು ಅರ್ಥವಾಯಿತು. ಆದರೆ ತನ್ನ ಸಂಗಾತಿಯನ್ನು ಕಳೆದುಕೊಂಡ ಬೇಸರ ಕಾಡುತ್ತಿತ್ತು.

ದುಷ್ಟ ಹಾವಿಗೆ ಬುದ್ಧಿ ಕಲಿಸಲು ಇಲಿ ನಿರ್ಧರಿಸಿತು. ಕೆರೆಯ ಪಕ್ಕದ ಕಾಡಿನಲ್ಲಿ ಮುಂಗುಸಿಯನ್ನು ಇಲಿ ಭೇಟಿ ಮಾಡಿತು. ತನ್ನ ಸಂಗಾತಿಯನ್ನು ಹಾವು ತಿಂದು ಹಾಕಿದ ಕಥೆ ಹೇಳಿತು, ಆಗ ಮುಂಗುಸಿ ಆಳಬೇಡ, ನಾನಿದ್ದೇನೆ. ಆ ಹಾವು ಯಾವ ಹುತ್ತದಲ್ಲಿದೆ ಎಂದು ನನಗೆ ತಿಳಿಸು ಎಂದಿತು. ಇಲಿಯು ಹುತ್ತದ ಸಮೀಪ ಮುಂಗುಸಿಯನ್ನು ಕರೆ ತಂದಿತು. ಸ್ವಲ್ಪ ಹೊತ್ತಿನ ನಂತರ ಹಾವು ಆಹಾರ ಅರಸಲು ಹೊರ ಬಂತು, ಇಲಿಯನ್ನು ಕಂಡ ಕೂಡಲೇ ಬೆನ್ನಟ್ಟಿ ಬಂತು.

ಹಸಿವಿನ ಭರದಲ್ಲಿ ಅದಕ್ಕೆ ಮುಂಗುಸಿ ಕಾಣಲೇ ಇಲ್ಲ. ಅಲ್ಲೇ ಇದ್ದ ಮುಂಗುಸಿ ಹಾವನ್ನು ಗಟ್ಟಿಯಾಗಿ ಹಿಡಿಯಿತು. ಸ್ನೇಹ ಬಯಸಿ ಬಂದ ಇಲಿಯನ್ನು ಅಂದು ಕೊಂದುಹಾಕಿದ್ದು ನೀತಿಯಲ್ಲ. ಅದಕ್ಕೆ ಈಗ ತಕ್ಕ ಶಾಸ್ತಿ ಅನುಭವಿಸು ಎಂದು ಹೇಳಿತು.

ಈ ಕತೆಯಿಂದ ನಮಗೆ ತಿಳಿದು ಬರುವ ನೀತಿ ಏನೆಂದರೆ ಯಾರನ್ನೇ ಆಗಲಿ, ಮಿತ್ರತ್ವ ಮಾಡಿಕೊಳ್ಳುವ ಮುನ್ನ ಚಿಂತನೆ ಮಾಡಬೇಕು. ಮೋಸಗಾರ ನರಿಯಂಥವರು, ದ್ರೋಹ ಎಸಗುವ ಹಾವಿನಂಥ ಜನರು ಇದ್ದೇ ಇರುತ್ತಾರೆ ಹಾಗಾಗಿ ಜಾಗೃತಿ ಸದಾ ಅಗತ್ಯ.

## ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....




### ಬಣ್ಣವನ್ನು ತುಂಬಿರಿ.










ಮೇಲೆ ಹೇಳಿರುವ ಹಬ್ಬ ಹರಿದಿನಗಳಿಗೆ ಸಂಬಂಧಿಸಿದ ಚಿತ್ರದ ಹತ್ತಿರವಿರುವ ರೌಂಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ

1.ದೀಪಾವಳಿ

2.ಸರಸ್ವತಿ ಹಬ್ಬ

3.ಗೊಂಬೆಗಳ ಹಬ್ಬ

ಮಕ್ಕಳೇ ಇದರಲ್ಲಿರುವ ಯಾವುದೇ ಸಂಖ್ಯೆಯನ್ನು ಕೂಡಿದರೂ 10 ಬರಬೇಕು ಹಾಗೂ ವ್ಯವಕಲನ ಮಾಡಿದರೂ 10 ಬರಬೇಕು ಸಹೋದರಿ ಯಾವ ಹಾದಿಯಲ್ಲಿ ಹೋಗಿ ಅಣ್ಣನಿಗೆ ರಾಖೀಯನ್ನು ಕಟ್ಟಲು ದಾರಿ ತೋರಿಸಿ.

| | | | | | | | |
|---|---|---|---|---|---|---|---|
| 5 +5 | 11 −2 | 10 −1 | 2 +8 | 23 −10 | 16 −6 | 12 +5 | 28 −3 |
| 15 −5 | 7 +2 | 19 −10 | 19 −9 | 14 −4 | 72 −62 | 48 −38 | 19 −2 |
| 6 +4 | 25 −15 | 32 −22 | 18 −8 | 35 −20 | 36 −27 | 1 +9 | 39 −2 |
| 7 +2 | 27 −17 | 4 +6 | 13 −3 | 22 −12 | 25 −16 | 3 +7 | 0 +10 |

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಇ ತ್ತ ಯ ಮಾ ಕೆ ಪ್ಪ ಕ್ಕೆ ಮ್ಮ ಡಿ ಬಾ

ದು ಯ ರ ಹಿ ಕೆ ತ್ತ ಎ ನಿ ಜ ಕ್ಕೆ ಪ್ಪ

# ರಸ ಪ್ರಶ್ನೆ

01.ಶ್ರೀಪಾದರಾಜರ ಶಿಷ್ಯ ಯಾರು?......................................................................................

02.ದಸರಾ ಹಬ್ಬದಂದು ಏನು ಪ್ರಸಿದ್ಧವಾದುದು?..........................................................................

03.ವೆಂಕಟಾದ್ರಿಯಲ್ಲಿ ನೆಲೆಸಿರುವರು ಯಾರು? ..........................................................................

04.ಅನ್ನಮಯ್ಯನ ತಂದೆ ತಾಯಿ ಹೆಸರೇನು? ..............................................................................

05.ತ್ಯಾಗರಾಜರ ಮೊದಲ ಕೃತಿ ಯಾವುದು?................................................................................

06.ಯಾವ ರಾಜ್ಯದ ಗಡಿ ಭಾಗದಲ್ಲಿ ಹರಿದಾಸರನ್ನು ಹೆಚ್ಚಾಗಿ ಕಾಣಬಹುದು?...........................................

07.ಆದಿನಾರಾಯಣನ ವಿಗ್ರಹದ ಎತ್ತರ ಎಷ್ಟು ? ...........................................................................

08.ಅಹಲ್ಯೆಯು ಯಾವ ರೂಪದಿಂದ ಶಾಪ ವಿಮೋಚನೆ ಪಡೆದರು?.........................................................

09.ಎಷ್ಟು ದಿನಗಳ ಕಾಲ ದೇವಿ ಉತ್ಸವಗಳು ನಡೆಯುತ್ತವೆ?..............................................................

10.ಅಲಿಪಿರಿಯನ್ನು ತಮಿಳಿನಲ್ಲಿ ಏನೆಂದು ಕರೆಯುತ್ತಾರೆ? ...............................................................

11.ಹುಲುಗಿನ ಮುರಡಿ ದೇವಾಲಯ ಎಲ್ಲಿದೆ? .............................................................................

12.ಬ್ರಹ್ಮೋತ್ಸವಗಳು ಎಷ್ಟು ದಿನಗಳು ನಡೆಯುತ್ತದೆ? .....................................................................

13. ಯಾರು ಮನುಷ್ಯರನ್ನು ಪೀಡಿಸುತ್ತಿದ್ದರು?.................................................................................

14.ಇಲಿಗಳನ್ನು ಯಾರು ಮೋಸ ಮಾಡಿದರು? ..............................................................................

15.ಗರುತ್ಮಂತನು ಯಾರಿಗೆ ವಾಹನ? ......................................................................................

## ಸೂಚನೆಗಳು

27 ಕ್ವಿಜ್

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್


ಹೆಸರು :
ಚಂದಾ ಸಂಖ್ಯೆ :
ತಂದೆಯ ಹೆಸರು :
ತಾಯಿಯ ಹೆಸರು:

ವಿಳಾಸ :

ದೂರವಾಣಿ ಸಂಖ್ಯೆ:



ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ




- ತಿರುಮಲೆಯ ಬ್ರಹ್ಮೋತ್ಸವ ನಡೆಯುವ ಮಾಸ ?
- ಶ್ರೀ ವೆಂಕಟೇಶ್ವರ ಸ್ವಾಮಿಯವರ ಜನ್ಮ ನಕ್ಷತ್ರ?
- ಬ್ರಹ್ಮೋತ್ಸವದಲ್ಲಿ 5 ನೇ ದಿನ ನಡೆಯುವ ವಾಹನಸೇವೆ?
- ವೆಂಕಟೇಶ್ವರ ಸ್ವಾಮಿಗೆ ಹೂಮಾಳೆಯನ್ನು ಯಾರು ಕಳುಹಿ ಸುತ್ತಾರೆ?
- ತಿರುಮಲೆಯಲ್ಲಿ ಎಷ್ಟು ಬೆಟ್ಟಗಳಿವೆ?
- ವೆಂಕಟೇಶ್ವರ ಸ್ವಾಮಿಯವರ ತಾಯಿಯ ಹೆಸರೇನು?
- ವೆಂಕಟೇಶ್ವರ ಸ್ವಾಮಿಯವರ ಪ್ರಧಾನವಾದ ಪ್ರಸಾದ ಯಾವುದು?
- ತಿರುಮಲೆ ಆಲಯ ಯಾರ ಅಧೀನ ದಲ್ಲಿದೆ?



1)ಪುರಟಾಸಿ 2)ಶ್ರವಣ 3)ಗರುಡ 4)ಆಂಡಾಳ್ 5)ಏಳು 6)ವಕುಳಮಾತೆ 7) ಲಡ್ಡು 8)ತಿ.ತಿ.ದೇ.,

ಮಕ್ಕಳೇ ಈ ಕೆಳಗಿನ ಚಿತ್ರವನ್ನು ನೋಡಿ ಹೆಸರನ್ನು ಕಂಡು ಹಿಡಿಯಿರಿ






1. ಹಿಮಾಲಯ
2. ನಕ್ಷತ್ರ ಮಂಡಲ





ಚಿತ್ರಗಳನ್ನು ಜೋಡಿಸಿ. ಕಥೆಯನ್ನು ಅರ್ಥ ಮಾಡಿಕೊಂಡು ನೀತಿಯನ್ನು ತಿಳಿದು ಕೊಳ್ಳಿ.

ಮೋಸಕ್ಕೆ ಪ್ರತಿ ಮೋಸ


# ಗರುಡನ ಗರ್ವಭಂಗ

ಚಿತ್ರಕಥೆ


ಕಥೆ: ತೆಲುಗು ಮೂಲ : ಶ್ರೀಮತಿ ವಿ.ನಾಗವಲ್ಲಿ
ಅನುವಾದ : ಆರ್.ಕೆ.ವಿ.
ಚಿತ್ರಗಳು : ಕೆ. ದ್ವಾರಕನಾಥ್


ಗರುತ್ಮಂತನು ತನ್ನ ತಾಯಿ ವಿನತೆಯನ್ನು ತನ್ನ ತಾಯಿಯನ್ನು ದಾಸ್ಯದಿಂದ ಮುಕ್ತಗೊಳಿಸಿದನು. ಆ ನಂತರ ವಿಷ್ಣುವಿಗೆ ವಾಹನ ವಾದರು. ಆ ಕ್ಷಣದಲ್ಲಿ ಅವನು ಹೆಮ್ಮೆಯಿಂದ ಸಿಡಿದೆದ್ದನು. ವಿಷ್ಣು ಅವರಿಗೆ ಪಾಠ ಕಲಿಸಿದರು. ಅದನ್ನು ನೋಡೋಣ. ಗರುತ್ಮಂತನು ತನ್ನ ತಂದೆ ಕಶ್ಯಪನೊಂದಿಗೆ.....






ನೀತಿ : ಯಾವುದೇ ಸಂದರ್ಭದಲ್ಲೂ ನೀವು ಅಹಂಕಾರದಿಂದ ಕುರುಡಾಗಬಾರದು ಮತ್ತು ಯಾರನ್ನೂ ಕೀಳಾಗಿ ನೋಡಬಾರದು. ಹಾಗೆ ಮಾಡಿದರೆ ನೀವು ದೇವರ ದೃಷ್ಟಿಯಲ್ಲಿ ನಿಮ್ಮನ್ನು ನೀವು ಕಳೆದುಕೊಳ್ಳುತ್ತೀರ. ಇತರರನ್ನು ಗೌರವಿಸಿ ಅವರಿಂದ ಗೌರವಾನ್ವಿತ ರಾಗಿರಿ.

## ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./

ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಅನ್‌ಲೈನ್‌ಗಾಗಿ (https://ttdevasthanams.ap.gov.in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸು ವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ ಪ್ರೆಸ್. ಎರಡನೇ ಅಂತಸ್ತು, ಕೆ. ಟಿ.ರೋಡ್ಡು,ತಿರುಪತಿ - 517507.

**ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543**

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507.
Editor : Dr. V. G. Chokkalingam, M.A., Ph.D.



ತಿರುಮಲೆ, ಶ್ರೀವೆಂಕಟೇಶ್ವರ ಸ್ವಾಮಿಯವರಿಗೆ 15-08-2024 ರಿಂದ 17-08-2024 ರ ವರೆಗೆ ಅತ್ಯಂತ ವೈಭವವಾಗಿ ನಡೆದ ಪವಿತ್ರೋತ್ಸವಗಳು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ, ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ದಂಪತಿಗಳು ಮತ್ತು ತಿ.ತಿ.ದೇ., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ, ಶ್ರೀ ಸಿ.ಹೆಚ್. ವೆಂಕಯ್ಯ ಚೌದರಿ, ಐ.ಆರ್.ಎಸ್., ಮತ್ತು ಅರ್ಚಕರು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



16-08-2024 ರಂದು ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರಿಗೆ ಅತ್ಯಂತ ವೈಭವವಾಗಿ ನಡೆದ ಶ್ರೀ ವರಲಕ್ಷ್ಮೀ ವ್ರತದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ, ಶ್ರೀ ಜೆ.ಶ್ಯಾಮಲರಾವ್, ಐ.ಎ.ಎಸ್., ದಂಪತಿಗಳು.



ತಿರುಪತಿ, ಶ್ರೀ ವೆಂಕಟೇಶ್ವರ ಗೋಸಂರಕ್ಷಣೆ ಶಾಲೆಯಲ್ಲಿರುವ ಶ್ರೀವೇಣುಗೋಪಾಲ ಸ್ವಾಮಿಯವರ ಆಲಯದಲ್ಲಿ 27-08-2024 ರಂದು ನಡೆದ ಗೋಕುಲಾಷ್ಟಮಿ ಗೋಪೂಜೆಯಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್ ಐ.ಎ.ಎಸ್., ದಂಪತಿಗಳು ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ. ಎಮ್. ಗೌತಮಿ ಐ.ಎ.ಎಸ್., ಮತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯದಲ್ಲಿ 30-08-2024 ರಂದು ನಡೆದ ಶ್ರೀ ಕಾಮಾಕ್ಷಿ ಅಮ್ಮನವರಿಗೆ ಲಕ್ಷಕುಂಕುಮಾರ್ಚನೆ ವೈಭವವಾಗಿ ನಡೆಯಿತು.



ತಿರುಪತಿ, ತಿ.ತಿ.ದೇ., ಆಡಳಿತ ಭವನದ ಮೈದಾನದಲ್ಲಿ 15-08-2024 ರಂದು ನಡೆದ ಸ್ವಾತಂತ್ರ್ಯ ದಿನೋತ್ಸವದ ಸಂದರ್ಭದಲ್ಲಿ ಗೌರವ ಕವಾಯಿತು ವಂದನೆಯನ್ನು ಸ್ವೀಕರಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ, ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ಮತ್ತು ತಿ.ತಿ.ದೇ., ಮುಖ್ಯವಿಜಿಲೆನ್ಸ್ ಮತ್ತು ಭದ್ರತಾಧಿಕಾರಿ ಶ್ರೀ ಎಸ್. ಶ್ರೀಧರ್, ಐ.ಪಿ.ಎಸ್., ರವರು




ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯದಲ್ಲಿ 07-09-2024 ರಂದು ಗಣೇಶ ಚತುರ್ಥಿ ಸಂದರ್ಭದಲ್ಲಿ ಮೂಷಿಕ ವಾಹನದಲ್ಲಿ ಶ್ರೀ ಗಣೇಶ ಸ್ವಾಮಿಯವರ ಮೆರವಣಿಗೆ

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-09-2024 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment No. PMGK/RNP/WPP-04(6)/ 2024-2026" Posting on 5th of Every Month.

